## ಹೊಸ ಶತಮಾನಕ್ಕೆ
## ಹೊಸ ಪರಿಭಾಷೆಗಳು

*ಡಿಕ್ಷನರಿಗಳಲ್ಲಿ ಅನೇಕ ಪರಿಯ ಡಿಕ್ಷನರಿಗಳಿರುವುದುಂಟು. ಬಹುಪಾಲು ಡಿಕ್ಷನರಿಗಳು ಪದ - ಅರ್ಥಗಳ ಕೋಶಗಳಾಗಿದ್ದರೆ ಇನ್ನು ಕೆಲವು ನುಡಿಗಟ್ಟು - ಉಕ್ತಿ - ಉಲ್ಲೇಖಗಳ ಸಂಗ್ರಹವೊ ಪ್ರಸಂಗ - ಸನ್ನಿವೇಶಗಳ ಸಂಗ್ರಹವೊ ಆಗಿರುವುದುಂಟು. ಕೆಲವು ಕೋಶಗಳು ಸರ್ವಜನಸಾಮಾನ್ಯಭಾಷೆಗೆ ಸಂಬಂಧಿಸಿರುವಂಥವಾದರೆ, ಇನ್ನು ಕೆಲವು ತಜ್ಞ ಜನಪರಿಭಾಷೆಗೆ ಸೀಮಿತವಾಗಿರುತ್ತವೆ. ಕೆಲವು ಅರ್ಥಕೋಶಗಳು ಶಾಸ್ತ್ರಗಂಭೀರ ಭಾಷ್ಯದ ಶೈಲಿಯಲ್ಲಿ ಮಾತನಾಡಿದರೆ, ಇನ್ನು ಕೆಲವು (ಅನರ್ಥ) ಕೋಶಗಳು ವೈನೋದಿಕ ಲಾಸ್ಯದ ಧಾಟಿಯಲ್ಲಿ ಮಾತನಾಡುತ್ತವೆ. ಇವುಗಳ ನಡುವೆ ಕೆಲವು — ಅಪರೂಪದ — ಕೋಶಗಳು ಪದಗಳ ಚರಿತ್ರೆಯ ಆಖ್ಯಾನಗಳನ್ನು ಹೇಳುತ್ತ ಹೇಳುತ್ತ ಅವುಗಳ ಚರಿತವನ್ನು ವ್ಯಾಖ್ಯಾನಿಸುವುದೂ ಉಂಟು. ಇಂತಹ ಅತ್ಯಪರೂಪದ ಡಿಕ್ಷನರಿಯೊಂದು ಇತ್ತೀಚೆಗೆ ಪ್ರಕಟವಾಗಿದೆ. ಇದು 'ದ ಫ್ಯೂಚರ್ ಆಫ್ ನಾಲೆಜ್ ಆ್ಯಂಡ್ ಕಲ್ಚರ್: ಎ ಡಿಕ್ಷನರಿ ಫಾರ್ ದ ಟ್ವೆಂಟಿಫಸ್ಟ್ ಸೆಂಚುರಿ' (ಸಂ: ವಿನಯ ಲಾಲ್ ಮತ್ತು ಆಶೀಶ್ ನಂದಿ; ೨೦೦೫: ಪೆಂಗ್ವಿನ್ ವೈಕಿಂಗ್). ಈ ಅಪೂರ್ವ ಕೋಶ ನಮ್ಮ ಕಾಲ-ದೇಶಗಳ ಕೆಲವು ಮುಖ್ಯ ಪದ - ಪದಾರ್ಥ - ಪರಿಕಲ್ಪನೆ - ಪ್ರಕ್ರಿಯೆಗಳ ಕಥೆಯನ್ನು ಹೇಳುತ್ತ ಅವುಗಳ ಹಿಂದಿನ ಸೂಕ್ಷ್ಮ ರಾಜಕಾರಣವನ್ನು ಅನಾವರಣಗೊಳಿಸುತ್ತದೆ ಕೂಡ; ಆ ಮೂಲಕ ಅರ್ಥಕಾರಣ, ಜ್ಞಾನಕಾರಣಗಳ ವಿವಿಧ ಅಪರಿಚಿತ ಆಯಾಮಗಳನ್ನು ಕುರಿತು ಅಸಾಧಾರಣವಾದ ಒಳನೋಟಗಳನ್ನು ನೀಡುತ್ತದೆ ಕೂಡ. ಮಾತುಕತೆಯ ಹಿಂದಿನ ಎರಡು ಸಂಚಿಕೆಗಳಲ್ಲಿ ಈ ಗ್ರಂಥದಿಂದ ಆಯ್ದ ಕೆಲವು ಲೇಖನಗಳ ಅನುವಾದವನ್ನು ಪ್ರಕಟಿಸಿದ್ದೆವು. ಇಲ್ಲಿ ಇಂಥದ್ದೆ ಇನ್ನೂ ಮೂರು ಅನುವಾದಗಳನ್ನು ನೀಡುತ್ತಿದ್ದೇವೆ. ಮೇಲಿನ ಗ್ರಂಥದ ಆಯ್ದ ಲೇಖನಗಳ ಸಂಕಲನವೊಂದನ್ನು 'ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು' ಎಂಬ ಹೆಸರಿನಲ್ಲಿ ಅಕ್ಷರ ಪ್ರಕಾಶನವು ಸದ್ಯದಲ್ಲಿಯೆ ಪ್ರಕಟಿಸಲಿದೆ.*

# ಭೂಪಟಗಳು

ಶಂಕರನ್ ಕೃಷ್ಣ
ಕನ್ನಡಕ್ಕೆ: ಜಸವಂತ ಜಾಧವ್

'ಭೂಪಟಗಳ ರಾಜಕಾರಣ'ದ ಕುರಿತಾದ ಪ್ರಬಂಧವಿದು ಎಂದಾಕ್ಷಣ, ಈ ಲೇಖನ ಭೂಪಟಗಳ ಹಾಗೂ ಅವುಗಳ ರಾಜಕಾರಣದ ಬಗ್ಗೆ ಸರ್ವಾವಲೋಕನಶಕ್ತ ದೃಷ್ಟಿಯನ್ನೂ ಸರ್ವಾಂಶಸಂಕಲನ ಸಾಮರ್ಥ್ಯವನ್ನೂ ಹೊಂದಿರುವ ವಿವರಣೆಯನ್ನು ನೀಡುವಂಥದಾಗಿರುತ್ತದೆ ಎಂಬ ನಿರೀಕ್ಷೆ ಮೂಡುವುದು ಬಹುಸಹಜವೆ. ಆದರೆ ಅಂಥ ಕಾರ್ಯ ದೈತ್ಯಾಕಾಂಕ್ಷೆಯದ್ದೂ ಮತ್ತು ತುಸು ಸ್ವಪ್ರಾಮುಖ್ಯಭ್ರಮೆಯ ಗುಣವುಳ್ಳದ್ದೂ ಆದ್ದರಿಂದ ಅದಕ್ಕೆ ಕೈಹಾಕುವ ಬದಲು ನಾನಿಲ್ಲಿ, ಕಳೆದ ಕೆಲವು ಶತಮಾನಗಳ ಅವಧಿಯಲ್ಲಿ, ವಿಶೇಷವಾಗಿ ಕೊಲಂಬಸ್ ಅಟ್ಲಾಂಟಿಕ್ ಸಾಗರವನ್ನು ದಾಟಿದ ವರ್ಷವಾದ ೧೪೯೨ರಿಂದ ಪ್ರಾರಂಭವಾಯಿತೆಂದು ನಾನು ತಿಳಿಯುವ ಆಧುನಿಕತೆಯ ನಿರ್ದಿಷ್ಟವಾದೊಂದು ಅವತಾರದ ಅವಧಿಯಲ್ಲಿ ಬೆಳೆದುಬಂದ ಭೂಪಟಗಳ ಕಥೆಯ ಕೆಲವು ಆಯಾಮಗಳತ್ತ ಮಾತ್ರ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದೇನೆ.

ಭೂಪಟಗಳನ್ನು ವಿನ್ಯಾಸಗೊಳಿಸುವುದು ಮತ್ತು ವ್ಯಾಖ್ಯಾನಿಸುವುದು ಎರಡೂ ಕೂಡ ಪ್ರತಿನಿಧೀಕರಣದ ಪದ್ಧತಿಗಳಾಗಿವೆ. ಭೂರೂಪವನ್ನು ಹೀಗೆ ಪಟರೂಪದ ಮೂಲಕ ಪ್ರತಿನಿಧಿಸುವ ಭೂಪಟಕರ್ತೃಗಳಿಗೆ ತಮ್ಮ ಕೃತಿಗಳ ಬಗ್ಗೆ ಎಂತಹ ಅಸೀಮವಾದ ನಂಬುಗೆಯಿರುತ್ತದೆಯೆಂದರೆ, ಪಟರೂಪವು ಎಲ್ಲ ಅಂಶಗಳಲ್ಲೂ ಭೂರೂಪದ ತದ್ವತ್ ಪ್ರತಿಕೃತಿಯೆ ಆಗಿರುತ್ತದೆಯೆಂದು ಅವರು ತಿಳಿಯ ಬಯಸುತ್ತಾರೆ; ಅಷ್ಟೆ ಅಲ್ಲ, ಆ ತಿಳುವಳಿಕೆಯಲ್ಲಿ ಕೊನೆಗೆ, ಪ್ರತ್ಯಾಕೃತಿಗಳು ವಾಸ್ತವಾಕೃತಿಗಿಂತಲೂ ಮಿಗಿಲಾಗುವ, ಮತ್ತು ಅದರ ಸ್ಥಾನ-ಮಾನಗಳನ್ನು ತಾವೆ ಆಕ್ರಮಿಸಿಕೊಳ್ಳುವ ಒಂದು ಘಟ್ಟವೂ ಬಂದುಹೋಗುತ್ತದೆ. ಆದರೆ ಕುತೂಹಲದ ಸಂಗತಿಯೆಂದರೆ, ಪಟಕರ್ತರು ಪಟರೂಪ ಮತ್ತು ದಿಟರೂಪಗಳ ನಡುವೆ ಇಂಥದೊಂದು ಪರಮ ರೂಪಸಾಮ್ಯವನ್ನು ಕಲ್ಪಿಸಿಕೊಳ್ಳುತ್ತಾರಾದರೂ ಅವರು ತಮ್ಮ

ನಡುವೆಯೆ ತಮ್ಮದೆ ಶಾಸ್ತ್ರದ ವಿಧಾನಗಳ ವಿಷಯವಾಗಿಯೆ ಮತಸಾಮ್ಯವನ್ನು ಮಾತ್ರ ಹೊಂದಿಲ್ಲ. ಭೂಪಟಶಾಸ್ತ್ರದ ಇತಿಹಾಸ ಹಾಗೂ ಅದರ ವರ್ತಮಾನಗಳೆ ತೋರುವಂತೆ ಭೂಪಟಗಳ ರಚನಾಕ್ರಮದ ಯಾವೊಂದು ಅಂಶವೂ ವಾದ-ವಿವಾದಗಳಿಂದ ಮುಕ್ತವಾಗಿಲ್ಲ. ಪ್ರತಿನಿಧೀಕರಣದ ಎಲ್ಲ ಕ್ಷೇತ್ರಗಳಲ್ಲೂ ಆಗುತ್ತಿರುವಂತೆ ಇಲ್ಲೂ ಕೂಡ ಭೂಪಟಕರ್ತರು ತಮ್ಮ ಪಟವೆ ವಾಸ್ತವದ ಅಂತಿಮವೂ ಪರಿಪೂರ್ಣವೂ ಆದ ಪ್ರತಿಕೃತಿರೂಪವೆಂದು ಅನ್ಯ ಭೂಪಟ ಕರ್ತರೊಡನೆ ಉದ್ದಕ್ಕೂ ಕಾದಾಡುತ್ತಿರುವುದುಂಟು; ತಮ್ಮ ಪಟರಚನೆಯ ವಿಧಾನಗಳೆ ಸರ್ವಶ್ರೇಷ್ಠವಾದುವೆಂದು ಸಾಧಿಸುತ್ತಿರುವುದುಂಟು. ಇಂತಹ ವಾದಸಾಧನೆ ಯಜಮಾನಿಕೆಯ ಮತ್ತು ದುರ್ವಿನಯದ ನಡವಳಿಕೆಯಲ್ಲದೆ ಬೇರೇನೂ ಅಲ್ಲ. ಭೂಪಟರಚನೆಯಷ್ಟೆ ಅಲ್ಲದೆ ಪ್ರತಿಕೃತಿನಿರ್ಮಾಣದ ಎಲ್ಲ ವಲಯಗಳಲ್ಲೂ ಕಂಡುಬರುವ ಈ ಸ್ವಾಮ್ಯಸ್ಥಾಪನೆಯ ನಿಲುವು, ಅಧಿಕಾರ/ಜ್ಞಾನಗಳು ತಮ್ಮದೆ ಮೀಸಲು ಎನ್ನುವ ಸೊಕ್ಕಿನ ನಿಲುವಲ್ಲದೆ ಮತ್ತೇನೂ ಅಲ್ಲ. ಹಾಗಾಗಿ, ಈ ನಿಲುವನ್ನು ಆಮೂಲಾಗ್ರವಾಗಿ ಆಕ್ಷೇಪಿಸಲೆಬೇಕು, ಪ್ರತಿರೋಧಿಸಲೆಬೇಕು.

ರಾಜಕೀಯ ನಕಾಶೆಗಳು ಸರ್ವೇಸಾಮಾನ್ಯವಾಗಿ ದೈವಾವಲೋಕನದ ಕ್ರಮದಲ್ಲಿ – ಅಂದರೆ ಎಲ್ಲಕ್ಕೂ ಮಿಗಿಲಾಗಿ ಮೇಲಾಗಿ ದೈವೀಶಕ್ತಿಯೊಂದು ಅಂತರಿಕ್ಷದಲ್ಲೆಲ್ಲೊ ಸ್ಥಿತವಾಗಿ ವಿಶ್ವವನ್ನೆಲ್ಲ ವೀಕ್ಷಿಸುತ್ತಿರುತ್ತದೆ ಎಂಬ ನಂಬಿಕೆಯೊಂದಿದೆಯಲ್ಲ, ಅಂಥ ದೈವದ ದೃಷ್ಟಿಕೋನದ ಕ್ರಮದಲ್ಲಿ – ರಚಿತವಾದಂಥವು. ಇಂತಹ ನಕಾಶೆಗಳ ಹಿಂದಿನ ಕಾಲದಲ್ಲಿದ್ದ ಮಾನವಾವಲೋಕನದ ಕ್ರಿಯೆ/ಪ್ರಕ್ರಿಯೆಗಳಲ್ಲಿ ಈ ಬಗೆಯ ವಿಶ್ವಸರ್ವೇಕ್ಷಕ ದೃಷ್ಟಿಕೋನವಿರಲಿಲ್ಲ. ಬದಲಿಗೆ, ಅಲ್ಲಿ ಹೆಚ್ಚು ಮಾನವವಿಶಿಷ್ಟವೂ ಮಾನವಸೀಮಿತವೂ ಆದೊಂದು ಕೋನವಿತ್ತು; ನೇರ ನಿಂತು ಸುತ್ತಮುತ್ತ ನೋಡುವ ಮನುಷ್ಯನೋರ್ವನ ಕಣ್ಣು ಯಾವ ಎತ್ತರ ಮತ್ತು ಕೋನಗಳಿಂದ ಭೂಮಿಯನ್ನು ನೋಡುತ್ತದೆಯೊ – ಅಂದರೆ ನೆಲದಿಂದ ಸುಮಾರು ಐದು ಅಡಿ ಎತ್ತರದಿಂದ – ಅದುವೆ ಆಗ ಮಾನವನ ಸಹಜ ಪರಿಪ್ರೇಕ್ಷ್ಯವಾಗಿತ್ತು. ಆಧುನಿಕತೆ ಬೆಳೆದಂತೆ ಇದು ಈಗಿನ ಭೂಪಟರಚನೆಯ ಕ್ರಮದಲ್ಲಿ ಕಂಡುಬರುವ ಸರ್ವೇಕ್ಷಕ ಪರಿಯಾಗಿ ಬದಲಾಯಿತು. ತತ್ತ್ವಜ್ಞಾನಿ ನೀತ್ಷೆ ಅಧಿಕೃತವಾಗಿ ದೇವರ ಸಾವನ್ನು ಘೋಷಿಸಿದ್ದು ೧೯ನೆಯ ಶತಮಾನದಲ್ಲಿ; ಆದರೆ ಅದಕ್ಕೆ ಬಹು ಮೊದಲೆ ಮಾನವರು ಭೂಪಟಸೃಷ್ಟಿಯ ವಿಧಾನದ ಮೂಲಕ ದೇವರ ದೃಷ್ಟಿಕ್ರಮವನ್ನು ತಮ್ಮ ಕೈವಶ ಮಾಡಿಕೊಂಡಾಗಿತ್ತು. ಆಧುನಿಕ ಯುಗದಲ್ಲಿ ನಾವು ನಮ್ಮ ಸುತ್ತಲ ವಾಸ್ತವದ ಕುರಿತು ಹೊಸ ಬಗೆಯ ಜ್ಞಾನವನ್ನು ಗಳಿಸಿಕೊಂಡಿದ್ದೇವೆ, ವಾಸ್ತವದ ಮೇಲೆ



ಅಧಿಪತ್ಯವನ್ನು ಸ್ಥಾಪಿಸಿಕೊಂಡಿದ್ದೇವೆ, ಹಾಗೂ ನಮ್ಮ ಇಷ್ಟಾನಿಷ್ಟಗಳಿಗೆ ತಕ್ಕಂತೆ ವಾಸ್ತವವನ್ನು ಬಗ್ಗಿಸುವ ಒಗ್ಗಿಸುವ ಸಾಮರ್ಥ್ಯವನ್ನು ಬೆಳೆಸಿಕೊಂಡಿದ್ದೇವಲ್ಲ, ಈ ಜ್ಞಾನ-ಅಧಿಪತ್ಯ-ಸಾಮರ್ಥ್ಯಗಳಿಗೂ ದೇವಸಮಾನ ಊರ್ಧ್ವಸ್ತರದಿಂದ ವಿಶ್ವವನ್ನು ವೀಕ್ಷಿಸುವ ಆಧುನಿಕ ದೃಷ್ಟಿಶೈಲಿಗೂ ಅನ್ಯೋನ್ಯ ಸಂಬಂಧವಿದೆ.

‘ಅಕ್ಷಿ-ಸ್ತರದ ದೃಷ್ಟಿ’ ಹೀಗೆ ‘ಅಹಂ-ಸ್ತರದ ದೃಷ್ಟಿ’ಯಾಗಿ (from eye-level to the I-level) ಬದಲಾಗುತ್ತಿದ್ದ ಹಾಗೆಯೆ ಹಿಂಸಾತ್ಮಕವಾದ ಅಮೂರ್ತೀಕರಣದ ಒಂದು ಪ್ರಕ್ರಿಯೆಯೂ ಪ್ರಾರಂಭವಾಯಿತು. ಹಳ್ಳಿಗಾಡಿನಲ್ಲಿ ದಿಕ್ಕುದಾರಿ ತಿಳಿಹೇಳುವಾಗ ಮಾನವರು ತಮ್ಮ ಮಾಹಿತಿರಾಶಿಯನ್ನು ಗಿಡಮರಕಾಡುಗಳು, ಬೆಟ್ಟಗುಡ್ಡಗಳು, ನದಿತೊರೆಗಳ ತಿರುವುಗಳು, ಪ್ರಾಣಿಪಕ್ಷಿಗಳ ತಂಗುದಾಣಗಳು ಇತ್ಯಾದಿಯಾದ ಪ್ರಾಕೃತಿಕ ಗುರುತುಗಳ ಸುತ್ತ ಹೆಣೆದು ಹೇಳುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ, ಇದೇ ಪ್ರಕೃತಿ-ಪರಿಸರಗಳು ಆಧುನಿಕರಿಗೆ ಗೋಚರಿಸುವುದು ನಿರ್ಜೀವ ಭೂವಲಯವೊಂದಾಗಿ; ಹಾಗಾಗಿ ಅವರು ಮಾರ್ಗಸೂಚಿ ನೀಡುವಾಗ ಹೇಳುವುದು ‘ಇದೇ ರಸ್ತೆಯಲ್ಲಿ ನೇರ ಐವತ್ತು ಅಡಿ ಹೋಗಿ, ಅಲ್ಲಿ ಎಡಕ್ಕೆ ಸಿಗುವ ಮೂರನೆ ತಿರುವಿನಲ್ಲಿ ಹೊರಳಿ’ ಇತ್ಯಾದಿಯಾಗಿ. ಇಲ್ಲಿ ಕಂಡುಬರುವ ಐವತ್ತು, ನೇರ, ರಸ್ತೆ, ಎಡ, ಮೂರನೆಯ, ತಿರುವು ಎಂಬುವೆಲ್ಲವೂ ಸಂಖ್ಯಾಪ್ರಧಾನವೂ ದ್ವಿ-ಆಯಾಮ ಸೀಮಿತವೂ ಸರಳರೇಖಾತ್ಮಕವೂ ಆದ ಆಧುನಿಕ ಜಗದ್‌ದೃಷ್ಟಿಯ ಚಿಹ್ನೆಗಳಾಗಿವೆ. ಈ ದೃಷ್ಟಿಕ್ರಮಕ್ಕೂ, ಬಾಗುತ್ತ ಬಳುಕುತ್ತ ಇಂದ್ರಿಯಾನುಭವದಿಂದ ತುಳುಕುತ್ತ ಅಳತೆಗಳಲ್ಲಿ ಅತಿನಿಖರತೆಯ ಬಗ್ಗೆ ತಲೆಕೆಡಿಸಿಕೊಳ್ಳದೆ ಅಂದಾಜು ಅಂಶಗಳನ್ನೆ ಬಳಸುವ ಆಧುನಿಕಪೂರ್ವ ದೃಷ್ಟಿಕ್ರಮಕ್ಕೂ ಇರುವ ವೈದೃಶ್ಯ ಅಗಾಧವಾದುದು. ಹೀಗೆ ದೇಶ-ಪರಿಸರ (space) ಗಳನ್ನು ಬರಿದೆ ಪದಾರ್ಥಗಳನ್ನು ತುಂಬಿಕೊಂಡ ಪೆಟ್ಟಿಗೆಗಳಂತೆ ಕಾಣುವ ಈ ಆಧುನಿಕ ಮನೋಭಾವದಲ್ಲಿ ಅಂತಸ್ಥವಾಗಿರುವ ಹಿಂಸಾಗುಣ ಅಂತಿಮವಾಗಿ ದೇಶ-ಸಮಾಜಗಳ ವಿಭಜನೆಗೂ, ಸಮಾಜ ಶುದ್ಧೀಕರಣದ ಹೆಸರಲ್ಲಿ ನಡೆಯುವ ಪರಸಮುದಾಯಗಳ ಕಗ್ಗೊಲೆಗೂ, ಪ್ರಾಣಿ-ಪಕ್ಷಿ-ಸಸ್ಯ -ಮಾನವಸಂಕುಲಗಳಾವುದಕ್ಕೂ ಕಾಳಜಿ ತೋರದೆ ನಿರ್ದಿಷ್ಟ ಪ್ರದೇಶಗಳ ಅಂಗುಲಂಗುಲದ ಮೇಲೂ ಅಗ್ನಿಗಂಬಳಿ ಹಾಸುವಂತೆ ವಾಯುಸೈನ್ಯಗಳು ನಡೆಸುವ ಕಾರ್ಪೆಟ್-ಬಾಂಬಿಂಗಿಗೂ, ಬೃಹತ್ ಸಂಖ್ಯೆಯಲ್ಲಿ ಜನರನ್ನು ಕೊಲ್ಲುವುದಷ್ಟೆ ಅಲ್ಲದೆ ಜೀವವುಳಿದವರನ್ನು ಜೀವಾವಧಿ ಅನೂಹ್ಯವಾದ ಬಾಧೆಗಳಿಗೆ ಗುರಿ ಮಾಡುವಂತಹ ನೆಪಾಮ್ ಬಾಂಬಿನ ಬಳಕೆಗೂ ಕಾರಣವಾಗಬಲ್ಲದು, ಈಗಾಗಲೆ ಕಾರಣವಾಗಿದೆ ಕೂಡ. ಈಯೆಲ್ಲ ಭೀಕರತೆಗಳ ಬೀಜ ಆಧುನಿಕ ಭೂಪಟನಿಯಂತ್ರಿತ

ವ್ಯವಸ್ಥೆಯ ಒಳಗೆಯೆ ಅಡಗಿರುವುದು. ಈ ನಡುವೆ ಕೆಲವರು ಇಲ್ಲ, ಈ ವ್ಯವಸ್ಥೆ ಪ್ರಗತಿ ಗಾಮಿಯೂ ತರ್ಕಶಕ್ತವೂ ವೈಜ್ಞಾನಿಕವೂ ಆದ ವಿಧಾನಗಳನ್ನೆ ನೆಚ್ಚಿಕೊಂಡಿರುವುದು, ಮೇಲೆ ಪ್ರಸ್ತಾಪಿತವಾದ ಘೋರ ವಿದ್ಯಮಾನಗಳು ಅತ್ಯಪರೂಪದ ವೈಪರೀತ್ಯಗಳು ಮತ್ತು ಆಕಸ್ಮಿಕ ಉಪೋತ್ಪನ್ನಗಳೆ ಹೊರತು ಅವು ಖಂಡಿತವಾಗಿಯೂ ಈ ವಿಧಾನಗಳ ಪ್ರಧಾನೋತ್ಪನ್ನಗಳಲ್ಲವೆ ಅಲ್ಲ ಎಂದು ಉದ್ಘೋಷಿಸುತ್ತ ನಮ್ಮನ್ನು ಹಾಗೆ ನಂಬಿಸಲೆಂದು ಪ್ರಯತ್ನಿಸುತ್ತಿದ್ದರೂ ಸಹ, ಭೂಪಟಪ್ರಜ್ಞೆಯನ್ನು ಪರಮಾಧಾರವಾಗಿಟ್ಟುಕೊಂಡು ನಡೆದಿರುವ ಹಾಗೂ ನಡೆಯುತ್ತಿರುವ ಹಿಂಸಾಕಾಂಡಗಳು ತೋರುವ ಸತ್ಯ ಬೇರೆಯೆ ಬಗೆಯದಾಗಿದೆ.

ಆಧುನಿಕ ನಕಾಶೆ ತನ್ನ ಅರ್ಥ ಪಡೆದುಕೊಳ್ಳುವುದು ಅದರ ಆವರಣವನ್ನು ಗುರುತಿಸಿಕೊಡುವ ಪರಿಧಿಗಳಿಂದಲೆ ಹಾಗೂ ಅದರ ಉದ್ದಗಲಕ್ಕೂ ಕತ್ತರಿಯಾಡುತ್ತ ಹಾದುಹೋಗುವ ಗಡಿಗಳಿಂದಲೆ. ಈ ಪರಿಧಿ-ಗಡಿಗಳ ರೇಖೆಗಳೋ ಭೂಪಟಲೋಕವನ್ನು ಭಾಗಭಾಗಗಳಾಗಿ ಕತ್ತರಿಸಿದಷ್ಟೆ ಸರಾಗವಾಗಿ ಭವ-ಭಾವಲೋಕಗಳನ್ನೂ ಕತ್ತರಿಸಬಹುದು ಎಂದು ತಿಳಿದುಕೊಂಡಂತಿರುತ್ತವೆ. ಪ್ರತ್ಯೇಕಿಸಲಾರದಷ್ಟು ಅನ್ಯೋನ್ಯವಾಗಿ ಜೊತೆಯಾಡಿ ಜಗಳವಾಡಿ ಕೂಡಿಬಾಳಿಕೊಂಡಿರುವ ಜನ ಸಮುದಾಯಗಳು, ಸಸ್ಯಗಳು, ಸಂಸ್ಕೃತಿಗಳು, ನದಿಗಳು, ಗಾಳಿನೀರುನೆಲಗಳು ಇತ್ಯಾದಿಗಳನ್ನು ಅವು ನಿಖರವಾಗಿಯೂ ನಿರ್ಣಾಯಕವಾಗಿಯೂ ಬೇರ್ಪಡಿಸಿ ತೋರಿಸಲೆಳಸುತ್ತವೆ. ಹಾಗಾಗಿ, ಈ ಬಗೆಯ ರೇಖಾಕೃತಿಗಳನ್ನು ಭವವಾಸ್ತವದ ಚಿತ್ರಿಕೆಗಳು ಎಂದೆನ್ನುವಂತಿಲ್ಲ; ಬದಲಿಗೆ ಅವುಗಳನ್ನು ಹಾಗೊಂದು ವಿಚ್ಛಿದ್ರ ವಾಸ್ತವ ಸೃಷ್ಟಿಯಾಗಲಿ ಎನ್ನುವ ಮನದ ಕಾಮನೆಗಳು ಎಂದೆ ತಿಳಿಯಬೇಕು. ಗಡಿರೇಖೆಗಳು ಸರಳ ಸಹಜ ರೇಖೆಗಳಲ್ಲ, ಅವು ಘಾತಗೊಂಡು ಕೊಳೆಯುತ್ತಿರುವ ಭೂಸಮುದಾಯ ಶರೀರದ ಮೇಲಿನ ಕೀವು ಸೋರುವ ಗಾಯಗಳು.

ಆಧುನಿಕ ಭೂಪಟವು ಹುಚ್ಚೆದ್ದು ಧರೆಯನ್ನು ಧ್ವಂಸಗೈಯುತ್ತಿರುವ ರೂಪಕವೊಂದೂ ಹೌದು. ವಾಸ್ತವದಲ್ಲಿ, ಭೂಪಟಗಳು ಭೂವಾಸ್ತವವನ್ನು ತಥಾವತ್ತಾಗಿ ಪ್ರತಿನಿಧಿಸಲಾರವು. ವಾಸ್ತವದಲ್ಲಿ, ಆಧುನಿಕ ಭೂಪಟ ತನ್ನ ಜೀವ ಗಟ್ಟಿಗೊಳಿಸಿಕೊಂಡಾದಮೇಲೆ, ತನ್ನ ಪಡಿಕಟ್ಟುಗಳಿಗೆ ಮತ್ತು ಕಟ್ಟಳೆಗಳಿಗೆ ತಕ್ಕಂತೆ ಭೂವಾಸ್ತವದ ರೂಪಗಳನ್ನು ಬದಲಾಯಿಸಬೇಕೆಂಬ ಒತ್ತಡ ಹೇರಲಾರಂಭಿಸಿತು. ಥೈಲೆಂಡ್ ದೇಶದ ಚಿಂತಕ ಥೋಂಗ್‌ಚಾಯ್ ವಿನಿಚಾಕುಲ ಮಾರ್ಮಿಕವಾಗಿ ತೋರಿಸಿರುವಂತೆ, ಆಧುನಿಕ ಥೈಲೆಂಡ್ ರಾಷ್ಟ್ರದ ಜನನವಾಗುವುದಕ್ಕೆ ಮೊದಲೆ ಅದರ ಭೂಪಟದ ಜನನವಾಗಿಹೋಗಿತ್ತು; (ಕುಲಾವಿಯಳತೆಗೆ ಕೂಸು ಹುಟ್ಟಿಸುವ



ರೀತಿಯಲ್ಲಿ) ಮುಂದೊಂದು ದಿನ ಆ ರಾಷ್ಟ್ರ ಹುಟ್ಟಿದಾಗ ಅದರ ರೂಪುರೇಖೆಗಳು ಹೇಗಿರಬೇಕೆಂಬುದನ್ನು ಆ ಪಟ ಜನನಪೂರ್ವವಾಗಿಯೆ ನಿರ್ಧರಿಸಿತ್ತು. ದಿಟರೂಪಗಳು ಪಟರೂಪಕಗಳಿಗೆ ಹೊಂದಿಕೊಂಡೆ ನಡೆಯಬೇಕು ಎನ್ನುವ ಈ ಒತ್ತಡದ ಬಲ ಕ್ರಮೇಣ ಹೆಚ್ಚಾಗುತ್ತಲೆ ಇದೆ; ಪ್ರಥಮ ಜಗತ್ತಿನಿಂದ ತೃತೀಯ ಜಗತ್ತಿನತ್ತ, ಹಳೆಯ ದೇಶಗಳಿಂದ ಹೊಸ ದೇಶಗಳತ್ತ, ಬಡವರ್ಗಗಳಿಂದ ಶ್ರೀಮಂತ ವರ್ಗಗಳತ್ತ, ಹಾಗೂ 'ಅಶಿಕ್ಷಿತ' ಜನಗಳಿಂದ ಸುಶಿಕ್ಷಿತ ಜನಗಳತ್ತ ಸಾಗಿಬಂದಂತೆ ಈ ಒತ್ತಾಯ ಇನ್ನಷ್ಟು ತೀವ್ರಗೊಳ್ಳುತ್ತಬರುತ್ತಿದೆ. ಈ ಪ್ರಕ್ರಿಯೆಯಿಂದ ಅತ್ಯಂತ ಹೆಚ್ಚು ಸಂತ್ರಸ್ತರಾಗಿರುವವರು ಹಾಗೂ ಆಹುತಿಯಾಗಿರುವವರೆಂದರೆ ಅಂತರ್-ರಾಷ್ಟ್ರ-ಪ್ರಭುತ್ವ ವ್ಯವಸ್ಥೆಯ ಸೀಮಾರೇಖೆಗಳುದ್ದಕ್ಕೂ ನೆಲೆಯಾಗಿರುವ ಜನಗಳು ಮತ್ತು ಇತರ ಜೀವಿಗಳು. ಇಪ್ಪತ್ತನೆಯ ಶತಮಾನದ ಇತಿಹಾಸವನ್ನು, ಭೂಪಟವೆಂಬ ರೂಪಕದ ಪಾವಿತ್ರ್ಯವನ್ನು ಉಳಿಸಿಕೊಳ್ಳಲೆಂದು ನಾವು ನಿರ್ದಯವಾಗಿ ಬಲಿಕೊಟ್ಟ ಕೋಟಿಗಟ್ಟಲೆ ಜೀವಿಗಳ ಕಥೆಯಾಗಿಯೂ ಬರೆಯಬಹುದು.

ತೃತೀಯ ಜಗತ್ತಿನಲ್ಲಿಂದು, ಆದರ್ಶೀಕೃತ ನಕಾಶೆಗೆ – ಅಂದರೆ ಅತಿಸ್ಪಷ್ಟ ಹಾಗೂ ಸ್ಥಿರೀಕೃತ ಗಡಿಗಳಿಂದ ನಿರ್ಮಾಣಗೊಂಡ ರಾಷ್ಟ್ರಾಕೃತಿಗೆ – ನಿಷ್ಠೆಯಿಂದ ನಡೆದುಕೊಳ್ಳುವುದೆ ವಸಾಹತೋತ್ತರ ಅಭಿವೃದ್ಧಿಯ ಪರಮಮಾರ್ಗ ಎಂಬ ನಂಬುಗೆ ಆಳವಾಗಿ ಬೇರೂರಿದೆ. ವಿಪರ್ಯಾಸವೆಂದರೆ ಇನ್ನೊಂದೆಡೆ, ಇದೇ ತೃತೀಯ ಜಗತ್ತಿನಲ್ಲಿ ಸರಿಸುಮಾರು ಎಲ್ಲ ಸೀಮೆಗಳೂ ಹಾಗೂ ಎಲ್ಲ ಗಡಿಗಳೂ ವಿವಾದಗ್ರಸ್ತವಾಗಿವೆ. ಈ ವಿಪರ್ಯಾಸದ ಕಾರಣದಿಂದ ಜಗದ ಈ ಭಾಗದ ರಾಷ್ಟ್ರಗಳಲ್ಲೆಲ್ಲ ನಕ್ಷಾಕೇಂದ್ರಿತ ಆತಂಕದ ವ್ಯಾಧಿಯೊಂದು ಹರಡಿಕೊಂಡಿದ್ದು, ಇವುಗಳಲ್ಲಿ ಹಲವು ರಾಷ್ಟ್ರಗಳು ತಮ್ಮ ನೆರೆಹೊರೆಯವರ ಮೇಲೆ ನಕ್ಷಾಸಂಬಂಧಿ ಆಕ್ರಮಣಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡುಬರುತ್ತಿವೆ. ಈ ಪರಾಕ್ರಮಣಗಳದ್ದೂ ವಿಲಕ್ಷಣವಾದ್ದೊಂದು ಕಥೆ. ಇನ್ಯಾವುದಕ್ಕಿಂತಲೂ ಪರಸ್ಪರ ಕಾದಾಡುವುದರಲ್ಲಿ ಹೆಚ್ಚು ಒಗ್ಗಟ್ಟು ತೋರುವ ಈ ದೇಶಗಳು ಪ್ರತಿನಿಧೀಕರಣದ ಕ್ರಮಗಳಿಗೆ ಸಂಬಂಧಿಸಿ ನಿರಸ್ತ್ರರೂಪದ ಆದರೆ ಅಮೂರ್ತಹಿಂಸಾಗುಣದ ಯುದ್ಧಗಳನ್ನು ನಿರಂತರವಾಗಿ ನಡೆಸುತ್ತಿದ್ದು, ಅವುಗಳ ನಡುವೆ ಅಲ್ಲಲ್ಲಿ ಆಗಾಗ ಕಿರುಅವಧಿಗಳ ಮಟ್ಟಿಗೆ ಘಟಿಸುವ, ಮೂರ್ತಹಿಂಸಾತ್ಮಕವಾದ ಸಶಸ್ತ್ರ ಕದನಗಳು – ಅವೇ ಹೆಚ್ಚು ಭೀಕರವೆಂದು ಒಂದು ದೃಷ್ಟಿಯಲ್ಲಿ ಕಂಡರೂ ಕೂಡ – ಆ ಅಮೂರ್ತಹಿಂಸೆಯ ಅವಿರತ ಸಮರದ ಏಕತಾನತೆಯ ಮಧ್ಯೆ ಒಂದಿಷ್ಟು ತಾಳಲಯಘಾತವನ್ನು ಒದಗಿಸುವ ಸ್ಫೋಟಕ ಬಿಂದುಗಳಾಗಿವೆ ಅಷ್ಟೆ.

ಆಧುನಿಕ ನಕ್ಷಾನಿಷ್ಠ ಜಗದ್‌ಪ್ರಜ್ಞೆ ಏಕರೂಪತೆಯೆಂಬ ಅಸಾಧ್ಯ ಅಸಹಜ ಆದರ್ಶದ ಸಂಮೋಹದಲ್ಲಿ ಸಿಲುಕಿಕೊಂಡಿರುವಂಥದು – ಅಂದರೆ, ಪ್ರತಿಯೊಂದು ರಾಷ್ಟ್ರವೂ ಸುಸ್ಪಷ್ಟ ಗಡಿಗಳಿಂದ ರಚಿತವಾಗಿರಬೇಕು, ಅಂತಹ ಪ್ರತಿಯೊಂದು ಭೂಭಾಗದಲ್ಲಿಯೂ ಸುಸ್ಪಷ್ಟವೂ ಏಕರೂಪಿಯೂ ಆದ ರಾಷ್ಟ್ರೀಯತೆಯ ಭಾವವನ್ನು ಹೊಂದಿರುವಂತಹ ಜನಗಳೆ ವಾಸವಾಗಿರಬೇಕು ಎಂಬುದು ಅದರ ಆದರ್ಶವಾಸ್ತವದ ಕಲ್ಪನೆಯಾಗಿದೆ. ಅಟ್ಲಾಸುಗಳಲ್ಲಿ ಕಂಡುಬರುವ ಬಹುವರ್ಣ ರಾಜಕೀಯ ಪಟಗಳು ತಮ್ಮ ಕರಾರುವಾಕ್ಕು ಗಡಿರೇಖೆಗಳು ಹಾಗೂ ವಿವಿಧವರ್ಣಗಳೊಂದಿಗೆ ಚಿತ್ರವತ್ತಾಗಿಯೂ ಆಹ್ಲಾದಕರವಾಗಿಯೂ ಗೋಚರಿಸುವುದೇನೋ ಹೌದು; ಆದರೆ ಆ ಚಿತ್ತಾಕರ್ಷಕತೆಯ ಹಿಂದೆ, ವ್ಯಕ್ತಿ-ಸಮುದಾಯ-ವಿದ್ಯಮಾನಗಳು ಏಕಾಕಾರಿಯಾಗಿರದೆ ಬಹುಮುಖಿಯೂ ಅಸ್ಪಷ್ಟರೂಪಿಯೂ ದ್ವಂದ್ವಸಂದಿಗ್ಧಮಯವೂ ಆಗಿರಬಹುದೆಂಬ ವಾಸ್ತವವನ್ನು, ಸಾರ್ವಭೌಮತ್ವವೆನ್ನುವುದು ಬರಿದೆ 'ಹೌದು - ಅಥವಾ - ಇಲ್ಲ'ಗಳ ವಿಷಯವಾಗಿರದೆ ಸಾಪೇಕ್ಷವಾಗಿ ಏರಿಳಿಯುವ ಹಾಗೂ ದೇಶ-ಕಾಲಗಳ ದ್ವಿತಲಭೂಮಿಕೆಯಲ್ಲಿ ಒಮ್ಮೆ ವರ್ಧಿಸುವ ಒಮ್ಮೆ ಕ್ಷಯಿಸುವ ಸಂಗತಿಯಾಗಿರಬಹುದೆಂಬ ಸತ್ಯವನ್ನು ಒಪ್ಪಿಕೊಳ್ಳಲಾರದಂತಹ ಆಳ ಅಸಹನೆಯ ಮನೋಧರ್ಮವೊಂದು ಅಡಗಿ ಕುಳಿತಿದೆ. ಭವ - ಭಾವಪ್ರಪಂಚಗಳಲ್ಲಿ ಎಲ್ಲೆಡೆಯೂ ಭೂಪಟಸದೃಶ ಅಚ್ಚುಕಟ್ಟಿಗೆ ಒತ್ತಾಯಿಸುವ ಈ ಮನಸ್ಸು ಎಲ್ಲಿಯಾದರೂ, ಜಾತಿಕುಲಜನಾಂಗಗಳ ಸಂಕರದಿಂದಲೂ, ಸಂಸ್ಕೃತಿ ನಾಗರಿಕತೆ ಭಾಷೆಗಳ ಸಂಮಿಶ್ರಣದಿಂದಲೂ, ಮತಧರ್ಮಗಳ ದೂರಪ್ರಸರಣದಿಂದಲೂ, ವಾಸ್ತುಶಿಲ್ಪ ಮತ್ತು ಸಂಗೀತಪ್ರಕಾರಗಳ ಬೆಸುಗೆಯಿಂದಲೂ, ರಾಷ್ಟ್ರಪ್ರಭುತ್ವವೆಂಬ ನವ ನಕಲಿಸ್ವಾಮಿಗೆ ಸಲಾಮು ಹೊಡೆಯಲು ನಿರಾಕರಿಸುವಂಥವರ ನಿತ್ಯಸಹಜಸಾಮಾನ್ಯತೆಯಿಂದಲೂ, ದೇಶಪ್ರದೇಶಗಳೊಡನೆ ಬೇರೆಯೆ ಬಗೆಯ ಸಂಬಂಧವನ್ನು ಕಟ್ಟಿಕೊಂಡಿರುವ ಅಲೆಮಾರಿ ಜನಗಳ ಛಲದಿಂದಲೂ ಸಮೃದ್ಧಗೊಂಡಿರುವ ಐತಿಹಾಸಿಕ ವಾಸ್ತವಕ್ಕೇನಾದರೂ ಬಂದು ಢಿಕ್ಕಿ ಹೊಡೆದಲ್ಲಿ – ಅರ್ಥಾತ್, ಎಲ್ಲ ಮಾನವ ನಾಗರಿಕತೆಗಳು ಮತ್ತು ಇತಿಹಾಸಗಳಲ್ಲಿ ಸತ್ತ್ವಸತ್ಯದ್ದು ಏನಿವೆಯೊ ಅವುಗಳಿಗೆ ಆಧುನಿಕ, ಚಲನಹೀನ, ಭೂಪಟಬದ್ಧ ಮನಸ್ಸು ಮುಖಾಮುಖಿಯಾದಲ್ಲಿ – ಆ ಮನಸ್ಸಿನ ಪ್ರತಿಕ್ರಿಯೆ, ನಿಶ್ಚಿತವಾಗಿಯೂ, ಅನ್ಯಭಯ-ದ್ವೇಷದಿಂದ, ಅಸಹಜ ಅಂತರ್ಮುಖತೆಯಿಂದ, ರಾಷ್ಟ್ರಪಾವಿತ್ರ್ಯದ ಖಿಚಡಿ ಕಲ್ಪನೆಯೊಂದನ್ನು ಕಟ್ಟುವ ಅತ್ಯಾತುರದಿಂದ ಪೀಡಿತ ವಾದುದೆ ಆಗಿರುತ್ತದೆ. ಸಮಾಜ ಜೀವನವೆನ್ನುವುದು ಮ್ಯಾಪುಗಳ ರೂಪಕದ ಚೌಕಟ್ಟಿನಾಚೆಗೂ ಇರುವಂಥದು ಎಂಬ ಸರಳಸತ್ಯವನ್ನು ಸ್ವೀಕರಿಸಲು ಅಶಕ್ತವಾದ



ಈ ಮನೋಭಾವ ತನ್ನ ಪರಾಕಾಷ್ಠೆಯನ್ನು ಮುಟ್ಟಿರುವುದು ಇಂದು ತಮ್ಮ ತಮ್ಮ ಗಡಿಗಟ್ಟಿಗೊಳಿಸಿಕೊಂಡಿರುವ ಬಹಳಷ್ಟು ದೇಶ-ಪ್ರದೇಶಗಳಲ್ಲಿ, ಅಲ್ಲಿ ಬಲಪ್ರಯೋಗದಿಂದಾದರೂ ಅನ್ಯತ್ವಗಳನ್ನು ನಾಶಗೈದಾದರೂ ಏಕರೂಪಿ ಸ್ವತ್ವಗಳನ್ನು ಸ್ಥಾಪಿಸಲು ಹೊರಟಿರುವ ನಿರ್ದಯಿ, ನಿರ್ನಾಮಕ ಯೋಜನೆಗಳಲ್ಲಿ. ಕಲ್ಪಿತವಾಸ್ತವ ('ಸಿಮ್ಯುಲೇಕ್ರಮ್' – ಎಲ್ಲೂ ಅಸ್ತಿತ್ವದಲ್ಲಿಲ್ಲದ ವಾಸ್ತವವೊಂದರ ಆಧಾರದ ಮೇಲೆ ಪರಿಕಲ್ಪಿತವಾದ 'ವಾಸ್ತವ')ದ ಹೆಸರಿನಲ್ಲಿ ನಡೆಯುತ್ತಿರುವ ಅನ್ಯನಿರ್ನಾಮಕ ಹಿಂಸೆಯೆ ನಮ್ಮ ಕಾಲದ ಪ್ರಧಾನ ಹಿಂಸಾರೂಪವಾಗಿದ್ದು, ಅದಕ್ಕೆ ಇಂದು 'ಪ್ರಗತಿದಾಯಕ'ವೆಂಬ ನಾಮಾಂಕಿತ ಪಡೆದುಕೊಂಡು ಅನುಷ್ಠಾನಗೊಳ್ಳುತ್ತಿರುವ ಯೋಜನಾಸರಣಿಯಷ್ಟು ಒಳ್ಳೆಯ ಉದಾಹರಣೆ ಮತ್ತೊಂದಿಲ್ಲ. ವಾಸ್ತವವನ್ನು ಅರಿತುಕೊಳ್ಳುವ ಕಾಳಜಿ ತೋರದೆ ತಮ್ಮ ಸ್ವಪ್ನವಾಸ್ತವಗಳನ್ನೆ ಸತ್ಯವಾಸ್ತವವಾಗಿ ಪರಿವರ್ತಿಸುವ ಹಠದ ಕೆಲವರು ರೂಪಿಸಿದ ಈ ಪ್ರಗತಿ ಯೋಜನೆಯಲ್ಲಿ – ಸದ್ಯಕ್ಕೆ ನಾಲ್ಕನ್ನಷ್ಟೆ ಹೆಸರಿಸುವುದಾದಲ್ಲಿ – ಆಧುನಿಕ ರಾಷ್ಟ್ರನಿರ್ಮಾಣ, ಆರ್ಥಿಕ ಅಭಿವೃದ್ಧಿ, ಆಧುನಿಕ ಕೃಷಿ ಪದ್ಧತಿ ಮತ್ತು ಮುಕ್ತ ಮಾರುಕಟ್ಟೆಯ ಕಾರ್ಯಕ್ರಮಗಳೂ ಸೇರಿಕೊಂಡಿವೆ. ಇವುಗಳ ವಶೀಕರಣ ಶಕ್ತಿಯಿಂದಾಗಿ ನಮ್ಮಲ್ಲಿ ಆಧುನಿಕೀಕರಣವೆನ್ನುವುದು ಅಂತಿಮವಾಗಿ ಮೋಕ್ಷಸಾಧಕವಾದುದೊಂದು ಯೋಜನೆಯೆನ್ನುವ ಪರಮವಿಶ್ವಾಸ ಬೆಳೆದಿದ್ದು, ಇಂದು ಆಧುನಿಕತೆಯ ಆರಾಧನೆಯಲ್ಲಿ ಅನ್ಯರನ್ನು ಬಲಿಕೊಟ್ಟ ಹಿಂಸಾಚಾರಿಗಳಿಗೆ ಆತ್ಮಸಾಕ್ಷಿಯ ಕಾಟವಿಲ್ಲದೆ ರಾತ್ರೆ ಹಾಯಾಗಿ ನಿದ್ದೆ ಬರುವುದಾದರೆ ಅದು ಈ ವಿಶ್ವಾಸದ ಕಾರಣದಿಂದಲೆ; ಮತ್ತು ನಮ್ಮಲ್ಲಿ ಬಹಳಷ್ಟು ಜನರಿಗೆ ನಾವು ಸ್ವಸ್ಥ ಜಗತ್ತೊಂದರಲ್ಲಿ ಜೀವಿಸಿಕೊಂಡಿದ್ದೇವೆ ಎಂಬ ನಂಬುಗೆ ಇನ್ನೂ ಗಟ್ಟಿಯಾಗಿರುವುದಾದರೆ ಅದು ಈ ವಿಶ್ವಾಸದ ಕಾರಣದಿಂದಲೆ. ಆಧುನಿಕ ಪ್ರಗತಿ ಯೋಜನೆಯ ಪ್ರಕಾರ, ಪಟರೂಪ ಮತ್ತು ದಿಟರೂಪಗಳು ಭೇದವಿಲ್ಲದಂತೆ ಬೆಸೆದು ಸಂಗಮಗೊಳ್ಳುವ ಸ್ಥಿತಿಯೆ ಪರಮಮಂಗಳಕರವಾದ ಸ್ಥಿತಿ.

ಚಿನುವಾ ಅಚೆಬೆಯ 'ಥಿಂಗ್ಸ್ ಫಾಲ್ ಅಪಾರ್ಟ್' ಕಾದಂಬರಿಯಲ್ಲಿ ಬರುವ ನಗೆಯುಕ್ಕಿಸುವ ಸನ್ನಿವೇಶವೊಂದರಲ್ಲಿ, ಆಫ್ರಿಕಾದ ಒಡಲಾಳದ ತಾಣವೊಂದರಲ್ಲಿ ಪಾಶ್ಚಾತ್ಯ ಮತಪ್ರಚಾರಕನೊಬ್ಬ ಅತ್ಯುಗ್ರಸ್ಫೂರ್ತಿಯಲ್ಲಿ ಅಬ್ಬರಿಸುತ್ತಾ, ಆಫ್ರಿಕನ್ನರು ಶುದ್ಧ ಸೋಂಬೇರಿಗಳು ಮತ್ತು ಅಂಧಶ್ರದ್ಧೆಯವರೆಂದೂ ಪಾಪ-ಪುಣ್ಯಗಳ ಭೇದವರಿಯದ ಧರ್ಮಹೀನರೆಂದೂ ಟೀಕಿಸುತ್ತ ಭಾಷಣ ಬಿಗಿಯುವುದನ್ನು ಅದೆ 'ಕತ್ತಲ ಖಂಡ'ದ ಇಬ್ಬರು ಮೂಲನಿವಾಸಿಗಳು ತುಸು ತಬ್ಬಿಬ್ಬಾಗಿಯೆ ಕೇಳುತ್ತ ನಿಂತಿರುತ್ತಾರೆ. ಕೊನೆಗೆ ಅವರಲ್ಲೊಬ್ಬ ಇನ್ನೊಬ್ಬನತ್ತ ತಿರುಗಿ ಹೇಳುತ್ತಾನೆ: 'ಅಲ್ಲ,

ನಾವು ನಂಬಿದ್ದೆಲ್ಲ ಸುಳ್ಳೆಂದು ಸಾರಲು ಈತ ಹತ್ತು ಸಾವಿರ ಮೈಲು ದೂರ ಸಾಹಸಮಾಡಿ ಬರಬೇಕಿತ್ತೆ ? ನಮ್ಮ ಊರಿನ ಜ್ಞಾನಿಗಳಾರೂ ಈ ರೀತಿ ಎಂದಾದರೂ ಮಾಡಿಯಾ ರೆಂದು ನನಗನಿಸುವುದಿಲ್ಲ'. ಈ ಪ್ರಸಂಗ ಸೂಚಿಸುವಂತೆ, ಆಧುನಿಕ ಮ್ಯಾಪು ಇಡಿಯ ಭೂಮಂಡಲದ ಚಿತ್ರವೊಂದನ್ನು ನಮ್ಮೆದುರು ಹರಡಿಡುವ ಮೂಲಕ ನಾವು ಇಡಿಯ ಭೂಮಿಯನ್ನೆ ನಮ್ಮ ಆಸ್ತಿಯೆಂದು ಪರಿಗಣಿಸುವಂತೆ ಪ್ರಭಾವಿಸುತ್ತದೆ; ಅದು ನಮ್ಮ ಸ್ವತ್ತಾದ್ದರಿಂದ ಅದನ್ನು ಸಂಪೂರ್ಣವಾಗಿ ನಮ್ಮಿಷ್ಟಕ್ಕನುಸಾರವಾಗಿ ಪ್ರವೇಶಿಸಲು, ಅದರ ಎಲ್ಲ ನಿಗೂಢತೆಗಳನ್ನು ಬಯಲುಮಾಡಲು ನಮಗೆ ಎಲ್ಲ ಹಕ್ಕೂ ಇದೆಯೆಂದು ನಾವು ತಿಳಿಯುವಂತೆ ಪ್ರೇರೇಪಿಸುತ್ತದೆ. ಆಧುನಿಕ ಮ್ಯಾಪು, ಲೇಖಕ ಜೋಸೆಫ್ ಕಾನ್ರಾಡ್ ತನ್ನ ಆತ್ಮವೃತ್ತಾಂತದಲ್ಲಿ ನೆನಪಿಸಿಕೊಳ್ಳುವ ಇಂಥದೊಂದು ಗಳಿಗೆಯನ್ನು ಆಹ್ವಾನಿಸುತ್ತದೆ:

> *...ಆ ಕಾಲದ ಆಫ್ರಿಕಾದ ನಕಾಶೆಯೊಂದನ್ನು ವೀಕ್ಷಿಸುತ್ತಾ, ಆಗಿನ್ನೂ ಅಭೇದ್ಯವಾಗುಳಿದಿದ್ದ ಆ ಖಂಡದ ರಹಸ್ಯಮಯತೆಯನ್ನು ಪ್ರತಿಚಿತ್ರಿಸುವಂತೆ ಆ ನಕಾಶೆಯ ನಡುಭಾಗದ ತುಂಬ ಹರಡಿಕೊಂಡಿದ್ದ ಖಾಲಿ ಜಾಗದ ಮೇಲೆ ಕೈಬೆರಳಿಡುತ್ತಾ, ನನ್ನ ವ್ಯಕ್ತಿತ್ವದಲ್ಲಿ ಇಂದು ಉಳಿದಿಲ್ಲದ ಪರಮ ವಿಶ್ವಾಸ ದೊಂದಿಗೂ ನಂಬಲಾಗದಂತಹ ಗರ್ವದೊಂದಿಗೂ ನನಗೆ ನಾನು ಹೇಳಿಕೊಂಡೆ: 'ನಾನು ಬೆಳೆದಾಗ ಈ ಪ್ರದೇಶಕ್ಕೆ ಹೋಗಿಯೆತೀರುತ್ತೇನೆ.'*

ಸರಳವಾಗಿ ಹೇಳುವುದಾದರೆ, ಅಚೆಬೆ ಕಾದಂಬರಿಯ ಆ ಪಾಶ್ಚಾತ್ಯ ಪಾದ್ರಿಯ ಕೈಯಲ್ಲಿ ಆಫ್ರಿಕಾದ್ದೂ ಭೂಮಂಡಲದ್ದೂ ಮ್ಯಾಪುಗಳಿರುವುದರಿಂದಲೆ ಮತ್ತು ಅವುಗಳ ಮೂಲಕ ಆ ದೇಶಪ್ರದೇಶಗಳು ಆತನಿಗೆ ಈಗ ಸುಲಭಗ್ರಾಹ್ಯವೂ ಸ್ಪಷ್ಟವೂ ಆಗಿ ಗೋಚರವಾಗುತ್ತಿರುವುದರಿಂದಲೆ ಆ ಪ್ರಸಂಗದಲ್ಲಿ ಆತನ ಸ್ವಶ್ರೇಷ್ಠತೆಯ ನಂಬಿಕೆಗೆ ಅಷ್ಟೊಂದು ಬಲ ಒದಗಿಬಂದಿರುವುದು. ಇದಕ್ಕೆ ತದ್ವಿರುದ್ಧವಾಗಿ ಅಲ್ಲಿನ ಆಫ್ರಿಕನ್ನರು ಇನ್ನೂ ಕೂಡ ದೂರಗಳಿಂದ ದಿಗ್ಭ್ರಾಂತರಾಗುವಂಥವರು, ಭಿನ್ನತೆ ಮತ್ತು ವೈವಿಧ್ಯಗಳೆದುರು ವಿನೀತರಾಗಿ ತಲೆಬಾಗುವಂಥವರು. ಮತ್ತವರ ಆ ವಿನಯ-ವಿಸ್ಮಯಗಳಲ್ಲಿ ತುಂಬಿಕೊಂಡಿರುವುದು ತನ್ನಂತೆ ಪರರನ್ನೂ ಬಗೆಯಬೇಕೆಂಬ ಸರ್ವಗೌರವಭಾವವೆ ಹೊರತು ಪರರನ್ನು ತನ್ನ-ತನದ ಚೌಕಟ್ಟಿಗೆ ಬಗ್ಗಿಸಬೇಕೆಂಬ ಹಠವಲ್ಲ. ನಮ್ಮ ಕೈಯಲ್ಲಿನ ಭೂಪಟಗಳು, ಅವು ನಾವು ಕದ್ದು ನಮ್ಮದಾಗಿ ಪರಿವರ್ತಿಸಿಕೊಂಡ ಪರರ ಸಹಜಾನುಭೋಗದ ಭೂ ಹಕ್ಕುಪತ್ರಗಳು.

ಆಧುನಿಕ ನಕ್ಷಾನಿರ್ದೇಶಿತ ಕಲ್ಪಿತವಲಯ (cartographic imaginary) ಇಂದು ವಿಶ್ವದೆಲ್ಲೆಡೆ ವ್ಯಾಪಿಸುತ್ತಿದೆ, ಜ್ಯಾಮಿತೀಯ ಅನುಪಾತದಲ್ಲಿ ವರ್ಧಿಸುತ್ತಿದೆ. ಇಪ್ಪತ್ತನೆಯ ಶತಮಾನದ ಶುರುವಾತಿನಲ್ಲಿ, ತಲೆಯೊಳಗೆ ತಮ್ಮ ದೇಶದ್ದೊಂದು



ಭೂಪಟವನ್ನು ಇಟ್ಟುಕೊಂಡು ತಿರುಗಾಡುವುದು ಶಿಕ್ಷಿತ ಪ್ರತಿಷ್ಠಿತ ವರ್ಗದವರಿಗೆ ಸೀಮಿತವಾಗಿದ್ದ ವಿಶಿಷ್ಟ ಬಲವಾಗಿತ್ತು. ಅನಂತರದ ದಶಕಗಳಲ್ಲಿ, ಹಿಂದೆಂದೂ ಕಾಣದಿದ್ದಂತಹ ಅಗಾಧ ಪ್ರಮಾಣದ ಪ್ರಸರಣ-ಸಂವಹನ ಶಕ್ತಿಯನ್ನು ಪಡೆದ ಸಮೂಹಮಾಧ್ಯಮಗಳು ಬೆಳೆದು ಪ್ರಭಾವ ಬೀರತೊಡಗಿದ್ದರಿಂದಾಗಿ ಇಂದು ಬಿಲಿಯಗಟ್ಟಲೆ ಜನರಿಗೆ ತಾವು ಜೀವಿಸುತ್ತಿರುವುದು ನಿಖರ ಸರಹದ್ದುಗಳೊಳಗಿನ ಭೂಭಾಗಗಳಲ್ಲಿ, ಅಷ್ಟೆ ನಿಖರವಾಗಿ ಗುರುತಿಸಲ್ಪಟ್ಟ ಹಾಗೂ ಪರರು ಮತ್ತು ಪ್ರತಿಸ್ಪರ್ಧಿಗಳು ವಾಸಿಸುತ್ತಿರುವ ಅಕ್ಕಪಕ್ಕದ ಪ್ರದೇಶಗಳಿಂದ ಅತಿಸ್ಪಷ್ಟವಾಗಿ ಬೇರ್ಪಟ್ಟ ತಮ್ಮ ದೇಶಗಳಲ್ಲಿ ಎಂದು ಭಾವಿಸುವುದು ಬಹು ಆಳದ ರೂಢಿಯಾಗಿ ಹೋಗಿದೆ. ಈ ಕಾಲದಲ್ಲಿ ಒಂದೆಡೆ ಆಧುನಿಕ ಭೂಗೋಳಶಾಸ್ತ್ರೀಯ ಶಿಕ್ಷಣದ ವ್ಯಾಪಕ ಪ್ರಸರಣೆಯಾಗುತ್ತಿದ್ದಂತೆಯೆ ಮತ್ತೊಂದೆಡೆ ವಿಶ್ವ ನಾಗರಿಕತೆ ಹೆಚ್ಚು ಮಾನವೀಯವಾಗುವ ಸಾಧ್ಯತೆಯ ಕ್ಷೀಣನೆಯೂ ಆಗುತ್ತಿದ್ದು, ಆ ಕಾರಣ ಇವೆರಡೂ ಸಹಕಾಲಿಕ ಮಾತ್ರವಲ್ಲದೆ ಸಂಬಂಧಿಯೂ ಪರಸ್ಪರಪೋಷಕವೂ ಆದ ಪ್ರಕ್ರಿಯೆಗಳೆ ಆಗಿರಬೇಕೆಂದು ಕಾಣುತ್ತದೆ.

ಭೂಗೋಳಶಾಸ್ತ್ರಜ್ಞರ ವೈಚಾರಿಕ ವಿಶ್ವದೊಳಗೆ, ವರ್ತಮಾನ ಕಾಲದಲ್ಲಿ ವಾಸ್ತವ ಮತ್ತು ಅದರ ಪ್ರತಿಕೃತಿರೂಪಗಳ ನಡುವೆ ಪದೇಪದೆ ಕಂಡುಬರುವ ವ್ಯತ್ಯಯಗಳಿಗೆ ಮೂಲವಾಗಿಯೂ ಭೂಪಟರಚನಾಶಾಸ್ತ್ರದಲ್ಲಿ ಅಂತರ್ಗತವಾದ ಕೊರತೆಗಳಾಗಿಯೂ ಇರುವ ದೋಷಗಳನ್ನೆಲ್ಲ ಭವಿಷ್ಯಕಾಲದಲ್ಲಿ ತಂತ್ರಜ್ಞಾನದ ಅಭಿವೃದ್ಧಿಯಾಗುತ್ತಿದ್ದಂತೆ ಸುಲಭವಾಗಿ ನಿವಾರಿಸಿಕೊಳ್ಳುತ್ತ ಮುನ್ನಡೆಯಬಹುದು ಎಂಬ ವಿಶ್ವಾಸ ಸರ್ವಸಾಮಾನ್ಯವಾಗಿರುವುದುಂಟು. ಇಂದು ಸಿದ್ಧಿಯಾಗಿರುವ ಕಂಪ್ಯೂಟರ್-ಇಮೇಜಿಂಗ್ ತಂತ್ರಗಳನ್ನೂ, (ಈಗ ಜಿ.ಐ.ಎಸ್., ಅಂದರೆ ಜಿಯೊಗ್ರಾಫಿಕ್ ಇನ್‌ಫರ್ಮೇಶನ್ ಸಿಸ್ಟಮ್ – ಭೌಗೋಳಿಕ ಮಾಹಿತಿ ವ್ಯವಸ್ಥೆ – ಎಂಬ ತಲೆಪಟ್ಟಿಯಡಿ ಒಗ್ಗೂಡಿಸಲ್ಪಟ್ಟಿರುವ) ಅತ್ಯಾಧುನಿಕ ಮಾಹಿತಿ ಸಂಸ್ಕರಣ ತಂತ್ರಜ್ಞಾನಗಳ ಅಪರಿಮಿತ ಗಣನಬಲವನ್ನೂ ಬಳಸಿಕೊಂಡು, ಸೂಚಕ ಮತ್ತು ಸೂಚಿತಗಳ (ಅಂದರೆ, ಪಟವಾಸ್ತವ ಮತ್ತು ದಿಟವಾಸ್ತವಗಳ) ನಡುವೆ ಈವರೆಗೂ ಉಳಿದುಕೊಂಡೆಬಂದಿರುವ ದರಿದ್ರ ಅಂತರವನ್ನು ಇನ್ನು ನಿಶ್ಚಿತವಾಗಿ ಅಳಿಸಿಹಾಕಬಹುದೆಂಬ ವಾದ ಅಲ್ಲಿ ಕೇಳಿಬರುವುದುಂಟು. ಈ ನಂಬಿಕೆಯನ್ನು ಆಧರಿಸಿ ನೋಡಿದರೆ, ವಾಸ್ತವವನ್ನು ಅದರೆಲ್ಲ ಸಮೃದ್ಧಿಯೊಂದಿಗೆ ಪ್ರತಿನಿಧಿಸಬಲ್ಲಷ್ಟು ಆತ್ಯಂತಿಕವಾದ 'ಬೋರೆಸಿಯನ್' ಭೂಪಟದ (ಖ್ಯಾತ ಲೇಖಕ ಬೋರೆಸ್‌ನ ಕಥಾಪ್ರಪಂಚದ ಮುಖ್ಯಲಕ್ಷಣಗಳಾದ ತಾದ್ರೂಪ್ಯತೆಯನ್ನು, ಮತ್ತು ಭವವಾಸ್ತವ -

ಭಾಸವಾಸ್ತವಗಳೆರಡೂ ಅಭಿನ್ನವೆಂಬಂತೆ ಕೂಡಿಕೊಂಡೊ ಇಲ್ಲ ಅದಲಿಬದಲಿ ಆಟಗಳನ್ನು ಆಡಿಕೊಂಡೊ ರೂಪಿಸಿರುವ ಹೊಸತೊಂದೆ ಬಗೆಯ ವಾಸ್ತವತೆಯನ್ನು ತನ್ನ ಮೂಲಲಕ್ಷಣಗಳಾಗಿ ಪಡೆದುಕೊಂಡ ಭೂಪಟದ) ಸೃಷ್ಟಿ ಈಗ ಆಸೆ ಬಲಿಸುವಷ್ಟು ಸಮೀಪದಲ್ಲಿರುವ ವಿದ್ಯಮಾನ ಎಂದೆ ತೋರುತ್ತದೆ. ಆದರಿದು ಅಷ್ಟೆಲ್ಲ ಸರಳವಾದ ಸಂಗತಿಯಲ್ಲ. ಹೀಗೆಲ್ಲ ನಂಬುವ ಹಾಗೂ ಪ್ರತಿಪಾದಿಸುವ ಮನದಲ್ಲಿ ಎರಡು ಮೂಲಭೂತವಾದ ದೋಷಗಳಿವೆ: ಭೂಪಟರಚನೆಯ ಕ್ರಮವನ್ನು ಇಷ್ಟೊಂದು ಸಂಕುಚಿತವಾದ ದೃಷ್ಟಿಕೋನದಿಂದ ಪರಿಕಲ್ಪಿಸಿಕೊಳ್ಳುವ ಈ ಮನ ಒಂದೆಡೆ ರಾಜಕಾರಣದ ಬಗೆಗೆ ಮುಗ್ಧಸ್ತರದಕ್ಕಿಂತ ಮೇಲಿನ ಯಾವ ಜ್ಞಾನವನ್ನೂ ಹೊಂದಿಲ್ಲ; ಇನ್ನೊಂದೆಡೆ, ತಂತ್ರಜ್ಞಾನವು ಸಮಾಜದಿಂದಲೂ ಅಧಿಕಾರ/ಪ್ರಾಬಲ್ಯಗಳ ಪ್ರಶ್ನೆಗಳಿಂದಲೂ ಸಂಪೂರ್ಣವಾಗಿ ಮುಕ್ತವಾದುದಲ್ಲ, ಅಕ್ಷತವಾದುದಲ್ಲ ಎಂಬ ಸರಳಸತ್ಯವನ್ನೂ ತಿಳಿದಿಲ್ಲ. ಇಂತಹ ದೋಷಗಳ ಕಾರಣಕ್ಕಾಗಿಯೆ ಈ ಪಟಾಂಧ ಬುದ್ಧಿ ಅತ್ಯಂತ ಅಪಾಯಕಾರಿಯಾದುದೂ ಹೌದು. ಭೂಪಟಗಳನ್ನು, ಅವು ಕೆಲವೆ ವ್ಯಕ್ತಿ-ಶಕ್ತಿಗಳ ಹಿತಾಸಕ್ತಿಗಳ ಮತ್ತು ಜ್ಞಾನಗಳ ಕಥೆಯನ್ನು ಸರ್ವದೇಶೀಯವೂ ಸಾರ್ವಕಾಲಿಕವೂ ಸಕಲಮಾನವಸಂಕುಲಕ್ಕೆಲ್ಲ ಏಕೈಕವೂ ಆದ ಕಥನ-ಸಂಕಥನಗಳಾಗಿ ವೇಷಾಂತರಿಸಿ ಪ್ರವರ್ತಿಸುವ ಪ್ರಯತ್ನಗಳು ಎಂದೆ ಅರ್ಥೈಸಿಕೊಳ್ಳಬೇಕು. ಭೂಪಟಗಳು, ಎಂದೆಂದಿಗೂ, ನಾವು ಕೆಲವರು ಪರರ ಮೇಲೆ ಸಾಧಿಸಿದ ಅಧಿಪತ್ಯದ ಪತಾಕೆಗಳು.

ಭೂಪಟಗಳು ಪರಾಧಿಪತ್ಯದ ಲಾಂಛನಗಳು ಎಂದಾದಲ್ಲಿ ಅವುಗಳಲ್ಲಿ ಪ್ರತಿರೋಧದ ಸಾಧ್ಯತೆಗಳೂ ಇರಬಹುದೆ? ನಾನೊಮ್ಮೆ, ಭಾರತೀಯ ಶಾಂತಿಪಾಲನಾ ಪಡೆಯ ಸದಸ್ಯನಾಗಿದ್ದು ಶ್ರೀಲಂಕಾದಲ್ಲಿ ಕಾಳಗ ಕಂಡಿದ್ದ ಭಾರತೀಯ ಸೇನೆಯ ಜನರಲ್ ಓರ್ವನ ಸಂದರ್ಶನ ನಡೆಸಿದ್ದೆ. ಆತ ಲಿಬರೇಶನ್ ಟೈಗರ್ಸ್ ಫಾರ್ ತಮಿಳ್ ಈಲಮ್ (ಎಲ್.ಟಿ.ಟಿ.ಇ. ಎಂಬ ಸಂಕ್ಷಿಪ್ತನಾಮದಿಂದ ಪರಿಚಿತವಿರುವ, ಅಲ್ಲಿ ಶ್ರೀಲಂಕಾದಲ್ಲಿ ಸ್ವಾಯತ್ತ ತಮಿಳು ವಲಯವೊಂದಕ್ಕಾಗಿ ಹೋರಾಡುತ್ತಿರುವ ರಾಷ್ಟ್ರೀಯವಾದಿ ಗೆರಿಲ್ಲಾ ಸಂಘಟನೆ) ಕುರಿತು ಮಾತನಾಡುತ್ತ, ಅದು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಕ್ಷೇತ್ರಗಳ ಅತಿನೂತನವೂ ಅತಿಶಕ್ತವೂ ಆದ ಆವಿಷ್ಕಾರಗಳನ್ನು ತನ್ನ ಕಾರ್ಯಾಚರಣೆಯ ಕ್ರಮದಲ್ಲಿ ಅತಿಮುಖ್ಯ ಭಾಗವಾಗಿಯೆ ಸಂಯೋಜಿಸಿ ಕೊಂಡಿದೆಯೆಂದೂ, ಫ್ಯಾಕ್ಸ್ ಮಷೀನುಗಳು, ಗ್ಲೋಬಲ್ ಸ್ಯಾಟಲೈಟ್ ಪೊಸಿಷನಿಂಗ್ ಸಿಸ್ಟಮುಗಳು, ವಯರ್‌ಲೆಸ್ ಕಮ್ಯುನಿಕೇಷನ್ ಉಪಕರಣಗಳು, ಎನ್‌ಕ್ರಿಪ್ಷನ್ ತಂತ್ರಗಳು, ಕಂಪ್ಯೂಟರುಗಳು, ರೇಡಾರುಗಳು ಇತ್ಯಾದಿಯಾಗಿ ಅನೇಕಾನೇಕ



ಸಾಧನಗಳನ್ನು ಹೊಂದಿದೆಯೆಂದೂ ಹೇಳಿದ. ಮುಂದುವರೆದು ಆತ ನುಡಿದ, ಈಯೆಲ್ಲ ತಂತ್ರ-ಸಾಧನಗಳ ಬಳಕೆಯಲ್ಲಿ ಆ ಸಂಘಟನೆಯ ಸದಸ್ಯರಿಗೆ ಎಂತಹ ಅನುಭವವೂ ಕೌಶಲ್ಯವೂ ಇದ್ದುವೆಂದರೆ, ಬಹುಬೇಗ ಆತನಿಗೆ ಅವರೆದುರು ತಾನು ಮತ್ತು ತನ್ನ ಸೈನಿಕರು ಓಬೀರಾಯನ ಕಾಲದವರು ಹಾಗೂ ಜಡಬುದ್ಧಿ-ಜಡದೇಹದವರು ಎಂದೆನಿಸಲು ಶುರುವಾಯಿತಂತೆ. ಸೀಮಾಖಚಿತ ಭೂವಾಸ್ತವ ರೂಪದ ರಾಷ್ಟ್ರವೊಂದರ ರಚನೆಗೆಂದು, ಪುರಾತನವೆ ಆದ ಶೈಲಿಯ ಹೋರಾಟವನ್ನು ನಡೆಸುತ್ತಿರುವ ಎಲ್‌ಟಿಟಿಇ ಮತ್ತೊಂದೆಡೆ ಅತ್ಯಾಧುನಿಕವಾದ ಈ ಶಸ್ತ್ರ-ಸಾಧನಗಳ ಬಳಕೆಯಲ್ಲಿ ಇಂಥ ನೈಪುಣ್ಯ ಹೊಂದಿರುವುದು ಆತ್ಯಂತಿಕವಾದೊಂದು ವ್ಯಂಗ್ಯವೆ ಹೌದು. ಯಾಕೆಂದರೆ, ಮಾನವ-ಭೂಮಿ-ದೇಶ-ಪ್ರದೇಶಗಳ ನಡುವಿನ ಸಂಬಂಧಗಳನ್ನು ಪರಿಕಲ್ಪಿಸಿಕೊಳ್ಳುವಲ್ಲಿ ಅನ್ಯಕ್ರಮಗಳೆ ಅಸಾಧ್ಯವೆಂಬಂತೆ ಭೂವಲಯಬದ್ಧ ಭಾವಬಂಧಕ್ಕೆಯೆ ಉಗ್ರನಿಷ್ಠೆಯಿಂದಿರುವ (ಟೆರಿಟೋರಿಯಲ್ ರಾಷ್ಟ್ರೀಯತೆಗೆ ನಿಷ್ಠೆಯಿಂದಿರುವ) ಎಲ್‌ಟಿಟಿಇ ನೆಚ್ಚಿಕೊಂಡಿರುವ ಈ ನೂತನ ತಾಂತ್ರಿಕತೆಗಳು ತಮ್ಮ ವಿಶಿಷ್ಟ ಬಲದಿಂದ ನಿಸರ್ಗಸಹಜ ಇತಿಮಿತಿಗಳು ಮತ್ತು ಮಾನವನಿರ್ಮಿತ ತಡೆಗೋಡೆಗಡಿಗಳನ್ನು ನಿಶ್ಶಕ್ತ ಹಾಗೂ ನಿರರ್ಥಕಗೊಳಿಸುವಂಥವು ಮಾತ್ರವಲ್ಲ, ಅವು ಮೂಲಭೂತವಾಗಿ ಎಲ್ಲ ಭೂವಲಯಗಳ ವೈಶಿಷ್ಟ್ಯಗಳನ್ನು ಮಟ್ಟಹಾಕಿ ಅವೆಲ್ಲವುಗಳನ್ನು ಅನನ್ಯತೆಯೆ ಇಲ್ಲದ ಪರಸ್ಪರ ಭಿನ್ನತೆಯೆ ಇಲ್ಲದ ನಿರ್ವಲಯಗಳಾಗಿ ರೂಪಾಂತರಿಸುವಂತಹ ವಲಯವೈಶಿಷ್ಟ್ಯನಿರ್ಮೂಲನ (ಡಿಟೆರಿಟೋರಿಯಲೈಸಿಂಗ್) ಗುಣ ಹೊಂದಿರುವಂಥವು. ಇಷ್ಟಾಗಿಯೂ, ಇನ್ನೊಂದಿಷ್ಟು ವಿಶಾಲವಾದ ಪರಿಪ್ರೇಕ್ಷ್ಯದಿಂದ ನೋಡಿದಾಗ, ಇದೇ ನಿದರ್ಶನ ಬೇರೊಂದೆ ರೀತಿಯ ಸಾಧ್ಯತೆಯನ್ನೂ ಸೂಚಿಸುತ್ತದೆ: ಆಧುನಿಕ ನಕಾಶೆಗಳು ರಾಷ್ಟ್ರಪ್ರಭುತ್ವಗಳ ನಡುವಿನ ಹಿಂಸಾಟದಲ್ಲಿ ಛಿದ್ರವಿಚ್ಛಿದ್ರಗೊಂಡಿರುವ ಭೌತಿಕ ಜಗತ್ತೊಂದರ ಪ್ರತಿಚಿತ್ರಣಗಳಾಗಿರುವುದು ಹೌದಾದರೂ ಆ ನಕಾಶೆಗಳನ್ನು ಸೃಷ್ಟಿಸುವ ಮತ್ತು ಪ್ರಸರಿಸುವ ತಾಂತ್ರಿಕತೆಗಳೆ, ತಮಗರಿವಿಲ್ಲದಂತೆಯೆ, ಮುಂದೊಮ್ಮೆ ನಮ್ಮ ನೈತಿಕ ಜಗತ್ತಿನ ನಕ್ಷೆಗಳನ್ನು ಬೇರೆಯೆ ಬಗೆಗಳಲ್ಲಿ ಮರುಕಲ್ಪಿಸಿಕೊಳ್ಳಲು ಮತ್ತು ಮರುರಚಿಸಿಕೊಳ್ಳಲು ಅಗತ್ಯವಾಗಿರುವ ಬಲವನ್ನು ನಮಗೆ ತಂದೀಯಲೂಬಹುದು.

# ಉಪಭೋಗವಾದ

ಅಶೀಶ್ ನಂದಿ

ಕನ್ನಡಕ್ಕೆ: ಅಕ್ಷರ ಕೆ.ವಿ.

ಉಪಭೋಗವಾದ – ಕನ್ಸ್ಯೂಮರಿಸಮ್ – ಎಂಬುದು ಮನುಷ್ಯಜೀವಿಗಳ ಪ್ರಥಮ ಆಯ್ಕೆಯೇನೂ ಅಲ್ಲ; ಅಥವಾ ಅದೊಂದು ಪ್ರಾಥಮಿಕ ಅವಶ್ಯಕತೆಯೂ ಅಲ್ಲ. ಉಪಭೋಗ ಸಂಸ್ಕೃತಿಯು ಮನುಷ್ಯ ಸ್ವಭಾವದ ಒಂದು ಅಂಗ ಎಂಬುದಕ್ಕಾಗಲಿ, ಅಥವಾ ಮಿತಿಯಿಲ್ಲದ ಉಪಭೋಗವಿಲ್ಲದೆ ನಾವು ಬದುಕಲಾರೆವೆಂಬುದಕ್ಕಾಗಲಿ ಸಮಕಾಲೀನ ಮನಃಶಾಸ್ತ್ರದಲ್ಲಿ ಅಥವಾ ಮಾನವಶಾಸ್ತ್ರದಲ್ಲಿ ಯಾ ಸಮಾಜಶಾಸ್ತ್ರದಲ್ಲಿ – ಎಲ್ಲಿಯೂ ಒಂದಿನಿತು ಸಾಕ್ಷ್ಯವೂ ಸಿಗುವುದಿಲ್ಲ. ಇವತ್ತು ನಾವು, ಅಭಿವೃದ್ಧಿಯೆಂಬ ಹೆಸರಿನಲ್ಲಿ, ಅನುಕೂಲವಂತರು ರೂಢಿಸಿಕೊಳ್ಳಬೇಕೆಂದು ಉತ್ತೇಜಿಸುತ್ತಿರುವ ಉಪಭೋಗದ ಕ್ರಮವು ಆತ್ಯಂತಿಕವಾಗಿ ಮನುಷ್ಯಸುಖಕ್ಕೆ ಅನಿವಾರ್ಯ – ಎಂಬ ಮಾತನ್ನು ಮುಕ್ತ ಮಾರುಕಟ್ಟೆಯ ಮಹಾ ನೇತಾರರು ಕೂಡ ಆಡುವ ಧೈರ್ಯ ಮಾಡಲಾರರು. ಪಶ್ಚಿಮದ ಜಗತ್ತಿನ ಬಹುಭಾಗಗಳಲ್ಲಿಯೂ ಕೂಡಾ – ಅದೀಗ ಅಮಿತ ಉಪಭೋಗದ ಆವಾಸವೆಂಬ ಜಾಗತಿಕ ಭಾವನೆ ಉಂಟಾಗಿದ್ದಾಗ್ಯೂ – ಅಲ್ಲಿಯೂ ಭಾರೀ ಉಪಭೋಗವನ್ನು ಪ್ರೋತ್ಸಾಹಿಸುವ ಗಟ್ಟಿಯಾದ ಸಂಪ್ರದಾಯವೇನೂ ಇರಲಿಲ್ಲ. ಉಪಭೋಗವಾದವು ಅಲ್ಲಿ ಪ್ರಬಲಗೊಂಡಿದ್ದು ೨೦ನೆಯ ಶತಮಾನದಲ್ಲಿ ಮಾತ್ರ; ಅದೂ ಪ್ರಾಯಶಃ ೧೯೪೦ರಿಂದ ಈಚಿನ ವರ್ಷಗಳಲ್ಲಿ ಮಾತ್ರವೇ.

ಕೇವಲ ಐದು ದಶಕಗಳ ಹಿಂದೆಯಷ್ಟೇ ಉಪಭೋಗಮಾರ್ಗವನ್ನು ಒಂದು ಮೌಲ್ಯವೆಂಬಂತೆ, ಒಂದು ಜೀವನಶೈಲಿಯೆಂಬಂತೆ ಆವಿಷ್ಕರಿಸಲಾಯಿತು. ಅದಕ್ಕೆ ಮೊದಲು ಇದು ಕೇವಲ ದುಂದುಗಾರ ದೊರೆಗಳಿಗೆ ಮತ್ತು ಕೆಲವೇ ಅತಿಶ್ರೀಮಂತರ ಮಕ್ಕಳಿಗೆ ಸೀಮಿತವಾಗಿದ್ದ ವ್ಯಕ್ತಿಲಕ್ಷಣವಾಗಿತ್ತು. ಐದು ದಶಕಗಳ ಹಿಂದೆ ಇದನ್ನು ಸಾಮಾಜಿಕ ಸಾಧನೆಯ ಒಂದು ಲಾಂಛನವಾಗಿ ಗುರುತಿಸಲಾಯಿತು; ಆದ್ದರಿಂದ ಅದು



ನಿತ್ಯಬದುಕಿನ ಒಂದು ಅಂಗವಾಗಿ ಸೇರಿಹೋಯಿತು. ಈ ಬಳಿಕ ಜನರು ಪತ್ರಿಕೆಗಳ ಮೂಲಕ, ದೂರದರ್ಶನದ ಮೂಲಕ ಅತಿ-ಉಪಭೋಗದ ಕಥನಗಳನ್ನು ಸ್ವತಃ ಉಪಭೋಗಿಸತೊಡಗಿದರು – ಹಿಂದೊಮ್ಮೆ ಜನರು ಪೌರ್ವಾತ್ಯ ಮಹಾರಾಜರ ಅಂತಃಪುರದ ವರ್ಣನೆಗಳನ್ನು ಓದುತ್ತ ಅದರ ಬಗ್ಗೆ ತಮ್ಮದೇ ಅತಿರಂಜಿತ ವಿಕೃತ ಕಲ್ಪನೆಗಳನ್ನು ಕಟ್ಟಿಕೊಳ್ಳುತ್ತಿದ್ದರಲ್ಲ, ಅದಕ್ಕೆ ಸಮಾನಾಂತರವೆನ್ನಬಹುದಾದ ಪ್ರಕ್ರಿಯೆ ಇದು. ಹಿಂದಿನ ಕಾಲಗಳಲ್ಲಿ ಮೇಲುವರ್ಗವು, ಕೆಲವೊಮ್ಮೆ ಹುಚ್ಚಾಪಟ್ಟೆ ಉಪಭೋಗವನ್ನು ನಡೆಸಿದಾಗ ಕೂಡ, ಅದನ್ನು ಪ್ರದರ್ಶಿಸುವ ಧೈರ್ಯ ತೋರಿಸುತ್ತಿರಲಿಲ್ಲ; ಕಾರಣ, ಅದು ಆ ವರ್ಗದ ಘನತೆಗೆ ತಕ್ಕ ಕೆಲಸವಲ್ಲವೆಂದು ತಿಳಿಯಲಾಗಿತ್ತು. ಹೊಸತಾಗಿ ಸಿರಿವಂತರಾದವರು ಮಾತ್ರವೇ ತಮ್ಮ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತಾರೆಂಬುದು ಆಗಿನ ನಂಬಿಕೆಯಾಗಿತ್ತು. ಅದಕ್ಕೆ ವಿರುದ್ಧವಾಗಿ ೫೦ ವರ್ಷಗಳ ಹಿಂದೆ, ಅತಿ ಉಪಭೋಗವೇ ಸಾಮಾಜಿಕ ಅಂತಸ್ತು ಮತ್ತು ಯಶಸ್ಸಿಗೆ ದ್ಯೋತಕವಾಯಿತು; ಜತೆಗೆ ಅದು, ಸಾಮಾಜಿಕ ಅಭದ್ರತೆಯ ಸ್ಥಿತಿಗೂ ವೈಯಕ್ತಿಕ ಕೀಳರಿಮೆಗೂ ಒಂದು ಔಷಧವೆಂದು ಗೋಚರಿಸತೊಡಗಿತು.

ನಮ್ಮ ಕಾಲದಲ್ಲಿ ಉಪಭೋಗ ಸಂಸ್ಕೃತಿಯೊಂದಿಗೆ ಗಟ್ಟಿಯಾಗಿ ಗುರುತಿಸಲ್ಪಟ್ಟಿರುವ ನಾಡು – ಇನ್ನಾವ ದೇಶಕ್ಕಿಂತಲೂ ಹೆಚ್ಚಾಗಿ ಯುನೈಟೆಡ್ ಸ್ಟೇಟ್ಸ್. ಆದರೆ, ಉಪಭೋಗವಾದದ ವಿರುದ್ಧ ಅತ್ಯಂತ ಗಟ್ಟಿಯಾದ ಟೀಕೆಗಳು ಕೂಡಾ ಆ ದೇಶದಿಂದಲೇ ಬಂದಿವೆ. ಈ ಎರಡಕ್ಕೂ ಪ್ರಾಯಶಃ ಮೂಲವಾದ ಒಂದು ಕಾರಣವೆಂದರೆ, ಜಗತ್ತಿನ ಇನ್ನಾವ ದೇಶದಲ್ಲೂ ಅಮೇರಿಕಾದಂತೆ ಬಳಕೆ ಸಂಸ್ಕೃತಿಯನ್ನು ಸಾಂಸ್ಥಿಕಗೊಳಿಸಿ ವ್ಯವಸ್ಥೆಗೊಳಪಡಿಸಿಲ್ಲ; ಉಪಭೋಗವು ಸ್ವಯಂಪೂರ್ಣವಾದ ಒಂದು ಅಗತ್ಯವೆಂಬ ನಂಬಿಕೆಯನ್ನು ಅಲ್ಲಿ ರೂಢಿಸಲಾಗಿದೆ. ಹಾಂಗ್‌ಕಾಂಗ್ ಮತ್ತು ಸಿಂಗಾಪುರಗಳಂಥ ಕೆಲವು ನಗರರಾಜ್ಯಗಳು ಮತ್ತು ದುಬಾಯಿಯಂಥ ಕೆಲವು ಪುಟ್ಟ ದೇಶಗಳು ಮಾತ್ರ ಪೂರ್ಣ ಪ್ರಮಾಣದಲ್ಲಿ ಇಂಥ ಪ್ರಕ್ರಿಯೆಯನ್ನು ಅನುಸರಿಸಲು ಆರಂಭಿಸಿವೆ; ಅಲ್ಲಿ ಉಪಭೋಗವೇ ಕಾರ್ಯಕಾರಣಗಳೆರಡೂ ಆಗಿದೆ ಮಾತ್ರವಲ್ಲ, ಹೊರಗಿನಿಂದ ನೋಡುವ ಒಬ್ಬ ಸಾಧಾರಣ ವೀಕ್ಷಕನಿಗೆ ಆ ಇಡೀ ದೇಶವೇ ಒಂದು ಬೃಹತ್ ಸೂಪರ್‌ಮಾರ್ಕೆಟ್ಟಿನಂತೆ ಗೋಚರಿಸುತ್ತದೆ. ಅಂಥ ದೇಶಗಳ ಇಡಿಯ ರಾಜಕೀಯ ಅರ್ಥವ್ಯವಸ್ಥೆಯೇ – ಮತ್ತು ಬದುಕು ಕೂಡಾ – ಉಪಭೋಗಕೇಂದ್ರಿತವಾಗಿ ರೂಪಿತವಾಗಿದೆ. ಹಾಗಿದ್ದರೂ ಇಡಿಯ ಜಗತ್ತಿನ ವ್ಯಾಪ್ತಿಯಲ್ಲಿ ಅಮೇರಿಕಾದ ಪ್ರಭಾವದ ಮುಂದೆ, ಈ ಕಿರುರಾಜ್ಯಗಳ ಪಾಲು ಅಗಣ್ಯವೆನಿಸುವಂಥದು.

ಬಳಕೆ ಸಂಸ್ಕೃತಿಯ ಯಶಸ್ವಿ ವ್ಯವಸ್ಥೆಯೊಂದು ಅಮೇರಿಕಾದಲ್ಲಿ ರೂಢಗೊಳ್ಳುವುದಕ್ಕೆ ಕಾರಣ, ಬಹುಶಃ, ಅದು ಪ್ರಧಾನವಾಗಿ ವಲಸಿಗರಿಂದ ನಿರ್ಮಿತವಾದ ಸಮಾಜವಾಗಿರುವುದು; ಮತ್ತು ಅಲ್ಲಿನ ಸಾರ್ವಜನಿಕ ಸಂಸ್ಕೃತಿಯು ಹೀಗೆ ದೇಶಭ್ರಷ್ಟರೂ ಸಂಸ್ಕೃತಿಯ ಬೇರು ಕಿತ್ತವರೂ ಆಗಿರುವಂಥ ಜನವರ್ಗಗಳ ಸಾಮಾಜಿಕ-ಮಾನಸಿಕ ತುಡಿತಗಳಿಗೆ ಸ್ಪಂದಿಸಿ ರೂಪಿತವಾದದ್ದು ಎಂಬುದು. ಉಪಭೋಗವಾದಿ ವ್ಯವಸ್ಥೆಯ ಸಂಸ್ಥೀಕರಣವೆಂಬ ಈ ಪ್ರಕ್ರಿಯೆಯು ಇನ್ನೂ ವಿಶಾಲವಾದ ಇನ್ನೊಂದು ಬೆಳವಣಿಗೆಯ ಕಾಕತಾಳೀಯ ಪರಿಣಾಮಗಳಲ್ಲೊಂದು. ಕಳೆದ ೨೦೦ ವರ್ಷಗಳಿಂದ ಜಗತ್ತಿನಾದ್ಯಂತ ನಡೆಯತೊಡಗಿರುವ ಈ ವಿಶಾಲ ಸಾಂಸ್ಕೃತಿಕ ಬೆಳವಣಿಗೆ ಯಾವುದೆಂದರೆ – ಸಮುದಾಯಗಳ ವಿನಾಶ ಮತ್ತು ಜಗತ್ತಿನ ಹಲವು ಭಾಗಗಳಲ್ಲಿ 'ಒಬ್ಬಂಟಿತನದ ಗುಂಪು'ಗಳ ('ಲೋನ್‌ಲೀ ಕ್ರೌಡ್'ಗಳ) ಉದ್ಭವ; ಈ ಪ್ರಕ್ರಿಯೆಗೆ, ಈ ಅವಧಿಯಲ್ಲಿ ಬದಲಾಗುತ್ತ ಹೋದ ಕೈಗಾರಿಕಾ ಬಂಡವಾಳದ ಸ್ವರೂಪವೂ ಸಹಕಾರಿಯಾಗಿಯೇ ಕೆಲಸ ಮಾಡಿದೆ. ಆದ್ದರಿಂದ, ಹಿಂದೆಯೇ ನಾನು ಹೇಳಿರುವಂತೆ, ಉಪಭೋಗವಾದವು ಇಂಥ ಆತಂಕಪೂರಿತ ಸ್ಥಿತಿಯೊಂದಕ್ಕೆ ಪ್ರತಿಸ್ಪಂದಿಯಾಗಿ ರೂಪುಗೊಂಡಿದೆ; ಅದು ಬೇರುಕಿತ್ತವರ, ಒಬ್ಬಂಟಿಗರ ಮತ್ತು ಗುಂಪಿನಲ್ಲಿ ಗೋವಿಂದರಾದವರ ಬದುಕಿಗೆ ಒದಗಿರುವ ಒಂದು ರೋಗ.

ಇಂಥ ದೇಶಾಂತರಿ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವುದರಿಂದಲೇ ಅಮೇರಿಕಾಕ್ಕೆ ಇರುವ ಇನ್ನೊಂದು ವಿಶೇಷ ಲಕ್ಷಣಕ್ಕೆ ಕಾರಣ ಏನೆಂಬುದು ನಮಗೆ ಗೋಚರವಾಗುತ್ತದೆ – ಆ ದೇಶವು ಈ ಜಗತ್ತಿನ ಪ್ರತಿಯೊಬ್ಬರಿಗೂ ತಮ್ಮ 'ಮತ್ತೊಂದು ದೇಶ' (ಸೆಕೆಂಡ್ ಕಂಟ್ರಿ) ಆಗಿಬಿಟ್ಟಿದೆ. ಯುದ್ಧಪೂರ್ವದ ಯುರೋಪಿನಲ್ಲಿ ಪ್ಯಾರಿಸ್ ನಗರವು ಹೀಗೆಯೇ, ಪ್ರತಿಯೊಬ್ಬರ ಎರಡನೆಯ ಆಯ್ಕೆಯ ನಗರವೆಂಬ ಹೆಗ್ಗಳಿಕೆ ಪಡೆದಿತ್ತು. ಅದೇ ರೀತಿ, ಬ್ರಿಟಿಷ್ ಮತ್ತು ಫ್ರೆಂಚ್ ವಸಾಹತುಗಳ ಹಲವು ಪ್ರಜೆಗಳಿಗೆ ಪ್ಯಾರಿಸ್ ಮತ್ತು ಲಂಡನ್‌ಗಳು ಇಂಥ ಮತ್ತೊಂದು ನಗರಗಳಾಗಿ ಕಾಣಿಸಿಕೊಂಡಿದ್ದವು. ಆದರೆ ಇವತ್ತು ಅಮೇರಿಕಾಕ್ಕೊಂದೇ ಇಂಥ ಹೆಗ್ಗಳಿಕೆ ಸಾಧ್ಯವಾಗಿದೆ – ಕಾರಣ, ಅಮೇರಿಕಾದ ಮಾರುಕಟ್ಟೆಯ ಬೃಹತ್ ಗಾತ್ರ (ಇದು ಎಂಥ ಮಾರುಕಟ್ಟೆಯೆಂದರೆ, ಇಲ್ಲಿ ಸಮ್ಮತಿ ಮತ್ತು ವಿರೋಧಕ್ಕೆರಡಕ್ಕೂ ಬೇಡಿಕೆಯಿದೆ; ಹೊಸ ಧರ್ಮಗಳಿಗೂ ನಂಬಿಕೆಗಳಿಗೂ ಸಿದ್ಧಾಂತಗಳಿಗೂ ಕೂಡ ಇಲ್ಲಿ ವಿಶೇಷ ಮಾರುಕಟ್ಟೆಯಿದೆ). ಅಮೇರಿಕಾ ದೇಶವೆಂದರೆ ಅದು ಎಲ್ಲ ರೀತಿಯ ಬಳಕೆದಾರರ ಸ್ವರ್ಗ. ಭಿನ್ನಮತವೂ ಕೂಡ, ಬೇರೆಲ್ಲಿಗಿಂತ ಹೆಚ್ಚು ಚೆನ್ನಾಗಿ ಇಲ್ಲಿ ಮಾರಾಟವಾಗು



ತ್ತದೆ; ಬೇರೆಲ್ಲಿಗಿಂತ ಹೆಚ್ಚು ಗಹನಗಾಂಭೀರ್ಯಗಳಿಂದ ಇಲ್ಲಿ ಭಿನ್ನಮತೀಯ ಚಿಂತನೆಗಳನ್ನು ಕೊಂಡು ಬಳಸಲಾಗುತ್ತದೆ. ಉಪಭೋಗವಾದದ ಟೀಕೆಯನ್ನು ಕೂಡಾ ಈ ನಾಡಿನಲ್ಲಿ ಉಪಭೋಗಿಸಿ ಬಳಸಲಾಗುತ್ತದೆ.

೧೯೪೦ರ ದಶಕದಲ್ಲಿ, ಮನಃಶಾಸ್ತ್ರಜ್ಞ ಎರಿಕ್ ಫ್ರಾಮ್, 'ಮಾರುಕಟ್ಟೆಯ ಮನೋಧರ್ಮ' ಎಂಬೊಂದು ಪರಿಭಾಷೆಯನ್ನು ಹುಟ್ಟುಹಾಕಿದ್ದ – ಆಧುನಿಕ ಮಾರುಕಟ್ಟೆಗಳಲ್ಲಿ ವಸ್ತುಗಳನ್ನು ಮಾರುವ ಬದಲು ತಮ್ಮ ಸ್ವಂತಿಕೆಯನ್ನೇ ಮಾರಿಕೊಳ್ಳಲು ಬಯಸುವ ವ್ಯಕ್ತಿತ್ವಮಾದರಿಗಳಿಗೆ ಅನ್ವಯವಾಗುವ ಹೆಸರು ಇದು. ಆದರೆ ಮುಂದೊಂದು ದಿನ, ಉಪಭೋಗಕ್ಕಾಗಿಯೇ ಉಪಭೋಗವನ್ನು ಮಾಡುವ, ಬಳಕೆಗಾಗಿಯೇ ಬಳಕೆ ಮಾಡುವ ಇನ್ನೊಂದು ಮನೋಧರ್ಮದ ವ್ಯಕ್ತಿಮಾದರಿಗಳು ನಿರ್ಮಾಣಗೊಳ್ಳಬಹುದು – ಎಂಬ ಮುನ್ನೋಟ ಎರಿಕ್ ಫ್ರಾಮನಿಗಿರಲಿಲ್ಲ. ಇಂಥ ಉಪಭೋಗಕೇಂದ್ರಿತ ವ್ಯಕ್ತಿತ್ವವೆಂಬುದು ಇವತ್ತು ತುಂಬ ಚಾಲ್ತಿಯಲ್ಲಿಯೂ ಆಕರ್ಷಣೆಯಲ್ಲಿಯೂ ಇರುವ ಮಾದರಿಯಾಗಿಬಿಟ್ಟಿದೆ. ಜಗತ್ತಿನಾದ್ಯಂತ ಇರುವ ಈ ಮನೋಧರ್ಮದ ಜನರು ಮತ್ತು ಸಮೂಹಗಳು ತಮ್ಮ ಬಳಕೆಯ ವೈಭವ ಪ್ರದರ್ಶನಕ್ಕಾಗಿಯೇ ಪ್ರಸಿದ್ಧರೂ ಆಗಿದ್ದಾರೆ. ಎರಡನೆಯ ಮಹಾಯುದ್ಧಕ್ಕಿಂತ ಹಿಂದಿನ ಕಾಲಗಳ ಅತಿಯಾಶೆಯ ಶ್ರೀಮಂತರೂ ಕೂಡ ಇವರೆದುರು ನಾಚಬೇಕು, ಹಾಗಿದೆ ಈ ಹೊಸ ಉಪಭೋಗಿ ವರ್ಗ.

ಬಳಕೆ ಸಂಸ್ಕೃತಿಯನ್ನು ಸಮರ್ಥಿಸಿಕೊಳ್ಳುವಾಗ, ಈ ಮಾರುಕಟ್ಟೆಯ ವಕ್ತಾರರು ಸಾಧಾರಣವಾಗಿ ಒಂದು ವಾದವನ್ನು ಮುಂದಿಡುತ್ತಾರೆ – ಬಳಕೆಯ ಪ್ರಮಾಣವು ಒಟ್ಟೂ ಸಮಾಜದಲ್ಲಿ ಏರುತ್ತ ಹೋದಂತೆ, ಆಯಾ ಸಮಾಜದ ಬಡವರೂ ತಮ್ಮ ಬದುಕಿನ ಭೌತಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಸಾಧ್ಯತೆ ಏರುತ್ತಹೋಗುತ್ತದೆ. ಜತೆಗೆ ಇದೇ ವಾದವು ಮುಂದುವರೆದು ಹೇಳುತ್ತದೆ – ಇಂಥ ಬಳಕೆಯಲ್ಲಿ ಆಸ್ಫೋಟಕ ಏರಿಕೆಯಾದಾಗ, ಅದರ ಜತೆಗೇ, ತಂತ್ರಜ್ಞಾನದಲ್ಲಿಯೂ ಹೊಸ ಆವಿಷ್ಕಾರಗಳಾಗುತ್ತವೆ; ಆರ್ಥಿಕ ಆಧುನೀಕರಣವೂ ಸಂಭವಿಸುತ್ತ ಹೋಗುತ್ತದೆ; ಮತ್ತು ಇವೆಲ್ಲವೂ ಅಭಿವೃದ್ಧಿಯ ಒಂದು ಚಾಲಕಯಂತ್ರವಾಗಿ ಕೆಲಸ ಮಾಡುತ್ತವೆ – ಎಂಬುದು ಆ ವಾದದ ತಿರುಳು. ಆದರೆ ಇಂಥ ಮಹಾನ್ ಸಾಮಾಜಿಕ ದರ್ಶನವು ವಾಸ್ತವದಲ್ಲಿ ಸಂಭವಿಸುವುದಿಲ್ಲವೆಂಬುದನ್ನು ನಾವು ಈಗಾಗಲೇ ಕಂಡಿದ್ದೇವೆ. ಈ ವರ್ಗಗಳು ಮನಸ್ಸಿನಲ್ಲಿಟ್ಟುಕೊಂಡಿರುವ – ಮತ್ತು ಇಷ್ಟಪಡುವ – ಉಪಭೋಗಕ್ರಮದಿಂದ ಸಾಮಾಜಿಕ ಲಾಭಗಳೇನೂ ಇಲ್ಲ. ಕಾರಣ, ಈ ಬಳಕೆ ಸಂಸ್ಕೃತಿಯು ಒಮ್ಮೆ ಸ್ಥಾಪಿತವಾದ ಮೇಲೆ, ಅದು ಕೇವಲ ಸ್ವಯಂಪೋಷಣೆಯ

ಕೆಲಸವನ್ನಷ್ಟೇ ಮಾಡುತ್ತದೆ. ಅತಿ ಬಳಕೆಯ ಶ್ರೀಮಂತರ ಹಾಗೆಯೇ ಈ ಅತಿ ಉಪಭೋಗದ ಸಂಸ್ಕೃತಿಗೂ ಸಹ ಉಪಭೋಗವೇ ಕಾರಣ, ಅದೇ ಕಾರ್ಯವೂ ಕೂಡ. ಈ ವಿಚಾರವು ಅಭಿವೃದ್ಧಿಯನ್ನು ಪ್ರತಿಪಾದಿಸುವ ಪಂಡಿತರಿಗೆ ಗೊತ್ತಿಲ್ಲದ್ದೇನಲ್ಲ. ಆದರೆ, ಉಪಭೋಗವು ಅಂತಿಮವಾಗಿ ಉಪಭೋಗ-ಕೇಂದ್ರಿತ ಅಭಿವೃದ್ಧಿಗೆ ಮತ್ತು ತಂತ್ರಜ್ಞಾನಕ್ಕೆ ದಾರಿಮಾಡಿಕೊಡುತ್ತದೆ – ಎಂದವರು ನಂಬುತ್ತಾರೆ. ಅವರ ಈ ಆರ್ಥಿಕ ತರ್ಕವು ತಪ್ಪು ಎಂದು ನಾನಿಲ್ಲಿ ಹೇಳುತ್ತಿಲ್ಲ. ಬದಲು, ಉಪಭೋಗಕ್ಕೆ ಅವರು ಕೊಡುವ ಸಮರ್ಥನೆಯು ಈ ಉಪಭೋಗ ಸಂಸ್ಕೃತಿಯ ಸೀಮಿತ ಚಿತ್ರವನ್ನು ಮಾತ್ರ ಕೊಡುತ್ತದೆ; ಅದಕ್ಕೆ ಜೀವಾಳವಾಗಿರುವ ಒಂದು ಲಕ್ಷಣವನ್ನು ಅವರು ಗುರುತಿಸುವುದಿಲ್ಲ – ಎಂಬುದು ನನ್ನ ವಾದ.

ಈ ಜೀವಾಳ ಲಕ್ಷಣ ಯಾವುದೆಂಬುದು ಅರ್ಥವಾಗಲಿಕ್ಕೆ ನಾವು ಒಂದು ಸಂಗತಿಯನ್ನು ಗುರುತಿಸಿಕೊಳ್ಳಬೇಕು – ಉಪಭೋಗವೆಂಬುದನ್ನು ಒಂದು ಸ್ವತಂತ್ರ ಮೌಲ್ಯವಾಗಿ ಸ್ಥಾಪಿಸಬೇಕೆಂದಿದ್ದರೆ ನಾವು ಮನುಷ್ಯಜೀವಿಗಳನ್ನೇ ಪುನರ್‌ಯೋಜಿಸಿ ರೂಪಿಸಬೇಕು. ಹಾಗೆ ಮಾಡುವ ಮೊದಲ ಹೆಜ್ಜೆ, ಆಯಾ ವ್ಯಕ್ತಿಗಳನ್ನು ಅವರವರ ಸಮುದಾಯ, ಸಂಪ್ರದಾಯ ಮತ್ತು ಕುಟುಂಬಗಳಿಂದ ಬೇರುಕಿತ್ತು ಪಲ್ಲಟಗೊಳಿಸುವುದು; ಮತ್ತು ಅವುಗಳ ಸ್ಥಳದಲ್ಲಿ ರಾಷ್ಟ್ರವೆಂಬ ಹೆಸರಿನ ವಿಶಾಲವೂ ಅನಾಮಧೇಯವೂ ಆದ ಹುಸಿ-ಸಮುದಾಯವೊಂದನ್ನು ಸ್ಥಾಪಿಸುವುದು. ಈ ರಾಷ್ಟ್ರದ ಜತೆಗೇ, ಸುಲಭ ನಿರ್ವಹಣೆಗೆ ಒದಗಿಬರುವ ಹಲವು ಸಾಂಸ್ಕೃತಿಕ ಉತ್ಪನ್ನಗಳನ್ನು ರೂಪಿಸಿ, ಅವುಗಳನ್ನು ಪರಂಪರೆಯೆಂದು ಘೋಷಿಸುವುದು (ಈ ಪರಂಪರೆಯೆಂಬುದು, ಅಲ್ಲಿ, ನಾವು ರಂಗಮಂದಿರಗಳಲ್ಲೂ ಪ್ರದರ್ಶನಾಲಯಗಳಲ್ಲೂ ತರಗತಿಗಳಲ್ಲೂ ಹಾಗೂ ಪ್ರವಾಸಿ ತಾಣಗಳಲ್ಲೂ ಉಪಭೋಗಿಸಬಹುದಾದ ಉತ್ಪನ್ನಗಳ ಒಂದು ಸಮುಚ್ಚಯವಾಗಿರುತ್ತದೆ). ಜತೆಗೆ, ಹಳೆಯ ಕೂಡುಕುಟುಂಬ ವ್ಯವಸ್ಥೆಯನ್ನು ಕಿತ್ತು ಅದರ ಬದಲಿಗೆ ಹೊಸ ಬಿಡಿಕುಟುಂಬಗಳನ್ನು ಕಟ್ಟುವುದು. ಇಂಥ ಬಿಡಿಕುಟುಂಬಗಳಲ್ಲಿ ವಯಸ್ಸಾದವರೂ ಮತ್ತು ಕಿರಿಯರೂ ನಮ್ಮ ಮೇಲೆ ಬಿದ್ದ ಜವಾಬ್ದಾರಿಯ ಹಾಗೆ, ಅಥವಾ ನಮ್ಮ ಖಾಸಗಿತನಕ್ಕೆ ಒದಗಿದ ತೊಡಕುಗಳಂತೆ ಕಾಣಿಸಿಕೊಳ್ಳುತ್ತಾರೆ; ಅಂಥವರ ಜವಾಬ್ದಾರಿಯನ್ನು ಹೊರುವುದು ಕೆಲವೊಮ್ಮೆ ಅನಿವಾರ್ಯವಾದರೂ ಅವರನ್ನು ಈ ಕುಟುಂಬಗಳೆಂದೂ ಸಮಗೌರವದಲ್ಲಿ ಕಾಣಲಾರವು. ಯಾಕೆಂದರೆ, ಈ ಕುಟುಂಬಗಳ ಕೇಂದ್ರ -- ಕಾಮದ ಸರಕಿನ ವ್ಯಾಪಾರಸಂಬಂಧದಲ್ಲಿ ಕೂಡಿಕೊಂಡಿರುವ ಗಂಡುಹೆಣ್ಣುಗಳ ಜೋಡಿ ಮಾತ್ರವೇ.

ಇವೆಲ್ಲದಕ್ಕೆ ಸಮಾನಾಂತರವಾಗಿ, ಉಪಭೋಗವಾದಕ್ಕೆ ಒಂದು ಸೈದ್ಧಾಂತಿಕ



ನೆಲೆಯನ್ನೂ ನಿರ್ಮಿಸಿಕೊಳ್ಳುವುದೂ ಈ ಮಾರ್ಗಕ್ಕೆ ಅಗತ್ಯವಾಗುತ್ತದೆ. ಹಲವು ಐರೋಪ್ಯ ವಿದ್ವಾಂಸರ ಪ್ರಕಾರ, ಆಧುನಿಕ ಉದಾರವಾದಿ ಬಂಡವಾಳವ್ಯವಸ್ಥೆಗೆ ಮೂಲಾಧಾರ – ಆಸ್ತಿಯನ್ನು ಬಯಸುವ ವ್ಯಕ್ತಿಯ ಪರಿಕಲ್ಪನೆ. ಈ ಪರಿಕಲ್ಪನೆಯನ್ನೀಗ ಉಪಭೋಗವನ್ನು ಬಯಸುವ ವ್ಯಕ್ತಿಯೆಂದು ಮಾರ್ಪಡಿಸಿಕೊಳ್ಳಬೇಕು. ಹಾಗೆಯೇ, ಆಸ್ತಿಯ ಹಕ್ಕನ್ನು ಉಪಭೋಗದ ಹಕ್ಕು ಎಂದು ಪುನರ್ವ್ಯಾಖ್ಯಾನಿಸಿಕೊಳ್ಳಬೇಕು. ಬಳಿಕ ಈ ಉಪಭೋಗಾಸಕ್ತ ವ್ಯಕ್ತಿಯ ಸಾರ್ವಭೌಮತ್ವವನ್ನು ಘೋಷಿಸಿಕೊಳ್ಳಬೇಕು – ಕಾರಣ, ರಾಷ್ಟ್ರ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಕುರಿತು ಪ್ರಸ್ತುತ ಇರುವ ಸಿದ್ಧಾಂತಗಳೆಲ್ಲವೂ ವ್ಯಕ್ತಿಯೆಂಬ ಪರಿಕಲ್ಪನೆಯ ಪಾವಿತ್ರ್ಯವನ್ನು ಆಧರಿಸಿಕೊಂಡೇ ರೂಪುಗೊಂಡಿರುವುದರಿಂದ, ಈಗ ಅದೇ ಪರಿಕಲ್ಪನೆಯು ಉಪಭೋಗವೆಂಬ ಕಾರ್ಯ ಮತ್ತು ಆ ಉಪಭೋಗದ ಸ್ವಾತಂತ್ರ್ಯಕ್ಕೂ ಆಧಾರವಾಗುವಂತೆ ಇದನ್ನು ಪುನರ್‌ನಿರೂಪಿಸಿಕೊಳ್ಳುವುದು ಅಗತ್ಯ. ಸಾಮಾಜಿಕ-ರಾಜಕೀಯ ವಲಯಗಳಲ್ಲಿ ಕ್ರಿಯಾಶೀಲರಾಗಿರುವ ಕೆಲವರು ಸೂಚಿಸುವಂತೆ, ಪ್ರಸ್ತುತ ಇರುವ ಪ್ರಮಾಣೀಕೃತ ಮಾದರಿಯ ಉತ್ಪಾದನಾ ಕ್ರಮಗಳು ಪ್ರಮಾಣೀಕೃತ ಮಾದರಿಯ ಉಪಭೋಗದ ಕ್ರಮಗಳಿಗೂ ಕಾರಣವಾಗಿವೆ; ಯಾಕೆಂದರೆ ಇಂಥ ಮಾದರಿಗಳು ಮಾತ್ರವೇ ಇವತ್ತು ಆರ್ಥಿಕವಾಗಿ ನಡೆಯಬಲ್ಲಂಥವಾಗಿವೆ. ಅದೇರೀತಿ, ಇವತ್ತು ಜಾಗತಿಕ ಸಮೂಹಸಂಸ್ಕೃತಿವಾಹಿನಿಗಳಲ್ಲಿ ಕಾಣಸಿಗುವ ಪ್ರಜಾಪ್ರಭುತ್ವದ ಆದರ್ಶಗಳು, ಸೂಕ್ಷ್ಮವಾಗಿ ಗಮನಿಸಿದರೆ, ಇಂಥ ಉಪಭೋಗಾಸಕ್ತ ಸಾರ್ವಭೌಮ ವ್ಯಕ್ತಿಯ ಪರಿಕಲ್ಪನೆ ಮತ್ತು ವ್ಯಕ್ತಿ-ಹಕ್ಕುಗಳನ್ನು ರಕ್ಷಿಸುವ ಸಲುವಾಗಿಯೇ ರೂಪುಗೊಂಡದ್ದು ಗೋಚರವಾಗುವಂತಿದೆ. ಜಾಗತಿಕ ಪರಿಸರ ಪರಿಸ್ಥಿತಿಯನ್ನು ಕುರಿತು ನಡೆದ ಕ್ಯೋಟೋ ನಿರ್ಣಯಕ್ಕೆ ಸಹಿ ಹಾಕಲು ವಿರೋಧ ವ್ಯಕ್ತಪಡಿಸುತ್ತ, ಆಗಿನ ಅಮೇರಿಕಾದ ಅಧ್ಯಕ್ಷರಾಗಿದ್ದ ಹಿರಿಯ ಜಾರ್ಜ್ ಬುಷ್ ಹೇಳಿದ್ದರು – 'ಮಾನ್ಯರೆ, ಅಮೇರಿಕನ್ ಜೀವನಕ್ರಮದಲ್ಲಿ ನಾವು ಯಾವ ರಾಜಿ ಮಾಡಿಕೊಳ್ಳುವುದು ಸಾಧ್ಯವೇ ಇಲ್ಲ'. ಅಥವಾ ಇನ್ನೂ ಕೆಲವರು ಬೇರೆ ರೀತಿಯಲ್ಲಿ ಹೇಳಿರುವಂತೆ – 'ಡಾಲರೀಕರಣಗೊಂಡ ಬಡತನ'ಕ್ಕೆ ಸಂವಾದಿಯಾಗಿ ಇವತ್ತು ಡಾಲರ್ ಪ್ರಭುತ್ವದ ಶ್ರೀಮಂತಿಕೆ ಮತ್ತು ಡಾಲರ್ ಪ್ರಣೀತ ವ್ಯಕ್ತಿತ್ವಗಳು ನಿರ್ಮಾಣವಾಗಿವೆ.

ಅಂಥ ಒಂದು ವ್ಯಕ್ತಿಗೆ – ಏಕಾಂಗಿತನದ, ಆತ್ಮರತಿಯ ಮತ್ತು ಸಮುದಾಯ ವಿಚ್ಛೇದಿತ ವ್ಯಕ್ತಿಗೆ – ಉಳಿಯುವ ಏಕೈಕ ಅಂತಿಮ ಮೌಲ್ಯವೆಂದರೆ, ಅದು ಉಪಭೋಗ ಮಾತ್ರ; ಅಂಥ ಉಪಭೋಗದಿಂದ ಮಾತ್ರವೇ ಆ ವ್ಯಕ್ತಿಗೆ ಸಾಮಾಜಿಕ ಅಂತಸ್ತು ಮತ್ತು ಸಂಬಂಧಗಳು ಸಾಧ್ಯವಾಗುತ್ತವೆ. ಅರ್ಥಾತ್, ಖಾಲಿಯಾಗಿರುವ ತನ್ನ ಸಾಮಾಜಿಕ

ಅಸ್ತಿತ್ವವನ್ನು ತುಂಬಿಕೊಳ್ಳುವ ಉಪಾಯವಾಗಿ ಆ ವ್ಯಕ್ತಿಯು ಉಪಭೋಗಕ್ಕೆ ಶರಣಾಗುತ್ತಾನೆ. ನಾನು ಉಪಭೋಗಿಸುತ್ತೇನೆ, ಆದ್ದರಿಂದ ನಾನು ಅಸ್ತಿತ್ವದಲ್ಲಿದ್ದೇನೆ – ಎಂಬುದು ಅಂಥ ವ್ಯಕ್ತಿಯ ಘೋಷವಾಕ್ಯವಾಗುತ್ತದೆ.

ಜಾಗತಿಕ ಮಾರುಕಟ್ಟೆ ನಿರ್ಮಾಣದ ಎಲ್ಲ ಕಾರ್ಯಸೂಚಿಗಳ ಹಿಂದಿರುವ ಒಂದು ಮೂಲ ಅಂಗಾಂಶ – ಇಂಥ ಏಕಾಂಗೀಕರಣಗೊಂಡ ವ್ಯಕ್ತಿ. ಮಾರಾಟ ಮಾಡುವುದೆಂದರೆ ಮೂಲತಃ ಬಯಕೆಗಳನ್ನು ಸೃಷ್ಟಿಸುವ ಕೆಲಸ. ಮೂಲಭೂತ ಅಗತ್ಯಗಳನ್ನು ಕುರಿತು ಯಾರೂ ಜಾಹೀರಾತು ನೀಡುವ ಅಗತ್ಯ ಇರುವುದಿಲ್ಲ; ಯಾಕೆಂದರೆ, ಜನ ಅವನ್ನು ತಮ್ಮಷ್ಟಕ್ಕೆ ತಾವೇ ಪಡೆದುಕೊಳ್ಳುತ್ತಾರೆ, ಅಥವಾ ಅದಕ್ಕಾಗಿ ದುಡಿದು ಅವನ್ನು ಗಳಿಸಿಕೊಳ್ಳುತ್ತಾರೆ. ಆದರೆ ಕೃತಕ ಅಗತ್ಯಗಳನ್ನು ಸೃಷ್ಟಿ ಮಾಡಲಿಕ್ಕೆ ಜಾಹೀರಾತುಗಳ ಸಹಾಯ ಬೇಕಾಗುತ್ತದೆ. ಇಂಥ ಕೃತಕ ಅಗತ್ಯಗಳನ್ನು ಮೂಲಭೂತ ಮಾನವ ಅಗತ್ಯಗಳೆಂಬಂತೆಯೇ ಬಿಂಬಿಸುವ ಮೂಲಕ ಹೊಸ ಬಯಕೆಗಳನ್ನು ಸೃಷ್ಟಿಸುವ ಕಲೆ ಮತ್ತು ವಿಜ್ಞಾನವೇ ಮಾರುಕಟ್ಟೆಶಾಸ್ತ್ರ. ಮಾರುಕಟ್ಟೆಯು ಈ ರೀತಿ, ಕೃತಕ ಮತ್ತು ಮೂಲಭೂತ ಅಗತ್ಯಗಳಿಗೆ ಕೊಂಡಿ ಹಾಕುತ್ತಿರುವ ಕೆಲಸವು, ಹಲವೊಮ್ಮೆ ನಮ್ಮ ಗಮನಕ್ಕೆ ಸಿಗದೆ ನುಣುಚಿಕೊಳ್ಳುತ್ತದೆ. ಆದ್ದರಿಂದಲೇ, ಈ ಉಪಭೋಗವಾದವೆಂಬುದು ಒಂದು ಕುಟಿಲೋಪಾಯವೆಂದೂ ಕೆಲವರು ಹೇಳುವುದಿದೆ; ವಿರುದ್ಧ್ವನಿಯ ಆಕರ್ಷಕ ಜಾಹೀರಾತುಗಳ ಬೆಂಬಲ ಪಡೆದು ಈ ಉಪಭೋಗವಾದವು ಮುಗ್ಧ ಸಾದಾರಣ ನಾಗರಿಕರನ್ನು ವಂಚಿಸುತ್ತದೆಂದು ಅವರ ಅಭಿಪ್ರಾಯ. ಆದರೆ, ಸಾಧಾರಣ ನಾಗರಿಕರು ಅಷ್ಟು ಸುಲಭವಾಗಿ ಮೋಸಹೋಗುವಂಥವರೇನಲ್ಲ. ಅವರು ಜಾಹೀರಾತುಗಳಿಂದ ಪ್ರಭಾವಿತರಾಗುತ್ತಾರೆ ನಿಜ, ಆದರೆ ಅದನ್ನು ಒಪ್ಪಿಬಿಡುವುದಿಲ್ಲ. ಆದ್ದರಿಂದ, ಆ ಜಾಹೀರಾತಿನ ಮೋಹಕತೆ ಅವನ್ನು ಸೆರೆ ಹಿಡಿಯುವುದಕ್ಕೆ ಅನುಕೂಲವಾಗುವಂತೆ, ಅವರ ಬದುಕುಗಳೊಳಗೆ ಒಂದು ಶೂನ್ಯ ಸ್ಥಿತಿಯನ್ನೇ ಮೊದಲೇ ನಿರ್ಮಿಸಿಕೊಳ್ಳುವುದು ಅಗತ್ಯವಾಗುತ್ತದೆ.

ಇಂಥ ಶೂನ್ಯಸ್ಥಿತಿಯೊಂದರ ಸೃಷ್ಟಿಯೇ ಈ ಪ್ರಕ್ರಿಯೆಯಲ್ಲಿ ತುಂಬ ಪ್ರಧಾನವಾದದ್ದು. ಯಾಕೆಂದರೆ, ವ್ಯಕ್ತಿಯೊಬ್ಬನ ಅಥವಾ ಒಬ್ಬಳ ಬದುಕಿನಿಂದ ಅವರಿಗಿರುವ ಆಳವಾದ ಸಮುದಾಯದ, ಕುಟುಂಬದ ಮತ್ತು ಪರಂಪರೆಯ ಬಂಧವನ್ನು ಕಡಿದುಹಾಕಿದರೆ ಮಾತ್ರವೇ ಅವರು ಏಕಾಂಗಿ-ವ್ಯಕ್ತಿಗಳಾಗಿ ಅಣುರೂಪಿವ್ಯಕ್ತಿತ್ವಗಳಾಗಿ ಮಾರ್ಪಡುತ್ತಾರೆ; ಆಗ ಮಾತ್ರವೇ ಅವರು ಬೇರೆಬೇರೆ ಹುಸಿ-ಬಂಧಗಳಲ್ಲಿ ಅರ್ಥ ಹುಡುಕಲು ಆರಂಭಿಸುತ್ತಾರೆ. ಇಂಥ ಹುಸಿ ಬಂಧಗಳಲ್ಲಿ ಇವತ್ತು ಅತ್ಯಂತ ಪ್ರಮುಖವಾದದ್ದು ಬಳಕೆದಾರರ ನಡುವಿನ ಬಂಧ. ಈ ಬಂಧ



ಎಷ್ಟು ಬಲವಾದದ್ದೆಂದರೆ, ಇವತ್ತು ಮೊದಲ ಜಗತ್ತಿನ ದೇಶಗಳ ರಾಷ್ಟ್ರಾಧ್ಯಕ್ಷರನ್ನೂ ಪ್ರಧಾನಮಂತ್ರಿಗಳನ್ನೂ ಈ ಉಪಭೋಗ-ಬಂಧವೇ – ಅವರು ಇಂಥ ವಿರಾಟ್ ಉಪಭೋಗ ಸಂಸ್ಕೃತಿಗೆ ಪರವಾಗಿ ನಿಲ್ಲುವವರೋ ಅಥವಾ ವಿರೋಧಿಗಳೋ ಎಂಬುದನ್ನಾಧರಿಸಿ – ಎತ್ತಲಾಗುತ್ತದೆ, ಅಥವಾ ಕೆಡವಲಿಕ್ಕೂ ಸಾಧ್ಯವಾಗುತ್ತದೆ. ಈ ಜಗತ್ತಿನಲ್ಲಿ ಇಂದು, ಉಪಭೋಗವೇ – ಅಥವಾ ಉಪಭೋಗದ ಆಶಯವೇ – ಹಲವು ಬದುಕುಗಳಿಗೆ ಅರ್ಥವಂತಿಕೆಯನ್ನು ತಂದುಕೊಡುವ ಮಾಧ್ಯಮವಾಗಿದೆ; ಈ ಸಂಗತಿಯು ಜಗತ್ತಿನ ಬಹುಸಂಖ್ಯಾತ ಜನವರ್ಗಕ್ಕೆ ವಿಪರ್ಯಾಸವೆಂದು ಕಂಡೀತಾದರೂ ಇದು ಸತ್ಯ. ಈ ಬಳಕೆ ಸಂಸ್ಕೃತಿಯೇ ಇವತ್ತು ಹೊಸ ಬಗೆಯ ಒಂದು ಅಂತರ್ರಾಷ್ಟ್ರೀಯತೆಯ ಹುಟ್ಟಿಗೂ ಕಾರಣವಾಗಿದೆ. ಆದರೆ, ವೈಚಿತ್ರ್ಯವೆಂದರೆ, ಇಂಥ ಅಂತರ್ರಾಷ್ಟ್ರೀಯತೆಯೇ, ಆ ಸಮೂಹಕ್ಕೆ ಸೇರಿದವರು ಜಗತ್ತಿನ ಇನ್ನುಳಿದ ಸಮುದಾಯಗಳ ಮತ್ತು ನಾಡುಗಳ ಸ್ಥಿತಿಗತಿಗಳ ಬಗ್ಗೆ ತಿಳಿಯಬೇಕೆಂಬ ಜವಾಬ್ದಾರಿಯಿಂದ ಅವರನ್ನು ಮುಕ್ತಗೊಳಿಸುತ್ತದೆ. ಹಾಗೆ ತಿಳಿಯಬೇಕಾದ ಅಗತ್ಯವೇ ಈ ಸಂದರ್ಭದಲ್ಲಿ ಉದ್ಭವಿಸುವುದಿಲ್ಲ – ಕಾರಣ, ಯಾಕೆಂದರೆ, ಉಳಿದ ಜನವರ್ಗವೂ ಉಪಭೋಗಾಸಕ್ತರೇ ಆಗಿದ್ದಾರೆಂದೂ ಮತ್ತು ಆದ್ದರಿಂದಲೇ ಅವರು ಅಸ್ತಿತ್ವದಲ್ಲಿದ್ದಾರೆಂದೂ ಈ ಮನೋಧರ್ಮವು ಭಾವಿಸಿಕೊಳ್ಳುತ್ತದೆ. ಅವರ ಉಪಭೋಗದ ಕ್ರಮವೊಂದನ್ನು ಅರಿತುಕೊಂಡರೆ ಸಾಕು, ಅವರನ್ನು ಅರಿತಂತೆಯೇ ಸರಿ – ಎಂದೂ ಈ ಉಪಭೋಗಿವರ್ಗವು ತಿಳಿದುಕೊಂಡಿದೆ.

ಹಾಗಿದ್ದರೂ, ಉಪಭೋಗವಾದವು ಸಂಸ್ಕೃತಿಗೆ ವಿರೋಧಿಯೇನಲ್ಲ. ಉಪಭೋಗವಾದವೂ ಕೂಡ ಒಂದು ಜೀವನದರ್ಶನವೇ ಆಗಿರುವುದರಿಂದ, ಅದರಲ್ಲಿ ಸಂಸ್ಕೃತಿಗೂ ಒಂದು ಅವಕಾಶ ಇದೆ. ಆದರೆ ನಾವು ಇದುವರೆಗೂ ಸಂಸ್ಕೃತಿಯೆಂದು ತಿಳಿದುಕೊಂಡಿದ್ದ ಸಂಗತಿಗೆ ಅಲ್ಲಿ ತೆರಪಿಲ್ಲ – ಅಂದರೆ, ಸದಾ ಸ್ಪಂದನಶೀಲವಾದ, ಹತೋಟಿಗೆ ಸಿಗದ, ಅಸ್ಪಷ್ಟ ರೂಪು-ಆಕಾರಗಳ ಮತ್ತು ಹೆಚ್ಚಿನ ವೇಳೆ ಆಧುನಿಕತೆ ಮತ್ತು ಪ್ರಗತಿಯ ಕಾರ್ಯಯೋಜನೆಗಳಿಗೆ ಪ್ರತಿರೋಧಕವೂ ಆಗಿರುವ ಸಂಸ್ಕೃತಿರೂಪಕ್ಕೆ ಅಲ್ಲಿ ಆಸ್ಪದವಿಲ್ಲ. ಆದರೆ, ಬಳಕೆಗೆ ಸಲೀಸಾಗಿ ಒದಗಿಬರುವ ಸಂಸ್ಕೃತಿಗೆ ಅಲ್ಲಿ ತೆರಪಿದೆ. ಅಂಥ ಹೊಸ ಸಂಸ್ಕೃತಿರೂಪವು ಒಮ್ಮೆ ಗೆದ್ದರೆ ಮುಗಿಯಿತು, ಆಮೇಲೆ ಈ ಜಗತ್ತಿನಲ್ಲಿ ನಮಗೆ ಪರಿಚಿತವಾದ ಹಲವಾರು ಸಂಗತಿಗಳಿಗೆ ಹೊಸ ಅರ್ಥ ಒದಗಿಬಿಡುತ್ತದೆ. ಉದಾಹರಣೆಗೆ, ಚೀನಾ ಮತ್ತು ಭಾರತದಂಥ ಪುರಾತನ ನಾಗರಿಕತೆಗಳಲ್ಲಿಯೇ ಇಂಥ ಪಲ್ಲಟಗಳೀಗ ತ್ವರಿತವಾಗಿ ನಡೆಯತೊಡಗಿರುವುದನ್ನು ನಾನು ಗಮನಿಸುತ್ತಿದ್ದೇನೆ. ಈಗಾಗಲೇ ಕಾಣುತ್ತಿರುವ

ಸೂಚನೆಗಳ ಪ್ರಕಾರವೇ, ಇವತ್ತಿನ ಉಪಭೋಗಕೇಂದ್ರಿತ ಮನೋಭೂಮಿಕೆಗೆ ಭಾರತದ ಭಾರತೀಯತೆಯೇ ಒಂದು ಹೊರೆ. ಆದರೆ, ಇನ್ನೊಂದು ದೃಷ್ಟಿಯಿಂದ, ಅದು ಒಂದು ಆಸ್ತಿಯೂ ಹೌದು. ಮುಂಬರುವ ಕೆಲ ವರ್ಷಗಳಲ್ಲೇ ಇಂಥ ಹೊಸ ಭಾರತೀಯತೆಯನ್ನು ನಗದಾಗಿ ಪರಿವರ್ತಿಸಿಕೊಳ್ಳುವ ಭಾರೀ ಪ್ರಯತ್ನಗಳು ನಡೆಯಲಿದೆಯೆಂಬ ಬಗ್ಗೆ ನಾವು ಸಂದೇಹಪಡಬೇಕಿಲ್ಲ – ಅದು ಸರಕಾಗಿ ಪರಿವರ್ತನೆಗೊಂಡ ಶಾಸ್ತ್ರೀಯ ಭಾರತವೂ ಆಗಬಹುದು; ಅಥವಾ ವಾರಾಂತ್ಯಗಳಲ್ಲಿ 'ವೀಕ್ಷಿಸಬಹುದಾದ' ಯಾ ಪ್ರವಾಸಿಧಾಮಗಳಲ್ಲಿ ಕೊಳ್ಳಬಹುದಾದ ಜಾನಪದೀಕೃತ ಭಾರತವೂ ಆದೀತು.

ಸಂಸ್ಕೃತಿಗಳು ಇಂಥ ಉಪಭೋಗವಾರ್ಗಕ್ಕೆ ಪ್ರತಿರೋಧವನ್ನು ಒಡ್ಡಬಹುದೆ? ಉತ್ತರ, ನಿಜವಾಗಿ ನನಗೆ ಗೊತ್ತಿಲ್ಲ. ಆದರೆ, ಆಯಾ ಸಂಸ್ಕೃತಿಗಳು ಅಳಿಸಿಹೋಗುವ ನಿಜವಾದ ಅಥವಾ ಕಾಲ್ಪನಿಕ ಸವಾಲು ಎದುರಾದಾಗ, ಅವು ಎದ್ದುನಿಂತು ತಿರುಗಿ ಹೊಡೆಯಬಲ್ಲವು – ಎಂದು ನಂಬಲು ನಾನು ಬಯಸುತ್ತೇನೆ. ಮನುಷ್ಯ ದೇಹಶಾಸ್ತ್ರವಂತೂ ಹಾಗೆ ಆಕ್ರಮಣಕಾರಿ ಪ್ರತಿರೋಧವನ್ನು ಕೊಡಬಲ್ಲದು. ಉದಾಹರಣೆಗೆ, ಇವತ್ತು ಮೊದಲ ಜಗತ್ತಿನಲ್ಲಿ ಕಾಣತೊಡಗಿರುವ ಬಹುತೇಕ ಮಾರಣಾಂತಿಕ ಖಾಯಿಲೆಗಳು ಅತಿ ಉಪಭೋಗಕ್ಕೆ ನೇರವಾಗಿ ಸಂಬಂಧಿಸಿದಂಥವೇ. ಅದರಲ್ಲೂ ಉಪಭೋಗದ ಬಗ್ಗೆ ಇನ್ನೂ ನಿರಾಶೆಯನ್ನು ತಾಳದೆಯೇ ಉಳಿದಿರುವ ಮೊದಲ ಜಗತ್ತಿನಲ್ಲಿ ನೆಲೆಸಿದ ಅನ್ಯ ಜನಾಂಗಗಳ ಸ್ಥಿತಿ ಹೆಚ್ಚು ಗಂಭೀರವಾಗಿದೆ. ಇವತ್ತಿನ ಪಶ್ಚಿಮದ ಸಮಾಜಗಳಲ್ಲಿ ಬದುಕುತ್ತಿರುವ ದಕ್ಷಿಣ ಏಶಿಯಾದ ವಲಸೆಗಾರ ಸಮುದಾಯದಲ್ಲಿ, ಹೃದಯಸಂಬಂಧಿ ರೋಗಗಳ ಪ್ರಮಾಣವು ಸ್ಥಳೀಯರಿಗಿಂತ ಮೂರು ಪಟ್ಟು ಹೆಚ್ಚಿದೆ. ಇಂಥ ವಿಧಾನಗಳ ಮೂಲಕವೇ, ಪ್ರಾಯಶಃ, ಪ್ರಕೃತಿ ಮತ್ತು ಸಂಸ್ಕೃತಿಗಳೆರಡೂ ಸಮತೂಕವೊಂದನ್ನು ಮರಳಿ ಗಳಿಸಿಕೊಳ್ಳಲು ಹವಣಿಸುತ್ತವೆ; ಮತ್ತು ತಮ್ಮ ಉಳಿವನ್ನು ಕಾಪಾಡಿಕೊಳ್ಳುವ ಪ್ರಯತ್ನ ನಡೆಸುತ್ತವೆ.

# ದಾಖಲೆಗಳು

## ವಿನಯ ಲಾಲ್

### ಕನ್ನಡಕ್ಕೆ: ಅಕ್ಷರ ಕೆ.ವಿ.

ನಾಗರಿಕತೆಗಳು, ದೇಶಗಳು, ಸಂಸ್ಥೆಗಳು ಮತ್ತು ವ್ಯಕ್ತಿಗಳನ್ನೂ ಕೂಡಿದಂತೆ ಎಲ್ಲ ಸಂಗತಿಗಳ 'ಪ್ರಗತಿ' ಮತ್ತು ಪತನಗಳನ್ನು ಅಳೆಯುವುದಕ್ಕೆ ನಾವು ಬಳಸುವ ದಾಖಲೆಗಳನ್ನು ಕುರಿತಂತೆ ಚಿತ್ರವಿಚಿತ್ರವಾದ ಹಲವಾರು ವಿಚಾರಗಳನ್ನು ಹೇಳಬಹುದು. ಉದಾಹರಣೆಗೆ, ದೌರ್ಜನ್ಯಕಾರರು ತಾವು ಮಾಡಿರುವ ಪಾತಕಗಳ ವಿವರವಾದ ದಾಖಲೆಪಟ್ಟಿಯನ್ನು ಉಳಿಸಿಹೋಗುವುದರಲ್ಲಿ ವಿಶೇಷ ಆಸಕ್ತಿಯನ್ನು ತೋರಿಸುತ್ತಾರೆ. ತಮ್ಮ ಅತ್ಯಂತ ಕಡುವಿರೋಧಿಗಳನ್ನೂ ಪ್ರಜೆಗಳನ್ನೂ ತಾವು ಯಾವೆಲ್ಲ ರೀತಿಗಳಲ್ಲಿ ನಿರ್ನಾಮ ಮಾಡಿದೆವೆಂಬುದನ್ನು ಅವರು ಭವಿಷ್ಯಕಾಲಕ್ಕೆ ತಿಳಿಯಲೆಂಬಂತೆ ದಾಖಲಿಸಿಹೋಗಿದ್ದಾರೆ. ನಾಜಿಗಳು ತುಂಬ ನಿಖರವಾದ ದಾಖಲೆಗಳನ್ನು ಇರಿಸಿದ್ದಾರೆ – ಮೃತರಾದ ಖೈದಿಗಳನ್ನು ಕುರಿತು ಅವರಿಟ್ಟ ಖಾತೆ ಪುಸ್ತಕಗಳನ್ನು ತೆಗೆದು ನೋಡಿದರೆ, ಅದರಲ್ಲಿ ಯಾವ ಯಾತನಾಶಿಬಿರಕ್ಕೆ ಯಾವ ರೈಲಿನ ಮೂಲಕ ಯಾವಯಾವ ಯಹೂದಿಗಳನ್ನು ಸಾಗಿಸಲಾಯಿತು, ಪ್ರತಿ ರೈಲಿನಲ್ಲಿದ್ದ ಯಹೂದಿಗಳ ಸಂಖ್ಯೆ ಎಷ್ಟು, ವಿಷಾನಿಲಪ್ರಯೋಗದಿಂದ ಕೊಲ್ಲಲ್ಪಟ್ಟ ಯಹೂದಿಗಳ ಸಂಖ್ಯೆ ಎಷ್ಟು – ಎಂಬುದೆಲ್ಲ ವಿಶದವಾಗಿ ದೊರಕುತ್ತದೆ.

ಭಾರತವನ್ನಾಳಿದ ಬ್ರಿಟಿಷರಿಗೂ ಇಷ್ಟೇ ವಿಸ್ತಾರವಾದ ಆಡಳಿತಾತ್ಮಕ ದಾಖಲೆಗಳನ್ನು ಇಡುವ ಪರಿಪಾಠವಿತ್ತು. ಆ ವಸಾಹತುಶಾಹಿ ಆಡಳಿತವು ತನ್ನ ಹಲವು ಹತ್ತು ಇಲಾಖೆಗಳಿಗೆ ಇಲ್ಲಿಯ ಜನಾಂಗಗಳ, ಗಿಡಮರಗಳ, ಖನಿಜವಸ್ತುಗಳ ಮತ್ತು ನೈಸರ್ಗಿಕ ಸಂಪನ್ಮೂಲಗಳ ವೈವಿಧ್ಯದ ವಿವರ ದಾಖಲೆಗಳನ್ನಿಡುವ ಕೆಲಸವನ್ನು ವಹಿಸಿ ಕೊಟ್ಟಿತ್ತು. ಇಂಥ ಸಾಮ್ರಾಜ್ಯಶಾಹಿ ದಾಖಲೆಯ ವಿಧಾನಗಳು ಆಳುವ ಪ್ರಭುತ್ವಕ್ಕೆ ಸಹಾಯಕವಾದಂಥವೇ ಆಗಿದ್ದವು; ವಿಶಾಲ ಬಂದೀಖಾನೆಯಲ್ಲಿ ಖೈದಿಗಳನ್ನೆಲ್ಲ ಕಾಯಲಿಕ್ಕಾಗಿ ರೂಪಿಸಿದ ಪ್ಯಾನಾಪ್ಟಿಕಾನ್ ಎಂಬ ಕೇಂದ್ರ ವಾಚನಾಸ್ಥಳದ ಹಾಗೆಯೇ,

ಈ ದಾಖಲೆಗಳೂ ಕೂಡಾ ಅಂಥ ಪ್ಯಾನಾಪ್ಟಿಕಾನ್‌ನ ಪುಸ್ತಕರೂಪದ ಆವೃತ್ತಿಗಳಾಗಿದ್ದವು. ಮತ್ತು ಅದರ ಮೂಲಕ ಬ್ರಿಟಿಷ್ ಆಡಳಿತದ ದೀರ್ಘಾಯುಷ್ಯಕ್ಕೆ ತುಂಬ ಅಗತ್ಯವಾಗಿರುವ ಎಲ್ಲ ಮಾಹಿತಿಗಳನ್ನೂ ಅರಿಯುವ ಉದ್ದೇಶವನ್ನು ಪ್ರಭುತ್ವವು ಇಟ್ಟುಕೊಂಡಿತ್ತು. ಕ್ರಮೇಣ, ೧೯ನೆಯ ಶತಮಾನದ ತುದಿಯ ವರ್ಷಗಳಲ್ಲಿ ರಾಷ್ಟ್ರೀಯತಾ ವಾದವು ಪ್ರಬಲವಾಗುತ್ತಿದ್ದಂತೆ, ಈ ದಾಖಲೆಗಳು ಇನ್ನೂ ಇನ್ನೂ ವಿವರಗಳನ್ನು ಸೇರಿಸಿಕೊಳ್ಳುತ್ತ ಹೋಗಬೇಕಾಯಿತು – ಕಾರಣ, ಸ್ಥಳೀಯರ ನಡವಳಿಕೆಗಳ ಬಗ್ಗೆ ಮುನ್ಸೂಚನೆ ನೀಡಿ ಅವರಲ್ಲಿ ದಂಗೆಕಾರರನ್ನು ಹತೋಟಿಯಲ್ಲಿಡಲಿಕ್ಕೂ ಇವೇ ದಾಖಲೆಗಳು ಸಹಾಯಕವಾಗುತ್ತವೆಂಬ ಹೊಸ ಒತ್ತಡವು ಆಗ ರಾಜ್ಯದ ಮೇಲೆ ಬಿತ್ತು. ಮುಂದೆ, ಹೊಸದಾಗಿ ಆವಿಷ್ಕಾರಗೊಂಡ ರಾಷ್ಟ್ರಪ್ರಭುತ್ವವೂ ಇದೇ ಸಾಮ್ರಾಜ್ಯಶಾಹಿ ದಾಖಲೆ ವಿಧಾನವನ್ನು ಬಳುವಳಿಯಾಗಿ ಪಡೆದುಕೊಂಡೇ ಹುಟ್ಟಿತು. ಎಷ್ಟರಮಟ್ಟಿಗೆಂದರೆ, ಇವತ್ತು ರಾಷ್ಟ್ರಪ್ರಭುತ್ವವೊಂದರ ಸೂಚಕ ಚಿಹ್ನೆಗಳಾಗಿ ಒಂದು ರಾಷ್ಟ್ರಗೀತೆಯೂ ರಾಷ್ಟ್ರಧ್ವಜವೂ ರಾಷ್ಟ್ರಭಾಷೆಯೂ ಇರುವಂತೆಯೇ ರಾಷ್ಟ್ರೀಯ ಪತ್ರಾಗಾರವೂ ಇದೆ. ಇಂಥ ರಾಷ್ಟ್ರೀಯ ದಾಖಲೆ ಸಂಗ್ರಹಾಲಯಗಳು, ಎಲ್ಲ ದೇಶಗಳಲ್ಲೂ ಆಯಾ ರಾಷ್ಟ್ರಗಳ ರಹಸ್ಯಗಳ, ದೌರ್ಜನ್ಯಗಳ ಮತ್ತು ದುಷ್ಕರ್ಮಗಳ ಅಡಗುದಾಣವೂ ಆಗಿರುತ್ತವೆ. ಹಾಗೆಯೇ ಅಂಥ ಪ್ರತಿ ಸಂಗ್ರಹಾಲಯದಲ್ಲಿ ಆಯಾ ದೇಶವು ಕಳೆದುಕೊಂಡ ಮತ್ತು ಬೇಕಂತಲೇ ವರ್ಜಿಸಿದ ಶಾಂತಿಯ ಸಾಧ್ಯತೆಗಳ ಕಥಾನಕವೂ ಅಡಕವಾಗಿರುತ್ತದೆ.

ಆಧುನಿಕ ಪರಿಭಾಷೆಯಲ್ಲಿ, ದಾಖಲೆಗಳ ಬಗ್ಗೆ ಮಾತಾಡುವುದೆಂದರೆ, ಅದು ಅಂಕಿಸಂಖ್ಯೆಗಳ ಬಗ್ಗೆ ಮಾತಾಡುವುದೂ ಹೌದು. ಆಧುನಿಕ ಕಾಲಸ್ಥಿತಿಯಲ್ಲಿ ಸಂಖ್ಯೆಗಳೆಂದರೆ ಅವು ಸಂಪೂರ್ಣವಾಗಿ ಉಪಯೋಗಾತ್ಮಕ ಸ್ವರೂಪದವು; ಅಧಿಕಾರಶಾಹಿಗೆ ಬೆಂಬಲವಾಗಿರುವ ಸಂಖ್ಯಾತಃಖ್ತೆಗಳ ಮೂಲ ಅವು. ಆದರೆ ಹಿಂದೊಂದು ಕಾಲದಲ್ಲಿ ಇವೇ ಸಂಖ್ಯೆಗಳು ಹಲವು ಸಂಸ್ಕೃತಿಗಳ ನಿರ್ಮಾಣದಲ್ಲಿ ತುಂಬ ಕ್ರೀಡನೀಯಕವಾದ ಮತ್ತು ಕ್ರಿಯಾಶೀಲವಾದ ಪಾತ್ರ ವಹಿಸಿದ್ದವು. ಉದಾಹರಣೆಗೆ – ಲಾಸ್ ಎಂಜಲೀಸ್ ಲೇಕರ್ಸ್ ತಂಡದ ತಾರಾ ಆಟಗಾರ ಷಾಕಿಲ್ ಓ' ನೀಲ್ ತನ್ನ ಬ್ಯಾಸ್ಕೆಟ್‌ಬಾಲ್ ಆಟದಲ್ಲಿ ಹೆಚ್ಚುವರಿಯಾಗಿ ದೊರೆತ ಎಸೆತಗಳಲ್ಲಿ ಎಷ್ಟನ್ನು ವ್ಯರ್ಥಗೊಳಿಸಿದ್ದ ಎಂಬ ಅಂಕಿಸಂಖ್ಯೆಯು ನಮಗಿವತ್ತು ಅರ್ಥಹೀನ ದಾಖಲೆಯೆಂದು ಅನ್ನಿಸಬಹುದು. ಆದರೆ ಅಂಥ ದಾಖಲೆಕಾರರ ದೃಷ್ಟಿಯಿಂದ ಅದು ತುಂಬ ಉಪಯುಕ್ತವಾಗಿದ್ದ ಸಂಖ್ಯೆಯೇ ಸರಿ – ಕಾರಣ, ಆ ಆಟಗಾರ ತನ್ನ ಚಳಕವನ್ನು ಎಷ್ಟರಮಟ್ಟಿಗೆ ವೃದ್ಧಿಸಿಕೊಳ್ಳುತ್ತಿದ್ದಾನೆ ಎಂಬ ಬಗ್ಗೆ ಮತ್ತು ಆತನ ವಿರೋಧಿ ತಂಡಗಳು



ಆತನಿಗೆ ಹೇಗೆ ತಡೆಯೊಡ್ಡಬಹುದು ಎಂಬುದನ್ನು ಕುರಿತಾಗಿ ಇವು ಅಮೇರಿಕಾದ ಕ್ರೀಡಾಲೋಕದಲ್ಲಿ ಚರ್ಚೆಯಾಗಬಲ್ಲಂಥ ದಾಖಲೆಗಳಾಗಿದ್ದವು. ಅಮೇರಿಕಾದ ಕ್ರೀಡಾತಜ್ಞರು ಇಂಥ ಅಂಕಿಸಂಖ್ಯೆಗಳನ್ನು ಹಾಸ್ಯಕ್ಕಾಗಿ ಉದುರಿಸುವುದಿಲ್ಲ; ಬದಲು, ತುಂಬ ಗಂಭೀರವಾಗಿಯೇ ಉಲ್ಲೇಖಿಸಿ ಚರ್ಚಿಸುತ್ತಾರೆ. ಯಾವುದೋ ಒಂದು ಆಟದಲ್ಲಿ ಮೈಖೆಲ್ ಜೋರ್ಡಾನ್ ಗಳಿಸಿದ ೬೦ಕ್ಕೂ ಹೆಚ್ಚಿನ ಪಾಯಿಂಟುಗಳು ಅವರ ಚರ್ಚೆಯಲ್ಲಿ ಹೊಸತಾಗಿ ನಿರ್ಮಾಣವಾಗುತ್ತಿರುವ ಇತಿಹಾಸವೊಂದಕ್ಕೆ ದೃಷ್ಟಾಂತವೆಂಬಂತೆ ಗೋಚರಿಸುತ್ತವೆ – ಕೆಲವು ಅಮೇರಿಕನ್ನರಿಗೆ ಗೊತ್ತಿರುವ ಮತ್ತು ಅವರು ಗೊತ್ತುಮಾಡಿಕೊಳ್ಳಲು ಬಯಸುವ 'ಇತಿಹಾಸ'ದ ಪ್ರಭೇದವು ಇದೊಂದು ಮಾತ್ರವೇ.

ಸಂಖ್ಯೆಗಳು ಎಂಥ ಕ್ರೀಡನೀಯ ಕ್ರಿಯಾಶೀಲತೆಯನ್ನು ಸೃಷ್ಟಿಸಬಲ್ಲವು ಎಂಬುದನ್ನು ಅರ್ಥಮಾಡಿಕೊಳ್ಳಲಿಕ್ಕೆ ನಾವು ಹಿಂದೂಗಳ ಸಾಂಸ್ಕೃತಿಕ ಸೃಷ್ಟಿ ಪುರಾಣಗಳ ಉದಾಹರಣೆಯತ್ತ ತಿರುಗಬೇಕು. ಈ ಸಂಸ್ಕೃತಿಯಲ್ಲಿ ವರ್ಗೀಕರಣ ಮತ್ತು ಗಣನೆಗಳೆರಡೂ ತುಂಬ ಆತ್ಯಂತಿಕವಾದ ಒಂದು ಉಪಕರಣವೆಂದು ಭಾವಿಸಲ್ಪಟ್ಟಿದ್ದವು – ದೇವರ ಪೂಜೆಯಲ್ಲಿ, ಬಲಿಯ ವಿಧಿಗಳಲ್ಲಿ, ಸಾಹಿತ್ಯ ಕೃತಿಗಳ ನಿರ್ಮಾಣದಲ್ಲಿ, ವಂಶವೃಕ್ಷಗಳ ನಿರೂಪಣೆಯಲ್ಲಿ, ಜ್ಯೋತಿಷ್ಯದಲ್ಲಿ ಮತ್ತು ಕಾಮಶಾಸ್ತ್ರದಲ್ಲಿಯೂ ಕೂಡ ಇಲ್ಲಿ ಸಂಖ್ಯೆಗಳು ಬಳಕೆಯಾಗುತ್ತಿದ್ದವು. ಉದಾಹರಣೆಗೆ ಕಾಮಶಾಸ್ತ್ರವು – ಇವತ್ತಿನ ಜನಗಳಿಗೆ ಹೋಲಿಸಿದರೆ ಸಾಪೇಕ್ಷವಾಗಿ ಕಡಿಮೆ ವಿಷಯಾಸಕ್ತಿಯನ್ನು ಹೊಂದಿದ್ದರೆಂದು ಭಾವಿತವಾಗುವ ಅವತ್ತಿನ ಜನಗಳ ಸಂದರ್ಭದಲ್ಲಿಯೂ ಕೂಡ – ಸಂಭೋಗದಲ್ಲಿ ಎಷ್ಟು ಬಗೆಯ ಆಸನಗಳು ಸಾಧ್ಯವೆಂಬುದನ್ನು ನಿಖರ ಸಂಖ್ಯೆಗಳ ಮೂಲಕವೇ ನಿಗದಿಪಡಿಸುತ್ತದೆ. ಹಾಗೆಯೇ ಅಥರ್ವವೇದವು (ದಾಳಗಳನ್ನು ಉಪಯೋಗಿಸಿ) ಐವತ್ತೂರು ಬಗೆಯ ಮಾಟಮಂತ್ರಗಳನ್ನು ಮಾಡಬಹುದು ಎಂದೂ ಮತ್ತು ಸಾವಿನಲ್ಲಿ ಒಟ್ಟು ೧೦೧ ಬಗೆಯ ಮರಣಗಳಿವೆಯೆಂದೂ ನಿಖರವಾಗಿ ಹೇಳುತ್ತದೆ. ಸಂಖ್ಯೆಗಳನ್ನು ಕುರಿತು ಹಿಂದೂಗಳಿಗಿದ್ದ ಇಂಥ ಕುತೂಹಲವು ಹಾಸ್ಯಾಸ್ಪದವಾಗಿ ಕಂಡರೂ ಆ ಗುಣವು ತುಂಬ ಸಂಸ್ಕೃತಿವಿಶಿಷ್ಟವೂ ಹೌದು – ಎಂಬ ಸಂಗತಿಯು ಇಂಗ್ಲಿಷರಿಗೆ ಬೆರಗನ್ನು ಹುಟ್ಟಿಸಿದೆ. ಉದಾಹರಣೆಗೆ – ಸೃಷ್ಟಿಕರ್ತನು ಗರ್ಭಾವಸ್ಥೆಯಲ್ಲಿ ಕಳೆದ ಕಾಲವು ೧೫,೫೫,೨೦,೦೦,೦೦,೦೦೦ ವರ್ಷಗಳು ಎಂಬ ಸಂಖ್ಯೆಯೂ ಮತ್ತು ಅದೇ ಸೃಷ್ಟಿಕರ್ತನು 'ಸೃಷ್ಟಿಗೆ ಅನುಕೂಲವಾಗುವಂತೆ ನಪುಂಸಕತ್ವದಿಂದ ಪುರುಷತ್ವಕ್ಕೆ ಪಲ್ಲಟಗೊಂಡು' ಸೃಷ್ಟಿಕ್ರಿಯೆಯನ್ನು ಪೂರ್ಣಗೊಳಿಸಲಿಕ್ಕೆ ೧,೨೦,೬೪,೦೦೦ ವರ್ಷಗಳನ್ನು ತೆಗೆದುಕೊಂಡನೆಂಬ ದಾಖಲೆಯನ್ನೂ ಗಮನಿಸಿದ ಆ ಕಾಲದ ಚಿಂತಕ ಜೇಮ್ಸ್

ಮಿಲ್, ಇಂಥ ಗಣನಕ್ರಮವು ಹಿಂದೂಗಳ 'ಒರಟು ಮತ್ತು ಅಪ್ರಬುದ್ಧ' ಮನಸ್ಸಿನ ಸಂಕೇತವೆಂದು ಹೇಳಿದ್ದ. ಮಿಲ್‌ಗಿಂತ ಹೆಚ್ಚು ಬುದ್ಧಿವಂತನೆಂದು ಭಾವಿಸಲಾಗುವ ತತ್ತ್ವಜ್ಞಾನಿ ಹೆಗೆಲ್ ಕೂಡಾ ಭಾರತೀಯ ಸಂಖ್ಯೆಗಳಿಂದ ಇಷ್ಟೇ ನಿಬ್ಬೆರಗಾಗಿದ್ದ. ಕೆಲವು ರಾಜರು ೭೦,೦೦೦ ವರ್ಷ ಆಳಿದರು ಮತ್ತು ಮತ್ತು ಬ್ರಹ್ಮನು ೨೦,೦೦೦ ವರ್ಷ ಬದುಕಿದ್ದ ಎಂಬ ನಂಬಿಕೆಯನ್ನು ಕುರಿತಂತೆ ಅಚ್ಚರಿಗೊಂಡ ಹೆಗೆಲ್ ಹೀಗೆ ತೀರ್ಮಾನಿಸಿದ್ದ – 'ಸಂಖ್ಯೆಗಳಿಗೆ ನಾವು ಯಾವ ಬಗೆಯ ತಾರ್ಕಿಕ ಅರ್ಥಗಳನ್ನೂ ಮೌಲ್ಯವನ್ನೂ ಆರೋಪಿಸುತ್ತೇವೆಯೋ ಅಂಥ ತಾರ್ಕಿಕ ಅರ್ಥವಂತಿಕೆ - ಮೌಲ್ಯಗಳು ಈ ಸಂಖ್ಯೆಗಳಿಗೆ ಇಲ್ಲ'. ಐರೋಪ್ಯ ಮನೋಲೋಕದ ಇಬ್ಬರು ದಿಗ್ಗಜರು ಈ ರೀತಿ ಪ್ರತಿಕ್ರಿಯಿಸುತ್ತಿದ್ದ ಸರಿಸುಮಾರು ಇದೇ ಕಾಲದಲ್ಲೇ, ಇನ್ನೊಂದು ಕಡೆಗೆ, ಇಂಗ್ಲೆಂಡು ಅಂಥದೇ ಇನ್ನೊಂದು ಸಂಖ್ಯಾಸಂಗ್ರಹಕಾರ್ಯದಲ್ಲಿ ತೊಡಗಿತ್ತು; ವಿಜ್ಞಾನದ ಚರಿತ್ರಕಾರ ಐಯಾನ್ ಹ್ಯಾಕಿಂಗ್ ಈ ಪ್ರಕ್ರಿಯೆಯನ್ನು 'ಸಂಖ್ಯಾರತಿಯ ಉನ್ಮಾದ' ಎಂದು ಕರೆದಿದ್ದಾನೆ. ಆಗ ಅಲ್ಲಿ ಮೃತದೇಹಗಳನ್ನು ಭರದಿಂದ ಎಣಿಸಲಾಗುತ್ತಿತ್ತು; ಒಂದು ವರ್ಷದ ಅವಧಿಯಲ್ಲಿ ರೂಢಿಗತ ಅಪರಾಧಿಗಳಿಗೆ ಎಷ್ಟು ಬಾರಿ ಛಡಿಯೇಟಿನ ಶಿಕ್ಷೆ ನೀಡಲಾಯಿತೆಂಬ ಅಂಕಿಅಂಶದಿಂದ ಆರಂಭಿಸಿ, ಜೈಲುಗಳಲ್ಲೂ ಆಶ್ರಯಧಾಮಗಳಲ್ಲೂ ಎಷ್ಟು ಜನ ಕುಡುಕರು-ಹುಚ್ಚರು ಇದ್ದಾರೆಂಬ ಲೆಕ್ಕಾಚಾರದವರೆಗೆ – ನಾನಾ ಮಾದರಿಯ ಸಂಖ್ಯಾರಾಶಿಗಳನ್ನು ಆಗ ಇಂಗ್ಲೆಂಡಿನಲ್ಲಿ ಕಲೆಹಾಕಲಾಯಿತು. ಮುಂದೆ ನಡೆಯತೊಡಗಿದ 'ಅನಾಹುತಗಳ ದಾಖಲೆ'ಗಳಿಗೆ ಈ ಗಣತಿಯೇ ಆರಂಭವೆಂದೂ ಬೇಕಿದ್ದರೆ ಹೇಳಬಹುದು. ಇಂಗ್ಲೆಂಡಿನ ಈ ಗಣನಕಾರ್ಯದ ಬಗ್ಗೆಯೇನಾದರೂ ಹೆಗೆಲ್ ಮತ್ತು ಮಿಲ್ ಗಮನ ಹರಿಸಿದ್ದರೆ, ಅವರಿಗೆ ಈ ಗಣತಿಯ ಹಿಂದಿರುವ ಪಾತಕರೂಪಿ ಪ್ರಜ್ಞೆಯು ಅರಿವಿಗೆ ಬರಬಹುದಾಗಿತ್ತು – ಕಾರಣ, ಈ ದಾಖಲೆಗಳ ಮೂಲಕವೇ ಆ ಸಮಾಜವು ತನ್ನೊಳಗಿನ ಬಂಡುಕೋರರನ್ನೂ ಬಹಿಷ್ಕೃತರನ್ನೂ ದಲಿತದಮನಿತರನ್ನೂ ಅಪರಾಧಿಗಳನ್ನೂ ಭಿನ್ನಮತೀಯರನ್ನೂ ವಿರೋಧಿಗಳನ್ನೂ ಹೇಗೆ ಹತೋಟಿಯಲ್ಲಿಟ್ಟುಕೊಂಡು ನಿರ್ವಹಿಸಬೇಕೆಂಬ ಬಗ್ಗೆ ತಿಳಿಯುವ ಪ್ರಯತ್ನ ಮಾಡತೊಡಗಿತ್ತು.

ಹೆಗೆಲ್ ಮತ್ತು ಜೇಮ್ಸ್ ಮಿಲ್ ಮೇಲ್ಕಂಡಂತೆ ಉಲ್ಲೇಖಿಸಿ ಅಪಹಾಸ್ಯ ಮಾಡಿದ ಭಾರತೀಯ ಸಂಖ್ಯಾಗಣನೆಗಳು, ಪ್ರಾಯಶಃ ಯಾವುದೇ 'ಅರ್ಥ'ವೂ ಇಲ್ಲದ ಕೆಲಸವೇನಲ್ಲ ಎಂಬ ಸಂಗತಿಯು ಆ ಕಾಲದ ಐರೋಪ್ಯ ವೀಕ್ಷಕರಿಗೆ ಅರ್ಥವಾಗುವುದು ಶಕ್ಯವಿರಲಿಲ್ಲ; ಹಾಗೆಯೇ, ಈ ಸಂಖ್ಯಾಗಣನ ವಿಧಾನಗಳು ಜಡತರ್ಕಕ್ಕಿಂತ ಭಿನ್ನವಾದ ಇನ್ನೊಂದು ಸಾಂಸ್ಕೃತಿಕ ಚಿಂತನಕ್ರಮದ ಫಲವಿದ್ದೀತು



ಎಂಬ ಯೋಚನೆಯು ಆ ಕಾಲದಲ್ಲಿ ಭಾರತದ ಜ್ಞಾನಶಾಖೆಗಳ ಬಗ್ಗೆ ಅಭ್ಯಾಸ ಮಾಡಿದ್ದ ಅಲ್ಲಿನ 'ತಜ್ಞ'ರಿಗೆ ಅರಿವಾಗುವುದು ಸಾಧ್ಯವೇ ಇರಲಿಲ್ಲ. ಕಾರಣ, ಬೈಬಲ್ಲಿನ ಯೋಚನಾಕ್ರಮಕ್ಕೆ ಬದ್ಧರಾಗಿದ್ದ ಅವರಿಗೆ, ಭೂಗರ್ಭಶಾಸ್ತ್ರ ರೀತ್ಯಾ ಕಾಲಗಣನೆಯನ್ನು ಮಾಡುವುದಾಗಲಿ ಅಥವಾ ಮಿಲಿಯ-ಬಿಲಿಯ ವರ್ಷಗಳ ಲೆಕ್ಕದಲ್ಲಿ ಗುಣನ ಮಾಡುವುದಾಗಲೀ ಅನೂಹ್ಯ ವಿಚಾರವಾಗಿತ್ತು. ಅಷ್ಟೇಕೆ, ಇವತ್ತಿಗೂ ಭಾರತೀಯರನೇಕರಲ್ಲಿ ಕಾಣಸಿಗುವ ಸಂಖ್ಯಾವ್ಯಾಮೋಹ ಮತ್ತು ದಾಖಲೆಗಳ ಆಕರ್ಷಣೆಯು ಐರೋಪ್ಯರಿಗೆ ಇಲ್ಲಿಯ ಜನ ಸಮುದಾಯಗಳ ತಾರ್ಕಿಕ ದೌರ್ಬಲ್ಯದ ಕುರುಹಾಗಿಯೇ ಕಾಣುತ್ತದೆ. ಭಾರತೀಯರು, ಸಾಕಷ್ಟು ಪ್ರಚಲಿತವಾಗಿರುವ ಪ್ರಕಾರ, ಸಂಖ್ಯೆಗಳನ್ನು ಚೆನ್ನಾಗಿ ಬಳಸಬಲ್ಲವರು; ಅಂಕಿಅಂಶಗಳ ಒಂದು ಶಕ್ತಿಕೇಂದ್ರವೇ ಈ ದೇಶದಲ್ಲಿದೆ ಎನ್ನುವಷ್ಟು ಪ್ರಸಿದ್ಧಿ ಇವರಿಗಿದೆ. ಇಡಿಯ ಜಗತ್ತಿನಲ್ಲೇ ಅಸಾಧಾರಣವೆನ್ನಿಸುವ 'ಮಾನವ ಗಣಕ' ಎಂದು ಹೆಸರಾದ ಶಕುಂತಲಾದೇವಿ ಭಾರತದಲ್ಲಿದ್ದಾರೆ. ತಮ್ಮ ಎಂಟನೆಯ ವಯಸ್ಸಿನಲ್ಲಿಯೇ 'ಜೀವಂತ ವಿಸ್ಮಯ'ವೆಂದು ಖ್ಯಾತರಾದ ಈ ಶಕುಂತಲಾದೇವಿಯವರಿಗೆ, ಒಮ್ಮೆ ಗುಣಾಕಾರ ಮಾಡಲಿಕ್ಕೆಂದು ಎರಡು ೧೩ ಅಂಕಿಗಳ ಸಂಖ್ಯೆಗಳನ್ನು ಕೊಟ್ಟಾಗ (೭೮,೮೬,೩೬,೯೭,೭೪,೮೭೦ ಮತ್ತು ೨೪,೬೫,೦೯,೯೭,೪೫,೭೭೯) ಅದನ್ನು ಅವರು ೨೮ ಸೆಕೆಂಡುಗಳಲ್ಲಿ ಸರಿಯಾಗಿ ಗುಣಿಸಿ ಹೇಳಿದರು. ಇಂಥ ಅದ್ಭುತಗಳನ್ನು ಆ ಬಳಿಕ ಅವರು ಹಲವೊಮ್ಮೆ ಮಾಡಿ ತೋರಿಸುತ್ತ ಬಂದಿದ್ದಾರೆ. ೧೯೯೨ರ 'ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್' ಅವರನ್ನು ಕುರಿತು ಹೀಗೆ ಹೇಳುತ್ತದೆ – 'ಗಣಿತವನ್ನು ಚುರುಕಾಗಿ ಮಾಡಬಲ್ಲ ಬಾಲಪ್ರತಿಭೆಗಳನ್ನು ಅಭ್ಯಾಸ ಮಾಡಿರುವ ಹಲವು ಪರಿಣತರು ಶಕುಂತಲಾದೇವಿಯವರ ಕ್ಷಮತೆಯನ್ನು ಒಪ್ಪಲು ಅನುಮಾನಿಸುತ್ತಾರೆ. ಕಾರಣ, ಇದುವರೆಗೆ ಅವರು ಪರೀಕ್ಷೆ ಮಾಡಿದ ಯಾವುದೇ ಬಾಲಪ್ರತಿಭೆಗೆ ಹೋಲಿಸಲಿಕ್ಕೂ ಸಾಧ್ಯವಾಗದ ಮಟ್ಟ ಇವರದ್ದಾಗಿದೆ. ಆದ್ದರಿಂದ, ಶಕುಂತಲಾದೇವಿಯವರ ಪ್ರತಿಭೆಯ ದೃಢೀಕರಣವೇ ದೋಷಯುಕ್ತವಿದ್ದೀತೆಂದು ಆ ತಜ್ಞರು ಭಾವಿಸುತ್ತಾರೆ'.

ಭಾರತದಲ್ಲಿರುವ ಹೆಚ್ಚಿನ ಜನರಿಗೆ ಗಿನ್ನೆಸ್ ಬಿಯರಿನ ಸ್ವಾದ ಅಪರಿಚಿತ; ಅಂಥದೊಂದು ಪೇಯದ ಹೆಸರು ಕೇಳಿ ಬಲ್ಲವರೂ ಇಲ್ಲಿ ವಿರಳವೇ. ಆದರೆ ಈ 'ಗಿನ್ನೆಸ್ ಪುಸ್ತಕ'ವು ಭಾರತೀಯರಲ್ಲಿ ಹುಟ್ಟಿಸಿರುವ ಹುಚ್ಚು ಮಾತ್ರ ಗಾಢವಾದದ್ದು. ಭಾರತೀಯರ ಇಂಥ 'ಅತಾರ್ಕಿಕ' ಹುಚ್ಚಿನ ವಿಚಾರ ಕೂಡಾ ಈ ಪುಸ್ತಕಕ್ಕೆ ದಾಖಲೆಗಳನ್ನು ಒದಗಿಸಿಕೊಟ್ಟ ದೇಶಕ್ಕಿಂತ ಪಶ್ಚಿಮದಲ್ಲೇ ಹೆಚ್ಚು ಪ್ರಚಲಿತವಾಗಿದೆ.

ಉದಾಹರಣೆಗೆ, ‘ವಿಚಿತ್ರ ಮಾದರಿಯ ಒಬ್ಬ ಸಂತ’ ಎಂದು ವಿನ್‌ಸ್ಟನ್ ಚರ್ಚಿಲ್ ಕರೆಯಬಹುದಾಗಿದ್ದ ಮಸ್ತ್ರಾಮ್ ಬಾಪುವು ಈ ಗಿನ್ನೆಸ್ ದಾಖಲೆಗೆ ಸೇರುವುದಕ್ಕಾಗಿ ಒಂದೇ ಸ್ಥಳದಲ್ಲಿ ಇಪ್ಪತ್ತೆರಡು ವರ್ಷ ಕೂತುಕೊಂಡೇ ಇದ್ದ. ಈ ದಾಖಲೆ ಮಾಡಿ ‘ತೃಪ್ತನಾದ’ ಮಸ್ತ್ರಾಮ್, ಆ ಮೂಲಕ ಪ್ರಾಯಶಃ, ಪೌರ್ವಾತ್ಯ ಜಗತ್ತಿನ ಚಲನಹೀನ ಕೊಳೆತ ಸ್ಥಿತಿಯನ್ನು ಕುರಿತು ಪಾಶ್ಚಿಮಾತ್ಯರಿಗಿರುವ ರೂಢಿಗತ ಸವಕಲು ನಂಬಿಕೆಗಳೆಲ್ಲವನ್ನೂ ಸತ್ಯವೆಂದು ಸಾರುವ ಪರೋಕ್ಷ ಕೆಲಸವನ್ನೇ ಮಾಡಿದನೆನ್ನಬೇಕು. ಹೆಗೆಲ್‌ನಿಗೆ ತುಂಬ ಸ್ವಾರಸ್ಯದ್ದಾಗಿ ಕಾಣಿಸಬಹುದಾಗಿದ್ದ ಈ ಮಸ್ತ್ರಾಮ್ ಬಾಪುವಿನ ಉದಾಹರಣೆಯು ಭಾರತೀಯರಿಗಿರುವ ಇಂಥ ತೆವಲಿನ ಕಥೆಗಳಿಗೆ ಒಂದು ದೃಷ್ಟಾಂತ ಮಾತ್ರ; ಹೇಗಾದರೂ ಮಾಡಿ ತಾವೂ ಇತಿಹಾಸದ ದಾಖಲೆಯೊಳಕ್ಕೆ ಸೇರಬೇಕೆಂಬ ತವಕವು ಈ ತೆವಲಿಗೆ ಮೂಲವಾಗಿರುವಂತಿದೆ. ಹಾಗೆಯೇ ಭಾರತೀಯರ ಕುರಿತು ಇರುವ ಇನ್ನೊಂದು ರೂಢಿಯ ಚಿತ್ರ – ಇವರು ಹೆಣ್ಣಿಗರೆಂಬುದು; ಬೆಂಗಾಲಿ ಬಾಬುಗಳು ಮತ್ತು ಬ್ರಾಹ್ಮಣರು ವೈಭವೋಪೇತರಾಗಿ ಸದಾ ವಿಶ್ರಮಿಸಿಯೇ ಇರುವ ರೂಪಕದ ಮೂಲಕ ಬ್ರಿಟಿಷರು ಈ ಚಿತ್ರವನ್ನು ಕಟ್ಟಿಕೊಂಡಿದ್ದರು. ಅಂಥ ಚಿತ್ರಣದ ಹಿನ್ನೆಲೆಯಲ್ಲಿ, ದೀರ್ಘಕಾಲ ಕೈಹೊಲಿಗೆ ಮಾಡಿ ವಿಶ್ವದಾಖಲೆ ನಿರ್ಮಿಸಿದಾತ ಒಬ್ಬ ಭಾರತೀಯ ಗಂಡಸು ಎಂಬುದು ವಿಚಿತ್ರವಾದರೂ ನಿಜ; ಆತ, ಅಲಹಾಬಾದಿನ ಓಂಪ್ರಕಾಶ್ ಸಿಂಗ್. ಹೊಲಿಗೆಯೆಂಬುದು ಸಾಧಾರಣವಾಗಿ ಹೆಂಗಸರ ಕೆಲಸ ಎಂದು ತಿಳಿಯಲಾಗುವ ಈ ದೇಶದಲ್ಲಿ, ಇಂಥ ದಾಖಲೆ ಗಂಡಸಿಗೆ ಸಂದಿದೆ ಎಂಬುದೂ ಗಮನಾರ್ಹ.

ಭಾರತೀಯರನ್ನು ಈ ರೀತಿ ರೂಢಿಗತವಾಗಿ, ಸೋಮಾರಿಗಳೆಂದೋ ಹೆಣ್ಣಿಗರೆಂದೋ ಅಥವಾ ಒಟ್ಟಾರೆಯಾಗಿ ಅಪ್ರಾಮಾಣಿಕರೆಂದೋ ಕರೆಯದೇ ಇರುವ ಸಂದರ್ಭಗಳಲ್ಲೂ ಇನ್ನೊಂದು ಬಗೆಯ ಸಿದ್ಧಚಿತ್ರವನ್ನು ಅವರ ಬಗೆಗೆ ಪಶ್ಚಿಮವು ಕಟ್ಟಿಕೊಂಡುಬಂದಿದೆ. ಭಾರತೀಯರು ವಿಚಿತ್ರರೂ ತಲೆತಿರುಕರೂ ಅಸಂಬದ್ಧ ಸಂಪ್ರದಾಯಗಳಿಗೆ ಜೋತುಬಿದ್ದವರೂ ಮತ್ತು ನೋಡುವುದಕ್ಕೆ ಕಾಡುಪ್ರಾಣಿಗಳಂತೆ ಕಾಣುವವರೂ ಮತ್ತು ಅಧಿಕಾರಕ್ಕೆ ಮಣಿಯದೆ ಉಳಿಯುವವರು – ಇತ್ಯಾದಿ ಲಕ್ಷಣಗಳು ಈ ಚಿತ್ರಣದಲ್ಲಿ ಸೇರುತ್ತವೆ. ವಸಾಹತುಶಾಹಿ ಕಾಲದ ಬಹಳಷ್ಟು ಬರಹಗಳಲ್ಲಿ ಇಲ್ಲಿಯ ‘ಹಿಂದೂ ದೈತ್ಯ’ರ ಪ್ರಸ್ತಾಪ ಪದೇಪದೇ ಬರುತ್ತದೆ; ಮತ್ತು, ಆ ಸಮುದಾಯದ ಜನರು ಹೇಗೆ ಜಗನ್ನಾಥ ಪುರಿಯ ಉತ್ಸವದಲ್ಲಿ ಕಿಕ್ಕಿರಿದು ರಥದ ಚಕ್ರಕ್ಕೆ ತಮ್ಮನ್ನೇ ತಾವು ಸಿಲುಕಿಸಿಕೊಂಡು ಅಪ್ಪಚ್ಚಿಯಾಗುವಷ್ಟು ಮತಾಂಧರು ಎಂಬಂಥ ಉಲ್ಲೇಖಗಳು ಅಲ್ಲಿ ಹಲವೊಮ್ಮೆ ಕಾಣಸಿಗುತ್ತವೆ. ಇದಕ್ಕೆ ಸಮ



ರ್ಥನೆಯೋ ಎಂಬಂತೆ ೧೯೯೪ರಲ್ಲಿ ಲೋಟನ್ ಬಾಬು ಎಂಬ ಸಾಧುವು ಸತತ ಎಂಟು ತಿಂಗಳ ಕಾಲ ತನ್ನ ದೇಹವನ್ನು ಉರುಳಿಸಿ ದಾಖಲೆ ಮಾಡಿದ್ದಾನೆ; ವೈಷ್ಣೋ ದೇವಿಗೆ ಹರಕೆ ಸಲ್ಲಿಸುವುದಕ್ಕಾಗಿ ಆತ ರಟ್ಲಾಮ್‌ನಿಂದ ಜಮ್ಮುವಿನವರೆಗೆ ಸುಮಾರು ೪೦೦೦ ಕಿಲೋಮೀಟರ್ ದೂರವನ್ನು, ದಿನಕ್ಕೆ ಸರಾಸರಿ ೧೬ ಕಿ.ಮೀ.ಗಳಂತೆ ಉರುಳು ಸೇವೆ ಮಾಡಿರುವ ದಾಖಲೆ ಆತನ ಹೆಸರಿಗೆ ಸಂದಿದೆ. ಅಂಥದೇ ಇನ್ನೊಂದು ದಾಖಲೆಯನ್ನು ೧೯೮೪ರ ಮಾರ್ಚ್ ೯ರಂದು ಜಗದೀಶ್ ಚಂದರ್ ಎಂಬಾತ ಮಾಡಿದ್ದಾನೆ – ಆತ, ‘ತನ್ನ ಭಕ್ತಿಯ ಹಿಂದೂ ಮಾತೆಯ ಪ್ರೀತ್ಯರ್ಥವಾಗಿ’ ೧೪೦೦ ಕಿ.ಮಿ.ಗಳಷ್ಟು ದೂರ ಅಂಬೆಗಾಲಿಟ್ಟು ಸಾಗಿದ್ದಾನೆ. ಈ ದಾಖಲೆಯನ್ನು ನೋಡುವಾಗ, ಭಾರತದ ಇತಿಹಾಸದ ವಿದ್ಯಾರ್ಥಿಗಳಿಗೆ ೧೯೧೯ರಲ್ಲಿ ಅಮೃತಸರದ ಹತ್ಯಾಕಾಂಡ ನಡೆಸಿದ ಕುಪ್ರಸಿದ್ಧ ಜನರಲ್ ಡೈಯರ್‌ನ ನೆನಪಾದೀತು – ಆತನ ಅತ್ಯಂತ ಕುಪ್ರಸಿದ್ಧ ಕೃತ್ಯವೆಂದರೆ ಆತ ಕೊಟ್ಟಿದ್ದ ‘ಅಂಬೆಗಾಲಿನ ಆಜ್ಞೆ’. ಆ ಆಜ್ಞೆಯ ಪ್ರಕಾರ, ನಿರ್ದಿಷ್ಟ ರಸ್ತೆಯೊಂದರಲ್ಲಿ ಇಂಗ್ಲಿಷ್ ಹೆಂಗಸೊಬ್ಬಳ ಮೇಲೆ ಹಲ್ಲೆ ನಡೆದಿದ್ದಕ್ಕೆ ಶಿಕ್ಷೆಯಾಗಿ ಭಾರತೀಯರೆಲ್ಲರೂ ಅಲ್ಲಿ ಅಂಬೆಗಾಲಿನಲ್ಲಿಯೇ ನಡೆಯಬೇಕೆಂದು ತಾಕೀತು ಮಾಡಲಾಗಿತ್ತು. ಹೀಗೆ ಮಾಡಿದ್ದಕ್ಕೆ ಕಾರಣ ಏನೆಂದು ಜನರಲ್ ಡೈಯರ್‌ನನ್ನೊಮ್ಮೆ ಕೇಳಿದಾಗ – ‘ಕೆಲವು ಭಾರತೀಯರಿಗೆ ಅಂಬೆಗಾಲಿಕ್ಕುವುದೇ ಪ್ರಿಯ’ ಎಂದಾತ ಉತ್ತರ ಕೊಟ್ಟಿದ್ದ. ಈ ದೃಷ್ಟಿಯಿಂದ ನೋಡಿದಾಗ, ಅತ್ಯಂತ ದೀರ್ಘಕಾಲ ಅಂಬೆಗಾಲಿಕ್ಕುವ ವಿಶ್ವದಾಖಲೆಯೀಗ ಬ್ರಿಟಿಷ್ ಪ್ರಜೆಯೊಬ್ಬನಿಗೆ ಸೇರಿದೆಯೆಂಬುದು ಕಾವ್ಯನ್ಯಾಯದ ಹಾಗೆ, ಪೊಯೆಟಿಕ್ ಜಸ್ಟಿಸ್‌ನ ಹಾಗೆ ಕಂಡೀತು – ಆ ಬ್ರಿಟಿಷ್ ಪ್ರಜೆಯು ಕೇವಲ ಒಂಬತ್ತೂವರೆ ಗಂಟೆಗಳಲ್ಲಿ ೪೫.೮ ಕಿ.ಮಿ. ಅಂಬೆಗಾಲಿಕ್ಕಿ ಈ ದಾಖಲೆಯನ್ನು ತನ್ನದಾಗಿಸಿಕೊಂಡಿದ್ದಾನೆ. ಭಾರತದ ಯೋಗಿಗಳು ಮತ್ತು ಋಷಿಗಳಂತೂ ಇಂಥ ಅಸಂಬದ್ಧ ವಿಚಿತ್ರ ಪರಾಕ್ರಮಗಳನ್ನು ಮಾಡಬಲ್ಲಂಥವರು ಎಂಬ ಚಿತ್ರಣ ಬಹುಕಾಲದಿಂದಲೂ ಚಾಲ್ತಿಯಲ್ಲಿದೆ. ಉದಾಹರಣೆಗೆ, ಉತ್ತರ ಪ್ರದೇಶದಲ್ಲಿರುವ ಶಹಜಹಾನ್‌ಪುರದ ಸ್ವಾಮಿ ಮೌಜಗಿರಿ ಮಹಾರಾಜ್ ಎಂಬಾತ, ಅತ್ಯಂತ ಅಸಾಧಾರಣವೆನ್ನಿಸುವ ತಪಸ್ಸೊಂದನ್ನು ಮಾಡಿದ್ದಾನೆ -- ಆತ, ಹದಿನೇಳು ವರ್ಷಗಳಾದ್ಯಂತ ಸತತವಾಗಿ ನಿಂತೇ ಇದ್ದ ವಿಶ್ವದಾಖಲೆಯೊಂದನ್ನು ನಿರ್ಮಿಸಿದ್ದಾನೆ; ಈ ದಾಖಲೆಯನ್ನು ಸದ್ಯಕ್ಕಂತೂ ಯಾರೂ ಮುರಿಯುವ ಸಾಧ್ಯತೆಯಿಲ್ಲ. ಇಷ್ಟರ ಮೇಲೆ, ಭಾರತದ ಬಗ್ಗೆ ಬ್ರಿಟಿಷರು ಕಟ್ಟಿಕೊಂಡ ಚಿತ್ರಣವು ಕೇವಲ ಜಡತೆ-ನಿರ್ಜೀವತೆಗಳೆಂಬ ವಿಶೇಷಣಗಳಿಗಷ್ಟೇ ಸೀಮಿತವಾಗಿಲ್ಲ – ಈ ದೇಶವು ಹಿಂದೊಂದು ಕಾಲದ ವಿಕಸಿತ ಸ್ಥಿತಿಯಿಂದ ಹಿನ್ನಡೆ ಹೊಂದಿ ಇವತ್ತಿನ ಇಂಥ ದುರ್ಗತಿಗೆ

ತಲುಪಿಕೊಂಡಿದೆ ಎಂಬುದು ವಸಾಹತುಶಾಹಿ ಚಿತ್ರಣದ ಇನ್ನೊಂದು ನಂಬಿಕೆ. ಮುಂದಿನ ಈ ದಾಖಲೆ ಅಂಥ ಚಿತ್ರಣಕ್ಕೆ ಸರಿಹೊಂದುವಂತೆಯೇ ಇದೆ – ತಮ್ಮ ದೇಶವನ್ನು ಪ್ರಗತಿಪಥದಲ್ಲಿ ಮುನ್ನುಗ್ಗಿಸುವ ಆಶೋತ್ತರ ಹೊತ್ತಿದ್ದ ರಾಜೀವ್ ಗಾಂಧಿಯವರು ಪ್ರಧಾನಿಗಳಾಗಿದ್ದ ಸಮಯದಲ್ಲಿ, ಒಂದು ಕಡೆಗೆ ಅವರು ಆಧುನಿಕತೆಯತ್ತ ತಲುಪುವ ತಮ್ಮ ಭವಿಷ್ಯಕಲ್ಪನೆಯ ಪ್ರತೀಕವೆಂಬಂತೆ ಶತಾಬ್ದಿ ಎಕ್ಸ್‌ಪ್ರೆಸ್ ಎಂಬ (೨೧ನೆಯ ಶತಮಾನದ) ರೈಲು ಸೇವೆಯನ್ನು ಉದ್ಘಾಟಿಸುತ್ತಿದ್ದಾಗ, ಅದೇ ಹೊತ್ತಿನಲ್ಲಿ ಇನ್ನೊಂದು ಕಡೆಗೆ, ಭಾರತದ ಅರವಿಂದ ಪಾಂಡ್ಯ ಎಂಬಾತ 'ಹಿಮ್ಮುಖವಾಗಿ ಓಡುವ' ವಿಶ್ವದಾಖಲೆಯೊಂದನ್ನು ಸ್ಥಾಪಿಸಿದ್ದ.

ಭಾರತದ ಮಧ್ಯಮವರ್ಗದ ಜನಸಮೂಹಕ್ಕೇನೋ ತಮ್ಮ ದೇಶವು ಜಾಗತಿಕ ಮಟ್ಟದ ಒಂದು ಶಕ್ತಿಯಾಗಬೇಕು ಎಂಬ ಹುಚ್ಚಿದೆ. ಅದಕ್ಕಾಗಿ ಅವರು ತಮ್ಮ ದೇಶದ ಗಂಡುಹೆಣ್ಣುಗಳ ಸಾಧನೆಗಳೆಲ್ಲವನ್ನೂ ಹೆಮ್ಮೆಯಿಂದ ನೋಡುವ ಆಶೆಯಿಟ್ಟು ಕೊಂಡಿದ್ದಾರೆ. ಹಾಗಿದ್ದರೂ, ಭಾರತದ ದಾಖಲೆಗಳು ಹೆಚ್ಚಾಗಿ ಗಿನ್ನೆಸ್ ಪುಸ್ತಕದೊಳಕ್ಕೆ ಮಾತ್ರ ಪ್ರವೇಶಿಸುತ್ತವೆಯೆಂಬುದು ಇವರಿಗೆ ತಮ್ಮ ದೇಶಕ್ಕೇ ಒದಗಿದ ನಾಚಿಕೆಯ ಸಂಗತಿಯಾಗಿಯೂ ಕಾಣುತ್ತದೆ. ಭಾರತದಿಂದ ಹೋದ ಕ್ರೀಡಾ ತಂಡಗಳು ಒಲಂಪಿಕ್ಸ್ ಅಥವಾ ಕಾಮನ್‌ವೆಲ್ತ್ ಕ್ರೀಡಾಕೂಟಗಳಿಂದ ಬರಿಗೈಯಲ್ಲಿ ಹಿಂದಿರುಗಿದಾಗ ಇಲ್ಲಿಯ ಜನರು ಎದೆ ಬಡಿದುಕೊಂಡು ಗೋಳಾಡುತ್ತ ಆ ಕ್ರೀಡಾಪಟುಗಳನ್ನು ಸ್ವಾಗತಿಸುವ ವಿಚಿತ್ರ ಚಿತ್ರಗಳನ್ನೇ ಇದಕ್ಕೆ ದೃಷ್ಟಾಂತವಾಗಿ ನೋಡಬಹುದು. ಒಂದು ಬಿಲಿಯ ಜನಗಳಿರುವ ಈ ದೇಶಕ್ಕೆ ಒಲಂಪಿಕ್ಸ್‌ನಲ್ಲಿ ಒಂದು ಕಂಚಿನ ಪದಕಕ್ಕಿಂತ ಹೆಚ್ಚಿನದೇನೂ ಯಾಕೆ ದಕ್ಕುವುದಿಲ್ಲ – ಎಂಬ ಬಗ್ಗೆ ಈ ದೇಶದ ಜನ ವಿಸ್ಮಯಪಡುತ್ತಾರೆ; ಮತ್ತು ಅದರ ಎದುರಿಗೇ, ಯಾವುದೋ 'ಕೊಳಕು' ಆಫ್ರಿಕನ್ ದೇಶವೊಂದು, ಅಲ್ಲಿರುವ ಹಸಿವು - ರಾಜಕೀಯ ಷಡ್ಯಂತ್ರ - ಅಸ್ಥಿರತೆಗಳ ಹೊರತಾಗಿಯೂ, ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಭಾರತದ ಎಲ್ಲ ಆಟೋಟಗಾರರೂ ಒಟ್ಟಾಗಿ ಪಡೆದದ್ದಕ್ಕಿಂತ ಹೆಚ್ಚು ಬಂಗಾರದ ಪದಕಗಳನ್ನು ಬಾಚಿಕೊಳ್ಳುತ್ತದೆಯಲ್ಲ, ಯಾಕೆ? – ಎಂಬುದೂ ಈ ದೇಶಕ್ಕೆ ಅಚ್ಚರಿಯ ಸಂಗತಿಯಾಗಿ ಕಾಣುತ್ತದೆ. ವಿಚಿತ್ರವೆಂದರೆ, ಪದಕಗಳ ಇಂಥ ಬರಗಾಲವನ್ನು ಕಂಡು ಇಲ್ಲಿನ ಹೊಸ ಆಶೋತ್ತರಗಳ ಮಧ್ಯಮವರ್ಗ ನೋವನ್ನು ಅನುಭವಿಸುತ್ತದೆ; ಆದರೆ ಈ ನೆಲವನ್ನು ಕಾಡುವ ಇನ್ನೂ ಹಲವು ರೀತಿಯ ಭೌತಿಕ ಬರಗಾಲಗಳ ಬಗ್ಗೆ ಇಲ್ಲಿಯ ಅದೇ ವರ್ಗ ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ. ಸೌಂದರ್ಯ ಸ್ಪರ್ಧೆಗಳಲ್ಲಿ ಮಾತ್ರ ಭಾರತವು ಪದೇಪದೇ ವಿಶ್ವಮಟ್ಟದ ಪದಕಗಳನ್ನು ಪಡೆಯುತ್ತದೆನ್ನುವ ಬಗ್ಗೆ ಈ ಮಧ್ಯಮವರ್ಗಕ್ಕೆ



ಹೆಮ್ಮೆಯೆನಿಸುತ್ತದೆ; ೧೯೯೦ರ ದಶಕದ ದ್ವಿತೀಯಾರ್ಧದಾದ್ಯಂತ ವಿಶ್ವ ಮತ್ತು ಜಾಗತಿಕ ಸುಂದರಿ ಪಟ್ಟಗಳಲ್ಲಿ ಭಾರತವು ಏಕಸ್ವಾಮ್ಯ ಸ್ಥಾಪಿಸಿದ್ದು ಈ ವರ್ಗಗಳ ಹೆಮ್ಮೆಗೆ ಕಾರಣವೂ ಆಗಿದೆ. ಜತೆಗೆ, ಒಂದು ದೇಶದ ಕ್ರೀಡಾ ಸಾಧನೆಯ ನಿಜವಾದ ಅಳತೆಗೋಲು ಒಲಂಪಿಕ್ಸ್ ಆಟಗಳೆಂದೂ ಈ ವರ್ಗವು ಭಾವಿಸಿಕೊಳ್ಳುತ್ತದೆ. ಆದ್ದರಿಂದಲೇ, ಆಧುನಿಕತೆಯತ್ತ ಸಾಗತೊಡಗಿರುವ ಈ ಭಾರತೀಯರಿಗೆ ತಮ್ಮ ದೇಶದ ಗಿನ್ನೆಸ್ ದಾಖಲೆವೀರರನ್ನು ಕಂಡರೆ ಮುಜುಗರವೆನ್ನಿಸುತ್ತದೆ. ಆ ದಾಖಲೆವೀರರು ವಿಚಿತ್ರವಷ್ಟೇ ಅಲ್ಲ, ಸಂಪೂರ್ಣ ಅನುಪಯುಕ್ತವೂ ಆಗಿರುವ ಕ್ಷೇತ್ರಗಳಲ್ಲಿ ಮಾತ್ರವೇ ದಾಖಲೆಗಳನ್ನು ಮಾಡುತ್ತ ಜಾಗತಿಕ ಮಟ್ಟದಲ್ಲಿ ಈ ದೇಶದ ಅವಮಾನಕ್ಕೆ ಕಾರಣರಾಗುತ್ತಿದ್ದಾರೆ – ಎಂಬುದು ಈ ವರ್ಗಗಳ ಕೊರಗಿಗೆ ಕಾರಣವಾಗಿದೆ.

ಗಿನ್ನೆಸ್ ಪುಸ್ತಕದಲ್ಲಿ ಇಂಥ ವಿಚಿತ್ರ ದಾಖಲೆಗಳನ್ನು ಕೆತ್ತುವ ಉತ್ಸಾಹವು ಭಾರತೀಯರಲ್ಲೇ ಯಾತಕ್ಕೆ ಹೆಚ್ಚು ಕಾಣಸಿಗುತ್ತದೆ ಎಂಬುದಕ್ಕೆ – ಪ್ರಾಯಶಃ, ಈ ಜನಸಮುದಾಯಗಳಲ್ಲಿ (ಮತ್ತು ಇಲ್ಲಿನ ರಾಷ್ಟ್ರೀಯತೆಯಲ್ಲಿಯೂ ಸಹ) ತಾನು ಪೌರುಷಹೀನ ಎಂದು ಸುಪ್ತವಾಗಿ ಅಡಗಿರುವ ಒಂದು ಆತಂಕವೇ ಕಾರಣವಿದ್ದೀತು. ಪೌರುಷತೆಯ ಒಂದು ಲಕ್ಷಣ – ಮನ್ನಣೆಯ ಗಳಿಕೆ; ತನ್ನ ನಿರ್ದಿಷ್ಟ ಕ್ಷೇತ್ರದಲ್ಲಿ ತಾನು ಅತ್ಯುತ್ತಮನೆನ್ನಿಸಿಕೊಳ್ಳುವ ಹಂಬಲ ಕೂಡಾ ಗಂಡಸುತನದ ಇನ್ನೊಂದು ಗುಣ. ದೀರ್ಘಕಾಲದ ವಸಾಹತು ಅನುಭವವು ಭಾರತೀಯರ ಮೇಲೆ ಮಾಡಿರುವ ಒಂದು ಪರಿಣಾಮವೆಂದರೆ, ತನ್ನನ್ನು ತಾನು ಐರೋಪ್ಯ ಗಂಡಸಿನೊಂದಿಗೆ ಹೋಲಿಸಿ ನೋಡಿಕೊಳ್ಳುವ ರೂಢಿಯನ್ನು ಅದು ಇಲ್ಲಿ ಸೃಷ್ಟಿಸಿದೆ. ಅಂಥ ಐರೋಪ್ಯ ಗಂಡಸು ಒಂದು ಆದರ್ಶವೆಂದೂ ಮತ್ತು ಭಾರತದಂಥ ದೇಶವು (ವಸಾಹತೀಕರಣಗೊಂಡಿದ್ದ ಇನ್ನಿತರ ದೇಶಗಳಂತೆಯೇ) ಈ ಮಾದರಿಯನ್ನು ಅನುಸರಿಸಬೇಕೆಂದೂ ಹಾಗೂ ಅಂತಿಮವಾಗಿ ಆ ಐರೋಪ್ಯ ಗಂಡಸಿನಿಂದ ಮನ್ನಣೆ ಗಳಿಸಬೇಕೆಂದೂ ಈ ಆತಂಕಿತ ಮನಸ್ಸು ಭಾವಿಸುತ್ತದೆ. ಮತ್ತು, ಗಿನ್ನೆಸ್ ಪುಸ್ತಕವು ಅಂಥ ಮನ್ನಣೆ ಪಡೆಯುವ ಒಂದು ಸ್ಥಳವಾಗಿ, ಸಾಧ್ಯತೆಯಾಗಿ ಈ ಮನಸ್ಸಿಗೆ ಗೋಚರವಾಗುತ್ತದೆ. ಆದರೆ, ಚಿತ್ರವಿಚಿತ್ರ ದಾಖಲೆಗಳನ್ನು ನಿರ್ಮಿಸುವ ಮೂಲಕ ಈ ಜನವರ್ಗವು ಮೇಲಿನ 'ಮನ್ನಣೆಯ ರಾಜಕಾರಣ'ವನ್ನು ಅನುಸರಿಸುತ್ತಲೇ ಅದರ ಅಣಕವನ್ನೂ ಮಾಡುತ್ತದೆ ಯೆಂಬುದನ್ನೂ ನಾವಿಲ್ಲಿ ಗಮನಿಸಬೇಕು. ಅರ್ಥಾತ್ – ಅಭಿವೃದ್ಧಿ, ಉತ್ಪಾದನೆ, ಸ್ಪರ್ಧೆ, ಆಧುನಿಕತೆ – ಇಂಥ ಎಲ್ಲ ಮೌಲ್ಯಗಳ ಹರಿಕಾರನಾಗಿರುವ ಮಧ್ಯಮವರ್ಗಕ್ಕೆ ಭಾರತೀಯ ಸಮಾಜದ ಇಂಥ ದಾಖಲೆವೀರರು ತಮ್ಮದೇ ವಿಚಿತ್ರ ರೀತಿಯ

ಪ್ರತಿರೋಧವೊಂದನ್ನು ಕೂಡಾ ನೀಡುತ್ತಿದ್ದಾರೆ. ಸ್ಪರ್ಧೆ ಮತ್ತು ಪ್ರಗತಿ – ಇವೆರಡೂ ಆಧುನಿಕತೆಯ ಸ್ವವ್ಯಾಖ್ಯೆಯ ಪ್ರಕಾರವೇ ಅದರ ಖಾಸಾ ಲಕ್ಷಣವಾಗಿರುವುದರಿಂದ, ಆ ಪರಿಭಾಷೆಗಳನ್ನೇ ಬಳಸಿಕೊಂಡು ಈ ದಾಖಲೆಕಾರರು ಅದೇ ಪರಿಭಾಷೆಗಳಿಗೆ ತಮ್ಮ ಪರೋಕ್ಷ ಪ್ರತಿರೋಧವನ್ನು ದಾಖಲಿಸುತ್ತಾರೆ; ಅಂದರೆ, ಈ ಮೌಲ್ಯಗಳಿಗೆ ಗೌರವ ಸಲ್ಲಿಸುವ ಕಾರ್ಯದಲ್ಲಿಯೇ ಅದರ ಅಣಕವೂ ಒಳಗೊಳ್ಳುತ್ತದೆ. 'ಸ್ಪರ್ಧಾತ್ಮಕ ಪ್ರವೃತ್ತಿ' ಎಂಬುದು ಈ ಎಲ್ಲ ದಾಖಲೆ ನಿರ್ಮಾಣಕ್ಕೆ ಪ್ರೇರಕ ಶಕ್ತಿಯಾಗಿರುವಂತೆಯೇ, ಅದು ಪ್ರಗತಿಯ ಉನ್ನತಿಯನ್ನೂ ಉತ್ಪಾದನೆಯ ಕ್ಷಮತೆಯನ್ನೂ ಸಾಧಿಸುವ ಮಾರ್ಗ ಕೂಡಾ ಹೌದು. ಆದ್ದರಿಂದ – ಇದೇ ಮಾರ್ಗವನ್ನು ಬಳಸಿಕೊಂಡು ಮೇಲ್ನೋಟಕ್ಕೇ ನಿರುಪಯುಕ್ತವೆಂದು ಸ್ಪಷ್ಟವಾಗುವಂಥ ಸಾಧನೆಗಳನ್ನೇಕೆ ಮಾಡಿ ತೋರಿಸಬಾರದು? – ಎಂಬುದು ಈ ದಾಖಲೆಗಳ ಉದ್ದಿಶ್ಯವಿರುವಂತೆ ತೋರುತ್ತದೆ. ಉದಾಹರಣೆಗೆ, ಶ್ರೀಧರ ಚಿಲ್ಲಾಳನು ತನ್ನ ಎಡಗೈಯಲ್ಲಿ ಬೆಳೆಸಿದ ೫ ಮೀಟರ್ ಉದ್ದದ ಉಗುರೇ ಆಗಲಿ, ಅಥವಾ ಕಲ್ಯಾಣ ರಾಮ್‌ಜಿ ಸೇನ್ ಬೆಳೆಸಿದ ೩ - ೪ ಮೀಟರ್ ಉದ್ದದ ಮೀಸೆಯೇ ಆಗಲಿ, ಇಂಥ ಒಂದು ಪ್ರಯತ್ನದ ದ್ಯೋತಕ. ಈ ಪ್ರಯತ್ನದ ಹಿಂದಿರುವ ರಾಜಕೀಯ ಅರ್ಥಶಾಸ್ತ್ರವನ್ನು ಅರಿಯಲಿಕ್ಕೆ ವಿನಿಮಯ ಮಾರುಕಟ್ಟೆಯ ಲೆಕ್ಕಾಚಾರಗಳು ಪ್ರಯೋಜನವಾಗವು. ಮೀಸೆ ಬೆಳೆಸುವ ವಿಭಾಗದಲ್ಲಿ ಇದಕ್ಕಿಂತ ಮೊದಲಿನ ದಾಖಲೆಯನ್ನು ನಿರ್ಮಿಸಿದ್ದಾತ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ದೆಹಲಿಯ ಕರ್ಮಾ ರಾಮ್ ಭೀಲ್ ಎಂಬಾತ. ಆತನ ಆ ಮೀಸೆಯನ್ನು ಬೆಳೆಸುವುದಕ್ಕೆ ಬಂದೀಖಾನೆಯ ಅಧಿಕಾರಿಗಳೂ ಸಹಾಯ ಮಾಡಿರಲಿಕ್ಕೇ ಬೇಕು; ಮುಖದ ಮೇಲಿನ ಈ ಮೋಹಕ ಬೆಳವಣಿಗೆಯನ್ನು ಉಳಿದ ಖೈದಿಗಳು ಹಾಳುಮಾಡದ ಹಾಗೆ ಕೂಡ ಅದೇ ಅಧಿಕಾರಿಗಳು ಆತನಿಗೆ ರಕ್ಷಣೆ ಒದಗಿಸಿರಲೂಬೇಕು. ಒಂದು ಕಡೆಗೆ, ಇಡಿಯ ದೆಹಲಿ ನಗರವು ಹಾಲು ಮತ್ತು ಬೆಣ್ಣೆಯ ಕೊರತೆಯನ್ನು ಎದುರಿಸುತ್ತಿದ್ದರೆ ಇನ್ನೊಂದು ಕಡೆಗೆ ಭೀಲ್ ತನ್ನ ಮೀಸೆಯನ್ನು 'ಹದವಾಗಿಡಲಿಕ್ಕೆ ಕಡಲೆ ಎಣ್ಣೆ, ಬೆಣ್ಣೆ ಮತ್ತು ಹಾಲಿನ ಕೆನೆಯ ಲೇಪನವನ್ನು ಬಳಸುತ್ತಿದ್ದ'ನೆಂದು ಗಿನ್ನೆಸ್ ದಾಖಲೆ ಪುಸ್ತಕವೇ ಉಲ್ಲೇಖಿಸಿದೆ. ಇನ್ನೊಂದು ದಾಖಲೆಯ ಕಥೆಯೂ ಅದೇ ರೀತಿ ಇದೆ – ಭಾರತವು ತನಗೆ ಅಗತ್ಯವಾದ ಪೆಟ್ರೋಲಿಯಂ ಉತ್ಪನ್ನಗಳೆಲ್ಲವಕ್ಕೂ ಬಹುತೇಕ ಆಮದನ್ನೇ ಅವಲಂಬಿಸಿ ಕೊಂಡಿದ್ದರೂ ಕೂಡ, ಹರಪ್ರಕಾಶ್ ರಿಷಿ ಎಂಬಾತ (ಮುಂದೆ ಆತ ಗಿನ್ನೆಸ್ ರಿಷಿಯೆಂದೇ ಹೆಸರಾದ) ಸತತ ೧೦೦೧ ಗಂಟೆಗಳ ಕಾಲ ತನ್ನ ಮೋಟಾರ್ ಬೈಕನ್ನು ನಡೆಸುತ್ತ ದಾಖಲೆ ನಿರ್ಮಿಸಿದ; ೧೯೯೦ರ ಏಪ್ರಿಲ್ ೨೨ ಮತ್ತು ಜೂನ್ ೩ರ ನಡುವೆ ಆತ, ಪುಣೆಯ ಟ್ರಾಫಿಕ್ ಪಾರ್ಕಿನಲ್ಲಿ ಒಟ್ಟು ೬೦,೯೫೫ ಕಿ.ಮಿ.ಗಳಷ್ಟು ಅಂತರವನ್ನು



ಈ ಬೈಕಿನಲ್ಲಿ ಕ್ರಮಿಸಿದ್ದ. ಇಡಿಯ ಜಗತ್ತೇ ಇಂದು ಪೆಟ್ರೋಲಿಗಾಗಿ ಜಾಗತಿಕ ಯುದ್ಧಗಳನ್ನೇ ನಡೆಸುತ್ತಿದೆ ಎಂಬ ಸಂಗತಿಯನ್ನು ನಮಗೆ ಮರೆತೇ ಹೋಗುವಂತೆ ಮಾಡಬಲ್ಲ ದಾಖಲೆ ಇದು.

ಹೀಗೆ, ಗಿನ್ನೆಸ್ ದಾಖಲೆ ಪುಸ್ತಕದೊಂದಿಗಿನ ತನ್ನ ಒಡನಾಟಗಳ ಮೂಲಕ ಭಾರತವು ಏಕಕಾಲಕ್ಕೆ ಆಧುನಿಕತೆಯನ್ನು ಆರಾಧಿಸುತ್ತಲೇ ಅದನ್ನು ಪ್ರತಿರೋಧಿಸುವ, ಆಧುನಿಕತೆಗೆ ಗೌರವ ಸೂಚಿಸುತ್ತಲೇ ಅದರ ಅಣಕವನ್ನೂ ಮಾಡುವ ಹಾಗೂ ಹೊಗಳುತ್ತಲೇ ಹಾಸ್ಯಗೈಯುವ ಮಿಶ್ರ ಪ್ರತಿಕ್ರಿಯೆಯ ವಿಚಿತ್ರ ವ್ಯಾಪಾರವೊಂದರಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಒಂದು ಕಡೆಯಿಂದ ವೈಜ್ಞಾನಿಕ ಮನೋವೃತ್ತಿ ಮತ್ತು ಸ್ಪರ್ಧಾತ್ಮಕ ಗುಣಗಳೆರಡೂ ಈ ದಾಖಲೆನಿರ್ಮಾಣದ ಹಿನ್ನೆಲೆಯಲ್ಲಿ ಮಿಳಿತವಾಗಿವೆ. ಆದರೆ, ತತ್ಫಲವಾಗಿ ನಡೆಯುತ್ತಿರುವಂಥ ಕೆಲಸವು – (ಸವಕಳಿಯಾಗಿರುವ ಮಾತನ್ನೇ ಬಳಸಿ ಹೇಳುವುದಾದರೆ) ಆ 'ಇತಿಹಾಸ ನಿರ್ಮಾಣ'ದ ಕೆಲಸವು -- ಅತ್ತ ರಾಷ್ಟ್ರಪ್ರಭುತ್ವಕ್ಕೆ ಮರ್ಯಾದೆ ತರುವಂಥದೂ ಆಗಿಲ್ಲ, ಅಥವಾ ಇತ್ತ ಆಧುನಿಕತೆಗೆ ಹೆಮ್ಮೆಯುಂಟುಮಾಡುವಂಥದ್ದೂ ಅಲ್ಲ ಎಂಬುದೂ ಕೂಡ ಈ ದಾಖಲೆಗಳ ಸ್ವರೂಪದಲ್ಲೇ ಸ್ಪಷ್ಟವಾಗಿ ಗೋಚರವಾಗುವಂತಿದೆ. ಒಂದು ದಿಕ್ಕಿನಿಂದ ನೋಡಿದರೆ, ಭಾರತೀಯರ ಈ ಗಿನ್ನೆಸ್ ದಾಖಲೆಯ ಹುಚ್ಚು ಅವರ ಕೀಳರಿಮೆಗೆ ಸಾಕ್ಷಿ; 'ಸಾಧನೆ ಮಾಡಿರುವ ಜನಾಂಗ'ಗಳ ಬಗ್ಗೆ ಭಾರತೀಯರಿಗಿರುವ ಮೆಚ್ಚಿಕೆಗೂ ಇದು ಸಾಕ್ಷಿ; ಮತ್ತು ಆಧುನಿಕತೆ ಹಾಗೂ ರಾಷ್ಟ್ರಪ್ರಭುತ್ವಗಳ ಬಗ್ಗೆ ಭಾರತೀಯರಿಗೆ ಇರುವ ಆಕರ್ಷಣೆಗೂ ಇದು ಸಾಕ್ಷಿ. ಆದರೆ ಅದರ ಜತೆಜತೆಗೇ, ಇದೇ ಹುಚ್ಚನ್ನು ಇನ್ನೊಂದು ಪರಿಯಿಂದ ವಿಶ್ಲೇಷಿಸಿ ನೋಡಿದರೆ, ಸಂಕೀರ್ಣವಾದ ನಾಗರಿಕತೆಯೊಂದು ಆಧುನಿಕ ಜಗತ್ತಿನ ಏಕರೂಪೀಕರಣ ಮತ್ತು ಏಕತಾನತೆಗೆ ಈ ಮೂಲಕವೇ ತನ್ನದೊಂದು ಪ್ರತಿರೋಧವನ್ನೂ ಕಾಣಿಸುತ್ತಿದೆ ಎಂಬ ಅಂಶವೂ ಕಾಣಲಿಕ್ಕೆ ಆರಂಭವಾದೀತು. ಇದು ಸಹಜವೇ, ಕಾರಣ, ಜಾಗತೀಕರಣ ಮತ್ತು ಏಕೀಕರಣಗಳನ್ನೇ ಗುರಿಯಾಗುಳ್ಳ ಇವತ್ತಿನ ಜಗತ್ತಿನಲ್ಲಿ ಪ್ರತಿರೋಧವು ಅಣಕ ಮತ್ತು ಆದರ – ಎರಡನ್ನೂ ಸಮ್ಮಿಶ್ರಗೊಳಿಸಿ ಕೊಳ್ಳಬೇಕಾದ್ದು ಅನಿವಾರ್ಯ. ಹೀಗಿರುವುದರಿಂದಲೇ, ಇವತ್ತಿನ ಈ ಕಾಲಘಟ್ಟದಲ್ಲಿ, 'ದಾಖಲೆ-ಇಡುವ' ಅಧಿಕಾರಶಾಹಿ ವರ್ಗಕ್ಕೆ ಎದುರಾಗಿ, ಅದರದೇ ತದ್ವತ್ ನಕಲಿಯಂತೆ ಕಾಣುವ ಹೊಸಬಗೆಯ ಅಸಂಗತ-ಅಸಂಬದ್ಧ 'ದಾಖಲೆ-ಮಾಡುವ' ವರ್ಗವೊಂದು ಮುಖಾಮುಖಿಯಾಗಿ ನಿಂತಿದೆ.

# ಕೇಶಪಾಶಪ್ರಪಂಚ
# ಒಂದು ಟಿಪ್ಪಣಿ

ನಟರಾಜ ಹೊನ್ನವಳ್ಳಿ

ನೀನಾಸಮ್ ಮರುತಿರುಗಾಟದ 'ಕೇಶಪಾಶ ಪ್ರಪಂಚ' ಎಂಬ ವಾಚಿಕವಿನ್ಯಾಸ ಪ್ರಧಾನವಾದ ಪ್ರಯೋಗವು ಕನ್ನಡ ರಂಗಭೂಮಿಯ ಹಾಗೂ ರಂಗ-ಅಭಿನಯದ ಹೊಸ ಸಾಧ್ಯತೆಗಳನ್ನು ಶೋಧಿಸಿ ಕಾಣಿಸುವ ಒಂದು ಗಮನಾರ್ಹ ಪ್ರಯೋಗವಾಗಿದೆ ಎಂದು ನನ್ನ ಅಭಿಪ್ರಾಯ. ಕನ್ನಡ ರಂಗಭೂಮಿಯಲ್ಲಿ, ಇತ್ತೀಚಿನ ವರ್ಷಗಳಲ್ಲಿ, ಹೊಸಹೊಸ ರಂಗಮಾರ್ಗಗಳನ್ನು ಕಂಡುಕೊಳ್ಳುವ ತವಕ ತಹತಹ ಎಲ್ಲೆಲ್ಲೂ ಕಾಣಿಸುತ್ತಿದೆ. ಸಿದ್ಧ ನಾಟಕ ಕೃತಿಗಳನ್ನು ಬದಿಗಿಟ್ಟು ಸಣ್ಣಕಥೆ, ಕಾವ್ಯ, ಕಾದಂಬರಿಗಳು ಮುಂತಾದ ಇತರ ಸಾಹಿತ್ಯ ಪ್ರಕಾರಗಳನ್ನು ನಮ್ಮ ಕಾಲದ ಅಗತ್ಯಕ್ಕೆ ತಕ್ಕಂತೆ ರಂಗದ ಮೇಲೆ ನಿರ್ಮಿಸಿ ಪ್ರಯೋಗಿಸಲಾಗುತ್ತಿದೆ, ಮತ್ತು ಅವು ಜನಪ್ರಿಯವೂ ಆಗುತ್ತಿವೆ ಎಂಬುದು ನನ್ನ ನಮ್ರ ತಿಳುವಳಿಕೆ. ಈ ಎಲ್ಲ ಪ್ರಯೋಗ - ಪ್ರದರ್ಶನಗಳಿಂದಾಗಿ ಶಕ್ತಿ ಬರುತ್ತಿರುವುದು ಪುಟ್ಟಪುಟ್ಟ ರಂಗಗುಂಪುಗಳಿಗೆ ಹಾಗೂ ವ್ಯವಸ್ಥಾಪಕರಿಗೆ. ಕಾರಣ, ಭರ್ಜರಿ ರಂಗವಿನ್ಯಾಸವಾಗಲೀ ಬೆಳಕು, ವೇಷಭೂಷಣಗಳನ್ನಾಗಲೀ ನೆಚ್ಚಿಕೊಳ್ಳದೆ, ನೆಚ್ಚಿದರೆ ನಟ - ನಟನೆಯನ್ನು ಮಾತ್ರ ಎಂದು ಹೊರಟಿರುವುದರಿಂದಾಗಿ ಎಂದು ಅನ್ನಿಸುತ್ತದೆ. ನಮ್ಮ ರಂಗಭೂಮಿಯ ಅಡಾವುಡಿ ಎಷ್ಟಿದೆಯೆಂದರೆ, ಇಂದಿನ ಪ್ರೇಕ್ಷಕನು ವ್ಯವಧಾನದಿಂದ ಕೂತು ನಟರ ಮತ್ತು ಪಠ್ಯದ ನಾಡಿಮಿಡಿತವನ್ನು ಕೇಳಿಸಿಕೊಳ್ಳದವನಾಗಿದ್ದಾನೆ; ಬಹಿರಂಗದ, ಹೊರರೂಪದ ಅಬ್ಬರಕ್ಕೆ ತನ್ನನ್ನು ಒಡ್ಡಿಕೊಂಡು ಕುರುಡನೂ ಕಿವುಡನೂ ಆಗಿದ್ದಾನೆ. ಹಾಗೆಯೇ ನಟರೂ ಕೂಡ. ಇವುಗಳಿಂದೆಲ್ಲ ಬಿಡಿಸಿ ಅವನನ್ನು 'ಧ್ಯಾನಸ್ಥ'ನನ್ನಾಗಿಸುವ ರಂಗಭೂಮಿಯ ಹೊಸ 'ರೂಪ'ವೊಂದು ನಮಗೆ ಬೇಕಾಗಿತ್ತು. ಆ ರೂಪವೊಂದರ ಸಾಧ್ಯತೆಯೇ ಈ 'ಕೇಶಪಾಶಪ್ರಪಂಚ'.

ಕನ್ನಡ ರಂಗಭೂಮಿಯಲ್ಲಿ ಈ ಹಿಂದೆ ಪ್ರಯೋಗಗೊಂಡ ಈ ತೆರನ ಹಲವು



ಪ್ರಯೋಗಸಾಧ್ಯತೆಗಳ ದೊಡ್ಡ ಪಟ್ಟಿಯೇ ಇದೆ. ಜಯತೀರ್ಥ ಜೋಶಿಯವರ 'ಭೂಮಿಗೀತ', ಅಕ್ಷರ ಅವರ 'ನಾನು', ನಟರಾಜ ಹೊನ್ನವಳ್ಳಿಯ 'ಮಾಸ್ತಿ ಕಥೆ - ಮೂರು' ಮತ್ತು 'ಮಲ್ಲಿನಾಥ ಧ್ಯಾನ', ವೆಂಕಟರಮಣ ಐತಾಳರ 'ಕರ್ಣಾದರ್ಶ', ಗಣೇಶ ಮತ್ತು ತಂಡದವರ 'ಶ್ರದ್ಧಾ ಮತ್ತು ಹಣತೆ', ಸಿ. ಬಸವಲಿಂಗಯ್ಯನವರ 'ಕುಸುಮಬಾಲೆ' ಮತ್ತು ಈಗ ಕೆ.ಜಿ. ಮಹಾಬಲೇಶ್ವರ ಅವರ 'ಕೇಶಪಾಶಪ್ರಪಂಚ' – ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಈ ರೀತಿಯ ಪ್ರಯೋಗಗಳು ಹವ್ಯಾಸಿ ರಂಗಭೂಮಿಗೂ ವಿಸ್ತರಿಸಿ ಜಯಪ್ರಿಯವಾಗುತ್ತಿವೆ ಎಂಬುದು ಕನ್ನಡ ರಂಗಭೂಮಿ ತನ್ನನ್ನು ಗಟ್ಟಿಮಾಡಿಕೊಳ್ಳುತ್ತಿರುವ ಕುರುಹು ಎಂದು ತಿಳಿದಿದ್ದೇನೆ. ಪ್ರೇಕ್ಷಕರು ಕೂತು ಸಲೀಸಾಗಿ ನೋಡಬಲ್ಲ ಆಪ್ತ ಸ್ಥಳಗಳು ಈ ಪ್ರಯೋಗಗಳಿಗೆ 'ರಂಗಸ್ಥಳ'ಗಳಾಗಿರುವುದೂ ಈ ಪ್ರಯೋಗಗಳ ಇನ್ನೊಂದು ವಿಶೇಷ. ಹೀಗಾಗಿ ಪ್ರೊಸೀನಿಯಂನಿಂದಾಚೆ ಪ್ರೇಕ್ಷಕರು ನೋಡಬಲ್ಲ ಯಾವುದೇ ಸ್ಥಳಗಳಲ್ಲಿ ರಂಗಪ್ರಯೋಗಗಳು ಘಟಿಸುತ್ತಿರುವುದು ಹೊಸ ರಂಗಭೂಮಿಯೊಂದರ ಉದಯ ಎಂದು ನನಗೆ ಅನ್ನಿಸುತ್ತಿದೆ. ಅದು ಹೇಗೆಂದರೆ ಹಕ್ಕಿ ಗೂಡು ಕಟ್ಟಿದ ಹಾಗೆ, ಪುಟ್ಟ ಪುಟ್ಟ ದೋಣಿಗಳಲ್ಲಿ ಪ್ರಯಾಣಿಸಿ ಸಮುದ್ರವನ್ನೇ ಲಂಘಿಸಿದಂತೆ. ಇದೊಂದು ವಿಧ್ಯುಕ್ತ ಆಚರಣೆ; ನಟರು ಪ್ರೇಕ್ಷಕರ ನಾಡಿಬಡಿತವನ್ನು ಕೇಳುವ ಹಂಬಲ, ಅವಕಾಶ.

'ಕೇಶಪಾಶಪ್ರಪಂಚ'ದಂತಹ ಪ್ರಯೋಗಗಳಿಗೆ ಅಭಿನಯ, ಪಠ್ಯ ಎಲ್ಲವನ್ನೂ ಹೊಸದಾಗಿ ಕಟ್ಟಿಕೊಳ್ಳುವ, ರಿ-ಕನ್‌ಸ್ಟ್ರಕ್ಟ್ ಮಾಡಿಕೊಳ್ಳುವ ಹೊಸ ರಂಗ-ಜವಾಬ್ದಾರಿ ಅಂಟಿಕೊಂಡಿರುತ್ತದೆ. ಈ ರೀತಿಯ ಪಠ್ಯಗಳಲ್ಲಿ ನಟಿಸುವ ನಟರೂ ಕೂಡ ತಮ್ಮ ಅಂತರಂಗ ಬಹಿರಂಗಗಳನ್ನು ಕ್ಲೀಷೆಗಳಿಲ್ಲದ ಹಾಗೆ ಬರಿದುಮಾಡಿಕೊಳ್ಳಬೇಕಾಗುತ್ತದೆ. ಪಠ್ಯದ ಜೊತೆಗೆ ಏಕಕಾಲದಲ್ಲಿ ಹಿಂದಕ್ಕೂ ಮುಂದಕ್ಕೂ ಚಲಿಸುತ್ತಾ, ಕೆಲವೊಮ್ಮೆ ತಟಸ್ಥನಾಗಿದ್ದುಕೊಂಡು ತನ್ನ ಕಣ್ಣಮುಂದೆಯೇ ಸೃಷ್ಟಿಯಾಗುತ್ತಿರುವ ಕೌತುಕದಲ್ಲಿ ಭಾಗಿಯಾಗುತ್ತ ನಟಿಸಬೇಕಾಗುತ್ತದೆ. ನಟನೊಬ್ಬ ತನ್ನ ಹಿಂದಿನ ರೂಢಿಗತ ಅಂಗಮುದ್ರೆಗಳನ್ನಾಗಲೀ, ಜೆಶ್ಚರ್ಸ್-ಪೋಶ್ಚರ್ಸ್‌ಗಳನ್ನಾಗಲೀ, ಚಲನೆಗಳನ್ನಾಗಲೀ, ಧ್ವನಿಯ ಏರಿಳಿತಗಳನ್ನಾಗಲೀ ಉಪಯೋಗಿಸಲಾಗದೆ ಅನಿವಾರ್ಯವಾಗಿ ಹೊಸ ಹೊಳವಿಗೆ ಧುಮುಕಿಕೊಳ್ಳುವ ಪ್ರಕ್ರಿಯೆಗೆ ಒಳಗಾಗುತ್ತಾನೆ.

ಈ ಮೇಲಿನ ರೀತಿಯ ಹೊಸ ಸವಾಲಿಗೆ ಮಹಾಬಲೇಶ್ವರ ಅವರ 'ಕೇಶಪಾಶಪ್ರಪಂಚ' ತೆರೆದುಕೊಂಡಿದೆ ಎಂಬುದೇ – ಅದೂ ಹಳೆಗನ್ನಡದ ಪಂಪ, ರನ್ನ, ಕುಮಾರವ್ಯಾಸ, ಪುರಂದರದಾಸರ ಕಾವ್ಯವನ್ನು ಇಟ್ಟುಕೊಂಡು ಎಂಬುದೇ – ನನ್ನ ಈ ಬರಹಕ್ಕೆ ಕಾರಣವಾಗಿದೆ.

ಕನ್ನಡ ಕಾವ್ಯ ಪ್ರಪಂಚದಲ್ಲಿ ಪಂಪ, ರನ್ನ, ಕುಮಾರವ್ಯಾಸರು ಮಹಾಭಾರತದ ಕಾವ್ಯವನ್ನು ತಮ್ಮ ಕಾಲಕ್ಕೆ ಅನ್ವಯವಾಗುವಂತೆ ಕನ್‌ಸ್ಟ್ರಕ್ಟ್ ಮಾಡಿಕೊಂಡು ಕಂಡರಿಸಿದ ಪರಿ ಇವತ್ತಿನ ದಿನದವರೆಗೂ ಕಾಡುತ್ತಿರುವುದು ಅವರ ಕರ್ತೃತ್ವಶಕ್ತಿಗೆ ಹಿಡಿದ ಕನ್ನಡಿ. ಅವರು ಮಹಾಭಾರತದ ಕಥೆಯನ್ನು ರೂಪಾಂತರಿಸಿಕೊಂಡು ತಮ್ಮ ಕಾಲದ ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳನ್ನು ತಮ್ಮ ತೆಕ್ಕೆಗೊಗ್ಗಿಸಿಕೊಂಡು ಹಳೆಗನ್ನಡದ ಮೂಲಕ ಹೇಳಿದ್ದಾರೆ – ಅಲ್ಲಿನ ಭಕ್ತಿ, ಶೃಂಗಾರ, ರಾಜಕಾರಣ ಎಲ್ಲವನ್ನೂ. ಆದರೆ, ಇದನ್ನು ಈಗ ಓದುವವರಾರು? ವಿಶ್ವವಿದ್ಯಾನಿಲಯದ ಉಪನ್ಯಾಸಕರೂ ಪ್ರಾಧ್ಯಾಪಕರೂ ವಿದ್ಯಾರ್ಥಿಗಳಿಗಷ್ಟೇ ಸೀಮಿತವಾಗಿ ಓದಿಕೊಂಡರೆ ಸಾಕೆ? ಆ ಕಾವ್ಯವನ್ನು 'ನೋಡುವ ರೂಪ'ವಾಗಿ ಕಾಣಿಸುವ ಅವಶ್ಯಕತೆ ಇದೆಯೆ? ಅವುಗಳನ್ನು ನಮ್ಮ ಕಾಲಕ್ಕೆ ಹೇಗೆ ಕನ್‌ಸ್ಟ್ರಕ್ಟ್ ಮಾಡಿಕೊಳ್ಳಬಹುದು? ನಮ್ಮ ಕಲಾಪ್ರಕಾರಗಳು ಅವನ್ನು ಹೇಗೆ ತಮ್ಮ ತೆಕ್ಕೆಗೆ ಒಗ್ಗಿಸಿಕೊಳ್ಳುವುದು? – ಹೀಗೆ ಪ್ರಶ್ನೆಗಳು ನಮ್ಮ ಮುಂದೆ ಧುತ್ತನೆ ನಿಲ್ಲುತ್ತವೆ. ಸಾರ್ವಜನಿಕ ಅವಜ್ಞೆಗೆ, ವಿಸ್ಮೃತಿಗೆ ಒಳಗಾಗಿರುವ, ಹಳೆಗನ್ನಡದ, ಹೊಸಗನ್ನಡದ, ಒಂದು ಕಾಲಕ್ಕೆ ಮಹತ್ವ ಪಡೆದುಕೊಂಡಿದ್ದ ಪಠ್ಯಗಳನ್ನು ನಮ್ಮ ಕಾಲದ ಮರುಸೃಷ್ಟಿಗೆ ಮರುಓದಿಗೆ ಮರುಸಂವಹನಕ್ಕೆ ಈಡುಮಾಡದಿದ್ದರೆ ಹೊಸ ಗ್ರಹಿಕೆಯನ್ನು ಹುಟ್ಟುಹಾಕಲು ಸಾಧ್ಯವಿಲ್ಲ. ಅಂಥ ಹೊಸ ಗ್ರಹಿಕೆಗೆ ಪಂಪ, ರನ್ನ, ಕುಮಾರವ್ಯಾಸರು ಒಳಗಾಗುತ್ತಿದ್ದಾರೆ ಎಂಬುದೇ ಒಂದು ದೊಡ್ಡ ಸಾಧ್ಯತೆ. ಗೌರೀಶ ಕಾಯ್ಕಿಣಿಯವರು ತಮ್ಮ ಒಂದು ಲೇಖನದಲ್ಲಿ ನೃಪತುಂಗನ 'ಕವಿರಾಜಮಾರ್ಗ'ದ ಬಗ್ಗೆ ಬರೆಯುತ್ತಾ 'ಕುರಿತೋದದೆ ಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂದರೆ 'ಅವರಿಗೆ ಓದದಲೇ ಕಾವ್ಯ ಪ್ರಯೋಗ ಪರಿಣತಿ ಇದ್ದುದು ಅದರ ನಾಟಕರೂಪವನ್ನು ನೋಡಿ' ಎಂದು ಹೇಳುತ್ತಾರೆ. ಅಂದರೆ ನಾಟಕದ ರೂಪ ಸಂವಹನವನ್ನು ಸಾಧಿಸುತ್ತಿದ್ದಿತು, ಓದಲೇ ಬೇಕಾಗಿರಲಿಲ್ಲ ಎಂದರ್ಥ. ಕುಮಾರವ್ಯಾಸಭಾರತವನ್ನು ಇಟ್ಟುಕೊಂಡು ಐತಾಳರು 'ಕರ್ಣಾದರ್ಶ', ಪಂಪ-ರನ್ನ-ಕುಮಾರವ್ಯಾಸರ ಮೂಲಕ ಮಹಾಬಲೇಶ್ವರರು 'ಕೇಶಪಾಶಪ್ರಪಂಚ', ಕೆ.ವೈ. ನಾರಾಯಣಸ್ವಾಮಿಯವರು 'ಪಂಪಭಾರತ' ಮುಂತಾದ ರಂಗ-ನಾಟಕ ಕೃತಿಗಳ ಮೂಲಕ ನಮ್ಮ ಕಾಲ ಮತ್ತು ಆ ಕಾಲಗಳನ್ನು ಬೆಸೆಯುತ್ತಿದ್ದಾರೆ, ಕನ್‌ಸ್ಟ್ರಕ್ಟ್ ಮಾಡುತ್ತಿದ್ದಾರೆ.

'ಕೇಶಪಾಶಪ್ರಪಂಚ' ಪಂಪ, ರನ್ನ, ಕುಮಾರವ್ಯಾಸರ ಭಾರತದಲ್ಲಿ ಕಂಡರಿಸಿದ 'ಶ್ರೀಮುಡಿಗೆ' ಕೈಯಿಕ್ಕುವ ಮೂಲಕ ಉಂಟಾದ ಯುದ್ಧ, ವಿನಾಶ ಮತ್ತು ಅದರ ರಾಜಕಾರಣವನ್ನು ನಮ್ಮ ಮುಂದಿಡುತ್ತದೆ. ದ್ಯೂತದಲ್ಲಿ ಕೌರವರಿಗೆ ಪಾಂಡವರು



ತಮ್ಮನ್ನೂ ಒಳಗೊಂಡಂತೆ ತಮ್ಮ ಸರ್ವಸ್ವವನ್ನೂ, ಜೊತೆಗೆ ಕೃಷ್ಣೆಯನ್ನೂ ಸೋತಿದ್ದಾರೆ; ದ್ರೌಪದಿಯ ಶ್ರೀಮುಡಿಯನ್ನು ತುಡುಕಿ, ಅವಳನ್ನು ದರದರನೆ ಕೌರವನ ಸದನಕ್ಕೆ ಎಳೆತಂದು ಉಟ್ಟ ಬಟ್ಟೆಗಳನ್ನು ಸೆಳೆದು ಅವಮಾನ ಮಾಡಲಾಗುತ್ತದೆ. ಅವಳ ಸ್ಥಿತಿಯನ್ನು ಕಂಡು ತೊಡೆ ತೋರಿಸಿ ಅವಹೇಳನ ಮಾಡುವ ದುರ್ಯೋಧನ, ವಿರಾಟನ ಅರಮನೆಯಲ್ಲಿ ಅಜ್ಞಾತವಾಸಕ್ಕಾಗಿ ವೇಷಮರೆಸಿಕೊಂಡಿರುವ ಸೈರಂಧ್ರಿಯ (ದ್ರೌಪದಿಯ) ಜುಟ್ಟನ್ನು ಹಿಡಿದು ಕಾಮಕಲೆಗೆ ಕರೆವ ಕೀಚಕ – ಹೀಗೆ ಶ್ರೀಮುಡಿಯೇ ಮಹಾಭಾರತದ ಉದ್ದಕ್ಕೂ ಯುದ್ಧದ ನಾಂದಿಯಾಗಿ ಎಲ್ಲವನ್ನೂ ಎಲ್ಲರನ್ನೂ ಕೇಶಪಾಶದಲ್ಲಿ ನುಂಗಿ ನೊಣೆಯುತ್ತದೆ. ಇಡೀ ಪ್ರಯೋಗದಲ್ಲಿ 'ಶ್ರೀಮುಡಿ' ಒಂದು ದೊಡ್ಡ ರೂಪಕವಾಗಿ ಬೆಳೆದು ಇಡೀ ಮಹಾಭಾರತವನ್ನು ವ್ಯಾಪಿಸಿಕೊಂಡುಬಿಡುತ್ತದೆ. ಈ ವಾಚಿಕವಿನ್ಯಾಸದಲ್ಲಿ ಉತ್ತರಕುಮಾರ - ಅರ್ಜುನರ ಪ್ರಸಂಗವು ಒಂದು ಕಾಮಿಕ್ ರಿಲೀಫ್ ಆಗಿ ಬರುತ್ತದೆ. ಕೇಶಪಾಶಪ್ರಪಂಚದ ಕಥನವನ್ನು ಪಂಪ, ರನ್ನ, ಕುಮಾರವ್ಯಾಸರ ಕಾವ್ಯದಿಂದ ನೀಟಾಗಿ ಎಡಿಟ್ ಮಾಡಿಕೊಂಡು, ಸಂಪಾದನೆ ಮಾಡಿಕೊಂಡು ನಟರಿಗೆ ಹಂಚಿಕೊಟ್ಟಿರುವ ರೀತಿ, ಅದನ್ನವರು ಆಯಾಯಾ ಸಮಯದಲ್ಲಿ ಪಾತ್ರವಾಗುತ್ತ ನಿರೂಪಕರಾಗುತ್ತ ವಾಚಿಸುವ -- ಅದೂ ಹಳೆಗನ್ನಡವನ್ನು – ಪ್ರೇಕ್ಷಕರಿಗೆ ತಲುಪಿಸುವ ಪರಿ ನಿಜಕ್ಕೂ ವಂಡರ್‌ಫುಲ್. ಕೌರವ - ಪಾಂಡವರ ದ್ಯೂತದ ಭಾಗ, ದ್ರೌಪದಿಯನ್ನು ಅವಮಾನಿಸುವ ದೃಶ್ಯ, ಉತ್ತರನ ಪೌರುಷದ ಪ್ರಸಂಗ, ದುರ್ಯೋಧನನ ಜಲಸ್ತಂಭನದ ವಿಧಿ, 'ಈ ಬೂತು ಎನ್ನ ಸರಂ ಕೇಳ್ದನಲ್ಲದೆ ಪೊರಮಡುವನಲ್ಲ' ಎಂದು ಹಲ್ಗಡಿಯುತ್ತ ನಿಂತ ಭೀಮ, ಶ್ರೀಮುಡಿಯನ್ನು ಹೊತ್ತುಕೊಂಡು ಬಂದು ಇಡೀ ಬ್ರಹ್ಮಾಂಡಕ್ಕೇ ಹೊದಿಸುವ ಆ ರೂಪಕ ಎಲ್ಲವೂ ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತವೆ.

ಇಡೀ ನಟರ ಗುಂಪು ತಮ್ಮ ದೇಹ, ಮನಸ್ಸು ಹಾಗೂ ಧ್ವನಿಯನ್ನು ಏಕತ್ರಗೊಳಿಸಿಕೊಂಡು ವಾಚಿಸಿ ನಟಿಸಿದ ಪರಿ ಅದ್ಭುತವಾಗಿತ್ತು. ತಮ್ಮ ಪಾತ್ರದ ಅಂತರಂಗವನ್ನೆಲ್ಲಾ ಈಚೆಗೆ ಬಸಿದು ಕಾಣಿಸಿದ ಭೀಮ, ದುರ್ಯೋಧನ, ಉತ್ತರ, ದ್ರೌಪದಿ ನನಗೆ ಇಷ್ಟವಾಗಿದ್ದಾರೆ. ಅಭಿನಯ ಅನ್ನುವುದು ಕೇವಲ ತಂತ್ರವಾಗುತ್ತಿರುವ, ಯಾಂತ್ರಿಕವಾಗುತ್ತಿರುವ ಇಂಥ ಹೊತ್ತಲ್ಲಿ ಅದನ್ನೊಂದು ಧ್ಯಾನ, ತಪಸ್ಸು ಅನ್ನುವುದರ ಕಡೆ ನೋಡಲು ಈ ಪ್ರಯೋಗದಲ್ಲಿನ ನಟರ ಗುಂಪು ಸಾಧ್ಯಮಾಡಿಕೊಟ್ಟಿದೆ.

ಕಡೆಯ ವಾಕ್ಯ: 'ಮಹಾಭಾರತದ ಯುದ್ಧದಂತಹ ಮಹಾವಿನಾಶಕ್ಕೆ ದ್ರೌಪದಿಯ ಶ್ರೀಮುಡಿಯೇ ಕಾರಣ ಎಂದು ಪ್ರಯೋಗ ಹೇಳಹೊರಟಿದೆ' ಎಂದು ಯಾರಾದರೂ ಸ್ತ್ರೀವಾದಿಗಳು ಪ್ರಶ್ನಿಸಿದರೆ?

# ಶಬ್ದ ಮತ್ತು ಜಗತ್ತು

ಬಿ.ಕೆ. ಮತಿಲಾಲ್
ಕನ್ನಡಕ್ಕೆ: ಎಂ.ಎ. ಹೆಗಡೆ

ಅಧ್ಯಾಯ ೯

## ಸ್ಫೋಟವಿರೋಧಿಗಳು ಹಾಗೂ ಈಚಿನ ವೈಯಾಕರಣರ ಮತಗಳು

### ೧. ಸ್ಫೋಟ ವಿರೋಧಿಗಳು

ವೈಯಾಕರಣರ ಸ್ಫೋಟಸಿದ್ಧಾಂತವನ್ನು ಇತರ ದಾರ್ಶನಿಕರಲ್ಲಿ ಹೆಚ್ಚಿನವರು ತಿರಸ್ಕರಿಸಿದ್ದಾರೆ. ಇಲ್ಲಿ ನಾನು ಮೀಮಾಂಸಾ ಹಾಗೂ ನ್ಯಾಯದರ್ಶನದ ಗ್ರಂಥಗಳಲ್ಲಿನ ಸ್ಫೋಟವಾದದ ಖಂಡನೆಯನ್ನು ಸಂಗ್ರಹವಾಗಿ ನಿರೂಪಿಸುತ್ತೇನೆ. ಇದೇ ಅಧ್ಯಾಯದ ಎರಡನೆಯ ಭಾಗದಲ್ಲಿ ಈಚಿನ ವೈಯಾಕರಣರ ಮತಗಳನ್ನು ಸಂಗ್ರಹಿಸಿದ್ದೇನೆ. ಮೀಮಾಂಸಕರು ಬಾಹ್ಯ ಅಸ್ತಿತ್ವವನ್ನು ಹೊಂದಿದ ಧ್ವನಿಘಟಕ ಅಥವಾ ಧ್ವನಿಮಾಗಳನ್ನು ಹೊರತುಪಡಿಸಿ ಪ್ರತ್ಯೇಕವಾದ ಸ್ಫೋಟವಿದೆಯೆಂಬುದನ್ನು ಅಲ್ಲಗಳೆಯುತ್ತಾರೆ. ಮೀಮಾಂಸಾ ಸೂತ್ರಗಳ ೧.೧.೫ರ ಮೇಲಿನ ಭಾಷ್ಯದಲ್ಲಿ ಉಪವರ್ಷನೆಂಬ ಪ್ರಾಚೀನ ಮೀಮಾಂಸಕನ ಅಭಿಪ್ರಾಯವನ್ನು ಉದಾಹರಿಸಲಾಗಿದೆ. ಆ ಅಭಿಪ್ರಾಯದ ಪ್ರಕಾರ ಧ್ವನಿಘಟಕಗಳು ಅಥವಾ ವರ್ಣಗಳು ಮಾತ್ರ ಶಬ್ದವನ್ನು ರಚಿಸಬಲ್ಲವು. ಮೀಮಾಂಸಾ ಸಿದ್ಧಾಂತದ ಪ್ರಕಾರ ಧ್ವನಿಘಟಕಗಳು ದ್ರವ್ಯಗಳೆನಿಸಿವೆ -- ಇತರ ದ್ರವ್ಯಗಳ ಧರ್ಮಗಳಲ್ಲ. ಹೀಗಿರುವುದರಿಂದ ಯಾವುದೇ ಸಮಯದಲ್ಲಿ ಈ ನಿತ್ಯವಸ್ತುಗಳು ಒಗ್ಗೂಡಲು ಸಾಧ್ಯ ಮತ್ತು ಈ ಗುಂಪು ಅರ್ಥವತ್ತಾದ ಶಬ್ದವನ್ನು ರಚಿಸಬಲ್ಲುದು. ಈ ವಿಚಾರದಲ್ಲಿ ಅನೇಕ ತೊಡಕುಗಳಿರುವುದು ಸ್ಪಷ್ಟ. ಮೊದಲನೆಯದಾಗಿ ಪ್ರತ್ಯೇಕ ಅಕ್ಷರಗಳ ಧ್ವನಿಘಟಕಗಳು ಯಾವಾಗಲೂ ಅಸ್ತಿತ್ವದಲ್ಲಿರುವುದರಿಂದ ಅವುಗಳಲ್ಲಿ ಯಾವ ಧ್ವನಿಘಟಕಗಳು ಅರ್ಥವನ್ನು ಕೊಡುವುದಕ್ಕಾಗಿ ಒಗ್ಗೂಡುತ್ತವೆಂದು ಹೇಳುವುದು ಕಷ್ಟ. ಅಲ್ಲದೆ ಅದೇ ಧ್ವನಿಘಟಕ ಅಥವಾ ವರ್ಣಗಳುಳ್ಳ ಎರಡು



ಸಮೂಹಗಳು ಒಂದೇ ಅರ್ಥವನ್ನು ಕೊಡಬೇಕಾಗುತ್ತದೆ. ಉದಾ: ನದೀ ಮತ್ತು ದೀನ. ಈ ಎರಡೂ ಶಬ್ದಗಳಲ್ಲಿರುವ ಧ್ವನಿಘಟಕಗಳು ಅವೇ ಆದುದರಿಂದ ಒಂದೇ ಅರ್ಥವನ್ನು ಕೊಡುತ್ತವೆಯೆನ್ನಬೇಕಾಗುತ್ತದೆ. ಆದ್ದರಿಂದ ಶಬ್ದಗಳಲ್ಲಿ ವ್ಯತ್ಯಾಸವನ್ನು ಗುರುತಿಸುವುದಕ್ಕಾಗಿ ಅನುಕ್ರಮ ಅಥವಾ ಕ್ರಮ ಅಥವಾ ವ್ಯವಸ್ಥೆಯ ಕಲ್ಪನೆಯನ್ನು ಹೇಳಬೇಕಾಗುತ್ತದೆ. ಮೀಮಾಂಸಕರು ಹೇಳುವಂತೆ ಧ್ವನಿಘಟಕಗಳು ನಿತ್ಯವೂ ಸರ್ವವ್ಯಾಪಿಯೂ ಆಗಿರುವುದು ನಿಜವಾದರೆ ಕಾಲ-ದೇಶಗಳನ್ನು ಆಧರಿಸಿದ ಕ್ರಮವನ್ನು ಹೇಳುವುದು ಹೇಗೆ? ಈ ಆಕ್ಷೇಪದಿಂದ ಪಾರಾಗುವುದಕ್ಕೆ ಕಾಲಿಕ - ದೇಶಿಕ ಕ್ರಮವು ವ್ಯಕ್ತವಾದ ಅಥವಾ ಉಚ್ಚರಿತವಾದ ಧ್ವನಿಘಟಕಗಳಿಗೆ ಮಾತ್ರ ಸೇರಿದೆಯೆಂದು ಹೇಳಬೇಕು. ಭರ್ತೃಹರಿಯು ವಾಕ್ಯದ ಲಕ್ಷಣವನ್ನು ಹೇಳುವಾಗ ಸೂಚಿಸುವ ಮೊದಲಿನ ಎರಡು ಅಭಿಪ್ರಾಯಗಳು – ೧. ಸಮುದಾಯ ಅಥವಾ ಸಮೂಹ ಮತ್ತು ೨. ಕ್ರಮ – ಇವುಗಳ ಬಗೆಗೆ ಮೀಮಾಂಸಕರ ಅಭಿಮತವನ್ನು ನಿರ್ದೇಶಿಸುವಂತೆ ತೋರುತ್ತದೆ (ಅಧ್ಯಾಯ ೮.೬). ವ್ಯಕ್ತವಾದ ಧ್ವನಿಘಟಕ ಅಥವಾ ವರ್ಣಗಳು ಮರುಕ್ಷಣದಲ್ಲಿ ಮಾಯವಾಗುತ್ತವೆ ಮತ್ತು ಒಂದಾದಮೇಲೊಂದರಂತೆ ವ್ಯಕ್ತಗೊಳ್ಳುತ್ತವೆ. ಈ ಸಂಗತಿಯು ಮೂಲಭೂತವಾದ ತಾತ್ತ್ವಿಕ ಪ್ರಶ್ನೆಯೊಂದನ್ನು ಹುಟ್ಟುಹಾಕುತ್ತದೆ. ಈ ಪ್ರಶ್ನೆಗೆ ಉತ್ತರರೂಪವಾಗಿಯೇ ಸ್ಫೋಟವಾದವು ಪ್ರತಿಪಾದಿತವಾಗಿದೆಯಾದ್ದರಿಂದ ಆ ಪ್ರಶ್ನೆಯನ್ನು ಈ ಹಂತದಲ್ಲಿ ಎತ್ತಿಕೊಳ್ಳಬಹುದು. ಅದು ಹೀಗೆ: ವ್ಯಕ್ತವಾದ ಧ್ವನಿಘಟಕ ಅಥವಾ ವರ್ಣಗಳು ಒಟ್ಟಾಗಿ ಅರ್ಥವನ್ನು ಕೊಡುತ್ತವೆಯೋ? ಅಥವಾ ಬೇರೆಬೇರೆಯಾಗಿಯೋ? ಈ ಪ್ರಶ್ನೆಗಳನ್ನೆತ್ತುವುದು ಸಂಗತ. ಒಟ್ಟಾಗಿ ಕೊಡುತ್ತವೆಯೆಂದರೆ ಧ್ವನಿಘಟಕಗಳೆಲ್ಲ ಒಟ್ಟಾಗಿರುವುದೇ ಅಸಾಧ್ಯ; ಬೇರೆಬೇರೆಯಾಗಿ ಕೊಡುತ್ತವೆಂದರೆ ಒಂದು ವರ್ಣದ ಉಚ್ಚಾರಣೆಯಾದರೆ ಸಾಕು, ಅಷ್ಟಕ್ಕೆಯೆ ಅರ್ಥಬೋಧೆಯಾಗಬೇಕಾಗುವುದರಿಂದ ಇನ್ನು ಇತರ ವರ್ಣಗಳ ಉಚ್ಚಾರಣೆಯು ಅನಾವಶ್ಯಕವಾಗುತ್ತದೆ. ಅದಕ್ಕೆ ಮೀಮಾಂಸಕರ ಉತ್ತರ ಹೀಗೆ: ವ್ಯಕ್ತ ಧ್ವನಿಗಳು ಕ್ಷಣಿಕವೆಂಬುದು ನಿಜ. ಆದರೆ ಅವು ಒಂದೊಂದೂ ಮನಸ್ಸಿನಲ್ಲಿ ಸಂಸ್ಕಾರವನ್ನು ಮೂಡಿಸಿರುತ್ತವೆ. ಅಂತ್ಯವರ್ಣವನ್ನು ಉಚ್ಚರಿಸಿದೊಡನೆ ಹಿಂದಿನ ವರ್ಣಗಳ ಸಂಸ್ಕಾರದ ಸ್ಮೃತಿಯು ಜಾಗ್ರತಗೊಂಡು ಅಂತ್ಯವರ್ಣವು ಇತರ ವರ್ಣಗಳೊಂದಿಗೆ ಸೇರಿ ಅರ್ಥಬೋಧೆಯನ್ನುಂಟುಮಾಡುತ್ತದೆ. ಇದಕ್ಕೆ ನಾವು ಇನ್ನೊಂದು ಪ್ರಶ್ನೆಯನ್ನೆತ್ತಬಹುದು: ನಾವು ಉಚ್ಚರಿಸಿದ ಕ್ರಮದಲ್ಲಿಯೇ ಸ್ಮೃತಿಯು ಜಾಗ್ರತಗೊಳ್ಳುವುದಾದರೂ ಹೇಗೆ? ಅಲ್ಲಿ ಅಷ್ಟೊಂದು ನಿಯತತೆ ಯಾಕೆ? (ಈ ಪ್ರಶ್ನೆ ಯಾಕೆಂದರೆ ಸ್ಮೃತಿಯನ್ನು ಹಾಗೆ ನಿಯತಗೊಳಿಸಲಾಗುವುದಿಲ್ಲ.) ಮೀಮಾಂಸಕರು

ಕ್ರಮದಲ್ಲಿ ವ್ಯತ್ಯಾಸವಾಗುವ ಸಾಧ್ಯತೆಯನ್ನು ಅಲ್ಲಗಳೆಯುವುದಿಲ್ಲ. ಆದರೆ ಆ ಕಾರಣದಿಂದ ಸ್ಫೋಟವೆಂಬ ಹೆಚ್ಚುವರಿಯಾದ ವಸ್ತುವನ್ನು ಗೃಹೀತವಾಗಿಟ್ಟುಕೊಳ್ಳಬೇಕಿಲ್ಲ ಎನ್ನುತ್ತಾರೆ. ಶಬರಸ್ವಾಮಿಯು ಸ್ಫೋಟದ ಬಗೆಗೆ ತನ್ನ ನಿಲುಮೆಯನ್ನು ಹೀಗೆ ಸಂಗ್ರಹಿಸಿದ್ದಾನೆ: ವೈಯಾಕರಣರು ಸ್ಫೋಟವಾದವನ್ನು ಎತ್ತಿಹಿಡಿಯಬೇಕೆಂದಾದರೆ ಎರಡು ಬೇಡವಾದ ಕಲ್ಪನೆಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ ಸ್ಫೋಟವು ಒಂದು ಪ್ರತ್ಯೇಕವಾದ ವಸ್ತುವೆಂದು ಇಟ್ಟುಕೊಳ್ಳಬೇಕಾಗುತ್ತದೆ. ಜೊತೆಗೆ ಸ್ಫೋಟವಿರೋಧಿಗಳು ಹೇಳುವಂತೆ ವರ್ಣ ಅಥವಾ ಧ್ವನಿಗಳನ್ನು ಕೇಳಿದಾಗ ಹುಟ್ಟುವ ಸಂಸ್ಕಾರಗಳ ಪ್ರಸ್ತುತ ಸ್ಮೃತಿಯು ಸ್ಫೋಟವನ್ನು ವ್ಯಕ್ತಗೊಳಿಸುವ ಶಕ್ತಿಯನ್ನು ಹೊಂದಿದೆಯೆಂದು ಒಪ್ಪಬೇಕಾಗುತ್ತದೆ. ಮೀಮಾಂಸಕರು ಧ್ವನಿಯನ್ನು ಕೇಳಿದಾಗ ಉಂಟಾಗುವ ಸಂಸ್ಕಾರಗಳಿಗೆ ಪ್ರಸ್ತುತವಾದ ಅರ್ಥವನ್ನು ಬೋಧಿಸುವ ಶಕ್ತಿಯಿದೆಯೆಂದು ಮಾತ್ರ ಒಪ್ಪುತ್ತಾರೆ.

ಸ್ಫೋಟವಾದದ ಖಂಡನಕಾರರಲ್ಲಿ ಅಗ್ರಗಣ್ಯರೆನಿಸಿದವರು ಇಬ್ಬರು: ಮೀಮಾಂಸಕರಲ್ಲಿ ಕುಮಾರಿಲ ಮತ್ತು ನೈಯಾಯಿಕರಲ್ಲಿ ಜಯಂತ. ಸ್ವಾರಸ್ಯದ ಸಂಗತಿಯೆಂದರೆ ಕುಮಾರಿಲನ ಶಿಷ್ಯನೆಂದು ಪ್ರತೀತಿಯಿರುವ ಮಂಡನಮಿಶ್ರನು ಸ್ಫೋಟಸಿದ್ಧಿಯೆಂಬ ಗ್ರಂಥವನ್ನು ರಚಿಸಿದ್ದಾನೆ. ಅದರಲ್ಲಿ ಕುಮಾರಿಲನ ಶ್ಲೋಕವಾರ್ತಿಕದ ಸ್ಫೋಟವಾದವೆಂಬ ಅಧ್ಯಾಯದಲ್ಲಿ ಕುಮಾರಿಲನು ಎತ್ತಿರುವ ಆಕ್ಷೇಪಗಳಿಗೆ ಉತ್ತರಿಸಿದ್ದಾನೆ. ಅವರ ವಾದ-ವಿವಾದಗಳ ವಿಶ್ಲೇಷಣೆ ಗೌರೀನಾಥ ಶಾಸ್ತ್ರಿಯವರ ಕೃತಿಯಲ್ಲಿದೆ (೧೯೫೯, ೧೧೩ - ೩೨).

ಕುಮಾರಿಲನ ವಾದ ಹೀಗೆ: 'ಗೋ' ಎಂಬ ಪದವನ್ನು ಸ್ಫೋಟವಾದಿಗಳು ಒಂದು ಸರಳವಾದ, ಅಖಂಡವಾದ ವಸ್ತು (ಸ್ಫೋಟ) ಎಂದು ತಿಳಿಯುತ್ತಾರೆ. ಆದರೆ ಈ ಪದ (ಅಥವಾ ವಾಕ್ಯ) ವು ಅನೇಕ ವರ್ಣಗಳನ್ನು (ಪದಗಳನ್ನು) ಅಂಶಗಳನ್ನಾಗಿ ಹೊಂದಿದೆ. ಆ ಪದ (ಅಥವಾ ಸ್ಫೋಟ) ವು ಅದರಲ್ಲಿರುವ ವರ್ಣಗಳಿಂದ ಬೇರೆಯಾಗಿ ಇರಲಾರದು. ಒಂದು ವೇಳೆ ಅದು ಬೇರೆಯಾಗಿದ್ದರೆ ನಮ್ಮ ಅನುಭವಕ್ಕೆ ಬರುತ್ತಿತ್ತು. ಅಥವಾ ವರ್ಣಗಳು ಅದರ ಅಂಗಗಳೆಂಬುದು ಗಮನಕ್ಕೆ ಬಾರದಂತೆ ಪ್ರತ್ಯೇಕ ವಸ್ತುವಾಗಿ ಕಾಣುತ್ತಿತ್ತು. ಆದರೆ ಎಲ್ಲರಿಗೂ ಸಾಕ್ಷಾತ್ಕಾರವಾಗುವುದು ಅಥವಾ ಅನುಭವಕ್ಕೆ ಬರುವುದು ವರ್ಣಗಳ ಸಮೂಹ ಮಾತ್ರ; ವರ್ಣಗಳಿಗಿಂತ ಭಿನ್ನವಾದ ಪ್ರತ್ಯೇಕ ಅಸ್ತಿತ್ವವುಳ್ಳ ವಸ್ತುವು ನಮ್ಮ ಗಮನಕ್ಕೆ ಬರುವುದಿಲ್ಲ. ವ್ಯತ್ಯಾಸವಿಷ್ಟೇ: ಉಚ್ಚಾರಣೆಯನ್ನು ಕೇಳುವಾಗ ನಾವು ಒಂದೊಂದು ವರ್ಣ ಅಥವಾ ಧ್ವನಿಘಟಕವನ್ನು ಗ್ರಹಿಸುತ್ತೇವೆ; ಅಂತಿಮವಾದ ಗ್ರಹಿಕೆಯಲ್ಲಿ ಅವೆಲ್ಲವುಗಳನ್ನೂ ಒಟ್ಟಾಗಿ ಗ್ರಹಿಸಬೇಕಾಗುತ್ತದೆಯೆಂಬುದು



ನಿಜ. ಹೀಗೆ ಹೇಳಿದೊಡನೆ ಪದವೊಂದು ಸ್ಫೋಟವೆಂಬುದನ್ನು ಪುಷ್ಟೀಕರಿಸಲಾಗುವುದಿಲ್ಲ; ಅದು ಸಂಖ್ಯೆಯಲ್ಲಿಯೂ ಗುಣದಲ್ಲಿಯೂ ವರ್ಣಗಳ ಸಮೂಹಕ್ಕಿಂತ ಬೇರೆಯಾಗಿದೆಯೆನ್ನುವಂತಿಲ್ಲ. ವರ್ಣಗಳನ್ನು ಗ್ರಹಿಸದೆ ಕೇವಲ ಪದವನ್ನು ಗ್ರಹಿಸಲು ಎಂದಿಗೂ ಸಾಧ್ಯವಿಲ್ಲ. ಇದು ಪದ (ವಾಕ್ಯ)ವು ಬಹಳಷ್ಟು ಅಂಶಗಳಿಂದ ಕೂಡಿರುವಂಥಾದ್ದು ಅಥವಾ ಸಂಯುಕ್ತ ವಸ್ತು ಎಂಬುದನ್ನು ಹೇಳುತ್ತದೆಯೇ ಹೊರತು ಸರಳವಾದ ವಸ್ತುವೆಂದಲ್ಲ. ಈ ಸಂಯುಕ್ತವಾದ ವಸ್ತುವನ್ನು ಗ್ರಹಿಸುವುದು ಒಂದೇ ಕ್ರಿಯೆಯಾಗಿದೆ. ಅಂದರೆ ಒಂದೇ ಗ್ರಹಿಕೆಯಲ್ಲಿ ನಾವು ಗ್ರಹಿಸುವ ವಸ್ತುವು ಅನೇಕ ಅಂಶಗಳಿಂದ ರಚಿತವಾಗಿದ್ದಿರ ಬಹುದು. ಆದ್ದರಿಂದ ನಾವು ಭ್ರಮೆ ಅಥವಾ ತಪ್ಪು ತಿಳುವಳಿಕೆಯ ಬಗೆಗೆ ಬೇರೊಂದು ನೆಲೆಯಿಂದ ಮಾತನಾಡಬೇಕಾಗುತ್ತದೆ. ಪದಸ್ಫೋಟ ಅಥವಾ ವಾಕ್ಯಸ್ಫೋಟದಲ್ಲಿ ಕಂಡುಬರುವ ಏಕತೆಯ ಅನುಭವವು ತೋರಿಕೆ ಅಥವಾ ಶುದ್ಧತೋರಿಕೆಯಾಗಿದೆ. ಬಹುತ್ವವುಳ್ಳ ವಸ್ತುವು ಏಕತ್ವವುಳ್ಳದ್ದಾಗಿ ಕಾಣುತ್ತದೆ. ('ಅದಲ್ಲದ ವಸ್ತುವನ್ನು ಅದನ್ನಾಗಿ ತಿಳಿಯುವುದು' ಭ್ರಮೆಯ ಉದಾಹರಣೆ.) ಗ್ರಹಿಕೆಯಲ್ಲಿನ ಏಕತೆಯು ಅಂತಃಸ್ಸತ್ತ್ವದಲ್ಲಿನ ಏಕತೆಯ ಭ್ರಮೆಗೆ ಕಾರಣವಾಗಿದೆ. ಪದ (ಅಥವಾ ವಾಕ್ಯ) ವನ್ನು ಗ್ರಹಿಸಿದಾಗ ಕಂಡುಬರುವ ಏಕತೆ ಅಥವಾ ಅಖಂಡತೆಯ ಅನುಭವಕ್ಕೆ ಅಂತಿಮವಾಗಿ ನಾವು ಪಡೆಯುವ ಜ್ಞಾನವು ಒಂದೇ ಆಗಿರುವುದೂ ಕಾರಣ. ಆದ್ದರಿಂದ ಇದು ಗ್ರಹಿಕೆಯ ಗುಣಗಳನ್ನು ಗ್ರಹಿಸಲ್ಪಟ್ಟ ವಸ್ತುವಿನ ಮೇಲೆ ಆರೋಪಿಸುವುದಕ್ಕೆ ಉದಾಹರಣೆಯಾಗಿದೆ.

ಈ ವಾದ ಅತ್ಯಂತ ಕೌಶಲ್ಯಪೂರ್ಣವಾದದ್ದು. ಸಂಯುಕ್ತವಸ್ತುವು (ಪದ ಅಥವಾ ವಾಕ್ಯ) ಒಂದೇ ವಸ್ತುವಾಗಿ ಮತ್ತು ಅಖಂಡವಾಗಿ ಕಾಣುವುದು ಹಗ್ಗವು ಹಾವಾಗಿ ಕಾಣುವುದಕ್ಕೆ ಸದೃಶವಾದದು. ಸ್ಫೋಟವಾದವನ್ನು ಪ್ರತಿಪಾದಿಸುವವರು ಮತ್ತೊಂದು ವಿಧವಾದ ತಪ್ಪುಗ್ರಹಿಕೆ ಅಥವಾ ಭ್ರಮೆಯ ಬಗ್ಗೆ ಹೇಳುತ್ತಾರೆ: ವಾಸ್ತವವಾಗಿ ಅಖಂಡ ವಸ್ತು (= ಸ್ಫೋಟ)ವು ವರ್ಣ ಅಥವಾ ವರ್ಣಗಳ ಸಮೂಹವಾಗಿ ಕಾಣುತ್ತದೆ. ನಾವು ವರ್ಣಗಳನ್ನು ಗುರುತಿಸುತ್ತೇವೆಂಬುದು ಸ್ಫೋಟವಾದಿಗಳ ಪ್ರಕಾರ ತಪ್ಪುಗ್ರಹಿಕೆಯೆನಿಸುತ್ತದೆ. ಯಾಕೆಂದರೆ ನಮಗೆ ಪ್ರತ್ಯಕ್ಷವಾಗಿರುವುದು ನಿಜವಾದ ಶಬ್ದ ಅಥವಾ ಸ್ಫೋಟವೇ ಆಗಿರುತ್ತದೆ. ಕುಮಾರಿಲನು ಸ್ಫೋಟವಾದಿಗಳ ವಾದವನ್ನೇ ತಿರುಗಿಸಿ ಅವರನ್ನು ಖಂಡಿಸುತ್ತಾನೆ. ಅವನ ಪ್ರಕಾರ ಅಂತಿಮ ಗ್ರಹಿಕೆಯಲ್ಲಿ ಕಂಡುಬರುವ ಏಕತೆಯೆಂಬುದು ಭ್ರಮೆ. ವಾಸ್ತವವಾಗಿ ವರ್ಣಗಳಿಂದ ಕೂಡಿದ ಸಂಯುಕ್ತವಸ್ತುವು ಒಂದಾಗಿ ಅಖಂಡವಾದ ವಸ್ತುವಾಗಿ ತೋರ್ಪಡಿಸಿಕೊಳ್ಳುತ್ತದೆ. ಈ ಆಕ್ಷೇಪಕ್ಕೆ ಮಂಡನಮಿಶ್ರ ಉತ್ತರಿಸಿದ್ದಾನೆ.

ಅವನ ಪ್ರಕಾರ ಇದು ನಮ್ಮ ಅಲ್ಪಬುದ್ಧಿಯ ದೋಷ. ಈ ಅಲ್ಪಬುದ್ಧಿಯ ಕಾರಣದಿಂದ ವರ್ಣ ಅಥವಾ ಧ್ವನಿಘಟಕಗಳಿಂದ ಪ್ರತ್ಯೇಕವಾಗಿ ಸ್ವತಂತ್ರವಾದ ಅಖಂಡವಾದ ಪದ (ಅಥವಾ ವಾಕ್ಯ) ವನ್ನು ಗ್ರಹಿಸಲಾಗುವುದಿಲ್ಲ. ಆದರೂ ಇದು ಏಕತೆಯ ಅಂತರ್ಜ್ಞಾನವನ್ನು ನಿಷೇಧಿಸುವುದಿಲ್ಲ. ಬಹುತ್ವಗ್ರಹಣವು ಏಕತ್ವಗ್ರಹಣದೊಂದಿಗೆ ವ್ಯಾಪ್ತಿಯನ್ನು ಹೊಂದಿದೆಯೆಂಬುದಾಗಲಿ, ಏಕತೆಯನ್ನು ಪ್ರತ್ಯೇಕವಾಗಿ ಎಂದೂ ಗ್ರಹಿಸಲಾಗುವುದಿಲ್ಲವೆಂಬುದಾಗಲಿ ಏಕತೆಯು ಕೇವಲ ಭ್ರಮೆಯೆಂಬುದನ್ನು ಸಿದ್ಧಪಡಿಸುವುದಿಲ್ಲ. ಯಾಕೆಂದರೆ ಕುಮಾರಿಲ ಮತ್ತು ಇತರ ವಾಸ್ತವವಾದಿಗಳಾದ ದಾರ್ಶನಿಕರು ಗೋತ್ವ-ಸಾಮಾನ್ಯದಂಥ ವಾಸ್ತವವನ್ನು ನಿರಾಕರಿಸುವುದಿಲ್ಲ. ಗೋತ್ವ-ಸಾಮಾನ್ಯವನ್ನು ಗೋ-ವ್ಯಕ್ತಿಯೊಂದಿಗೇ ಗ್ರಹಿಸಬೇಕಾಗುತ್ತದೆಯೇ ಹೊರತು ಪ್ರತ್ಯೇಕವಾಗಿ ಗ್ರಹಿಸಲಾಗುವುದಿಲ್ಲ. ಈ ವಾದವನ್ನು ತಪ್ಪಾಗಿ ತಿಳಿಯಬಾರದು. ಸ್ಫೋಟವನ್ನು ಸಾಮಾನ್ಯ ಅಥವಾ ಜಾತಿಯೆಂದು ತಿಳಿಯಬೇಕಿಲ್ಲ; ಅದನ್ನೊಂದು ಪ್ರತ್ಯೇಕವಾದ ವಸ್ತುವನ್ನಾಗಿ ತಿಳಿಯಬೇಕೆಂಬುದು ವಾದದ ಮುಖ್ಯಾಂಶ. ಗೋತ್ವ-ಸಾಮಾನ್ಯವು ಗೋ-ವ್ಯಕ್ತಿಗಳಿಂದ ಬೇರೆಯಾಗಿರುವಂತೆ ಸ್ಫೋಟವು ವರ್ಣಬಹುತ್ವದಿಂದ ಬೇರೆಯಾಗಿದೆ. ಅಥವಾ ನೈಯಾಯಿಕರು ಅವಯವಗಳಿಂದ ಭಿನ್ನವಾಗಿ ಅವಯವಿಯ ಅಸ್ತಿತ್ವವನ್ನು ಹೇಳುತ್ತಾರಲ್ಲವೇ? – ಘಟಕವು ಕಪಾಲಗಳಿಂದ ಪ್ರತ್ಯೇಕವಾಗಿರುವಂತೆ. ಇದೂ ಹಾಗೇಯೇ. ನಾವು ಹಿಂದೆಯೇ ಹೇಳಿದಂತೆ ಜಾತಿಸ್ಫೋಟ, ವ್ಯಕ್ತಿಸ್ಫೋಟ, ಆಂತರ ಸ್ಫೋಟ – ಹೀಗೆ ಒಂದೊಂದಾಗಿ ಅದು ಗ್ರಹಿಸಲ್ಪಡುತ್ತದೆ.

ಮೀಮಾಂಸಕರ ಪ್ರಕಾರ ಪ್ರತಿಯೊಂದು ವರ್ಣ ಅಥವಾ ಧ್ವನಿಘಟಕವು ನಿತ್ಯ; ಪ್ರತಿಯೊಂದು ಪದವೂ ಕ್ರಮವಾಗಿ ಸೇರಿದ ವರ್ಣಗಳಿಂದಾದುದು; ಪ್ರತಿಯೊಂದು ವಾಕ್ಯವೂ ಪದಗಳು ಕ್ರಮವಾಗಿ ಸೇರಿದಾಗ ರಚಿತವಾಗುತ್ತದೆ. ಈಗ ಈ ಕ್ರಮವು ಯಾವುದಕ್ಕೆ ಸೇರಿದ್ದು? ಅದು ವರ್ಣಗಳಿಗೆ ಸೇರಿದ್ದಾಗಿರಲಾರದು. ಅದನ್ನು ಚೈತನ್ಯವುಳ್ಳ ಜೀವಿಗಳು ನಿರ್ಮಿಸಿರಬೇಕು. ಇಂಥ ಪ್ರಯತ್ನಗಳು ಇಚ್ಛಾಶಕ್ತಿಯನ್ನು ಅವಲಂಬಿಸಿರುತ್ತವೆ. ಪ್ರಯತ್ನಜನ್ಯವಾದ ಕ್ರಮವು ಅನಿತ್ಯವೆನಿಸುವುದು ಅನಿವಾರ್ಯ. ಇದು ಮೀಮಾಂಸಕರು ಒಪ್ಪಿಕೊಂಡ ಸಿದ್ಧಾಂತಕ್ಕೆ ವಿರುದ್ಧ. ಯಾಕೆಂದರೆ ಪದ ಮತ್ತು ವಾಕ್ಯಗಳು ನಿತ್ಯವಾಗಿದ್ದು ವಿವಿಧ ಧ್ವನ್ಯಂಗಗಳ ಸಂಪರ್ಕದಿಂದ ವ್ಯಕ್ತವಾಗುತ್ತವೆ ಯೆಂಬುದು ಅವರ ನಿಲುಮೆ. ಕುಮಾರಿಲನ ಪ್ರಕಾರ ಕ್ರಮವು ವರ್ಣಗಳಿಗೆ ಅತ್ಯವಶ್ಯವಾದ ವಿಶೇಷಣವಲ್ಲ. ಆದ್ದರಿಂದ 'ಕ್ರಮವುಳ್ಳ ವರ್ಣಗಳು' ಎಂಬುದನ್ನು ಮೇಲ್ನೋಟಕ್ಕೆ ಸೂಚಿತವಾದ ವಿಶಿಷ್ಟ ಕ್ರಮವುಳ್ಳ ವರ್ಣಗಳ ಸಮೂಹವೆಂದು ವ್ಯಾಖ್ಯಾನಿಸಬೇಕೆಂಬುದು ಅವನ ಅಭಿಪ್ರಾಯ. ಭಾರತೀಯ ತಾರ್ಕಿಕ ಪರಿಭಾಷೆಯಲ್ಲಿ



ಹೇಳುವುದಾದರೆ ಕ್ರಮವು ವಿಶೇಷಣವಲ್ಲ; ಉಪಲಕ್ಷಣ. ಮಾನವನಿರ್ಮಿತ ಕ್ರಮವು ಶಬ್ದದ 'ಸೂಚಕ'ವಾದೀತೇ ಹೊರತು ಆದರೆ ಅಂಗವಾಗಲಾರದು. ಯಾಕೆಂದರೆ ಶಬ್ದವನ್ನು ಹುಟ್ಟಿಸಲು ಸಾಧ್ಯವಿಲ್ಲ. ಆದ್ದರಿಂದ ಅನಿತ್ಯವಾದ ಕ್ರಮವು ಪದದ ಧರ್ಮವಾಗಲಾರದು; ಆದ್ದರಿಂದ ಪದವು ಅನಿತ್ಯವಾಗುವುದಿಲ್ಲ.

ಸ್ಫೋಟವಾದವನ್ನು ಖಂಡಿಸುವಲ್ಲಿ ನೈಯಾಯಿಕರು ಮೀಮಾಂಸಕರನ್ನೇ ಅನುಸರಿಸುತ್ತಾರೆ. ಉದಾಹರಣೆಗೆ, ಜಯಂತಭಟ್ಟ. ವಾತ್ಸ್ಯಾಯನನು ನ್ಯಾಯಸೂತ್ರದ ೩.೨.೬೨ನೇ ಸೂತ್ರದ ಮೇಲಿನ ಭಾಷ್ಯದಲ್ಲಿ ನಾವು ಕೇಳಿದ ಬೇರೆಬೇರೆ ವರ್ಣಗಳ ಪ್ರತಿಸಂಧಾನದಿಂದ ಪದವು ಇಂಥದೆಂಬ ನಿರ್ಧಾರಕ್ಕೆ ಬರುತ್ತೇವೆ ಎನ್ನುತ್ತಾನೆ. ಆದರೆ ಈ ವರ್ಣಗಳು ಅಥವಾ ಧ್ವನಿಘಟಕಗಳು ಕ್ಷಣಿಕವಾಗಿವೆ. ಜಯಂತನು ಸ್ಪಷ್ಟವಾಗಿ ಹೇಳುತ್ತಾನೆ: ವರ್ಣಗಳ ಸಮೂಹವೇ ಪದ; ಪದಗಳ ಸಮೂಹವೇ ವಾಕ್ಯ. ಮೀಮಾಂಸಕರು ವರ್ಣಗಳು ನಿತ್ಯವೆಂದು ಹೇಳುತ್ತಾರೆ. ಉದಾ: ಗಕಾರ. ಅದನ್ನು ಬೇರೆ ಬೇರೆ ವಕ್ತೃಗಳು ಬೇರೆ ಬೇರೆ ತೆರನಾಗಿ ಉಚ್ಚರಿಸಬಹುದು – ದೊಡ್ಡದು, ಸಣ್ಣದು, ಬಲವಾಗಿ, ಕ್ಷೀಣವಾಗಿ ಇತ್ಯಾದಿ; ಆದರೆ ಗಕಾರವು ಒಂದೇ. ಆದರೆ ನೈಯಾಯಿಕರ ಪ್ರಕಾರ ಬೇರೆ ಬೇರೆ ವಕ್ತೃಗಳು ಉಚ್ಚರಿಸುವ ಗಕಾರವು ನಿಜವಾಗಿಯೂ ಬೇರೆಬೇರೆಯೇ. ಹಾಗಿದ್ದರೂ ನಾವು ಅದನ್ನು ಗಕಾರವೆಂದು ಗುರುತಿಸುವುದಕ್ಕೆ ಕಾರಣವಾದುದು ಎಲ್ಲ ಗಕಾರಗಳಲ್ಲಿರುವ ಗ-ತ್ವಜಾತಿ ಅಥವಾ ಉಚ್ಚಾರಣೆಗಳಲ್ಲಿರುವ ಸಾದೃಶ್ಯ. ಮೀಮಾಂಸಕರು ನಿತ್ಯವಾದ ವರ್ಣವು ಪ್ರತಿಯೊಂದು ಉಚ್ಚಾರಣೆ ಯಲ್ಲಿಯೂ ಭಿನ್ನವಾಗಿ ಕಾಣುವುದಕ್ಕೆ ಅಭಿವ್ಯಕ್ತಿಭೇದವೇ ಕಾರಣವೆಂದು ಹೇಳಿದರೆ ಅವರೇ ವಿರೋಧಿಸುವ ವರ್ಣಸ್ಫೋಟವನ್ನು ಒಪ್ಪಿಕೊಳ್ಳುವ ಹಂತದಲ್ಲಿದ್ದಾರೆಂದು ನೈಯಾಯಿಕರು ಆಕ್ಷೇಪಿಸುತ್ತಾರೆ. ಬೇರೆ ಬೇರೆ ವರ್ಣಗಳ ಸಹಯೋಗಕ್ಕೆ ಸಂಬಂಧಿಸಿದಂತೆ ಕುಮಾರಿಲನ ಪರಿಹಾರವು ನೈಯಾಯಿಕರಿಗೂ ಸಮ್ಮತ. ಅಂತ್ಯವರ್ಣವನ್ನು ಉಚ್ಚರಿಸಿದೊಡನೆ ಹಿಂದಿನ ವರ್ಣಗಳ ಸ್ಮೃತಿ-ಸಂಸ್ಕಾರವು ಜಾಗ್ರತಗೊಂಡು ಅರ್ಥಬೋಧೆಯಾಗುತ್ತದೆ ಅಥವಾ ಎಲ್ಲ ವರ್ಣಗಳ ಪ್ರತಿಸಂಧಾನದ ಮೂಲಕ ಅರ್ಥಬೋಧೆಯಾಗುತ್ತದೆ ಎಂಬುದು ಇಬ್ಬರಿಗೂ ಸಮ್ಮತ.

## ೨. ಅನಂತರದ ವೈಯಾಕರಣರು: ಸ್ಫೋಟದ ವರ್ಗೀಕರಣ

ಅನಂತರದ ವೈಯಾಕರಣರು ಹೀಗೆ ವಾದಿಸುತ್ತಾರೆ: ಪದವು ವರ್ಣಗಳಿಂದ ರಚಿತವಾಗಿದೆಯೆಂದು ತಿಳಿಯುವವರು ಪ್ರತಿಯೊಂದು ವರ್ಣಕ್ಕೂ ಸೂಚಿಸುವ ಶಕ್ತಿಯಿದೆಯೆಂದು ಒಪ್ಪಬೇಕಾಗುತ್ತದೆ. ಇಲ್ಲವಾದರೆ ವರ್ಣಗಳ ಸಮೂಹವಾದ

ಪದಕ್ಕೆ ಸೂಚಿಸುವ ಶಕ್ತಿಯಿರುವುದಿಲ್ಲ. ಆದರೆ ಪ್ರತಿಯೊಂದು ವರ್ಣಕ್ಕೂ ಸೂಚನಾಶಕ್ತಿಯಿದೆಯೆಂಬುದನ್ನು ಒಪ್ಪಿದರೆ ಒಂದು ತೆರನಾದ ಅಸಂಗತತೆ ಯುಂಟಾಗುತ್ತದೆ. ಉದಾ: 'ಗ'. ಈ ಅಸಂಗತತೆಯನ್ನು ನಿವಾರಿಸಲು ಸ್ಫೋಟದ ಆವಶ್ಯಕತೆಯಿದೆ. ಇಲ್ಲವಾದರೆ ಒಂದೇ 'ಗ'ವು ಸಾವಿರಾರು ಶಬ್ದಗಳಲ್ಲಿ ಬರುತ್ತದೆಯಾದುದರಿಂದ ಅದು ಸಾವಿರಾರು ಸೂಚ್ಯಾರ್ಥಗಳನ್ನು ಹೊಂದಿದೆ ಎನ್ನಬೇಕಾಗುತ್ತದೆ. ವೈಯಾಕರಣರ ಈ ವಾದವನ್ನು ಪಾತಂಜಲಯೋಗದರ್ಶನವನ್ನು ಪ್ರತಿಪಾದಿಸುವವರು ಕೂಡ ಒಪ್ಪುತ್ತಾರೆ. ಯೋಗಸೂತ್ರ ೩.೧೭ರ ಮೇಲಿನ ವ್ಯಾಸಭಾಷ್ಯದಲ್ಲಿ ಇದು ವಿಶದವಾಗಿದೆ. (ಈ ಅನುಮೋದನೆಯು ಮಹಾಭಾಷ್ಯಕಾರ ಪತಂಜಲಿ ಮತ್ತು ಯೋಗಸೂತ್ರಕಾರ ಪತಂಜಲಿ ಇಬ್ಬರೂ ಒಂದೇ ವ್ಯಕ್ತಿಯೋ ಅಥವಾ ಬೇರೆಬೇರೆಯೋ ಎಂಬ ಬಗ್ಗೆ ಏನನ್ನೂ ಹೇಳುವುದಿಲ್ಲ.) ಸ್ಫೋಟ ಸಿದ್ಧಾಂತವನ್ನು ಸಮರ್ಥಿಸುವ ಸಲುವಾಗಿ ಸರಳವಾದ ಇನ್ನೊಂದು ವಾದವನ್ನೂ ಮಂಡಿಸಲಾಗಿದೆ. ಇದು ಸಂಸ್ಕೃತ ಭಾಷೆಯಲ್ಲಿರುವ 'ಶಬ್ದ' ಎಂಬ ಪದದ ಅಸ್ಪಷ್ಟತೆಯನ್ನು ಆಧರಿಸಿದೆ. 'ನಾವು ಶಬ್ದದಿಂದ ಅರ್ಥವನ್ನು ತಿಳಿಯುತ್ತೇವೆ' ಎಂದು ಜನರು ಹೇಳುತ್ತಾರೆ. ಇಲ್ಲಿ 'ಶಬ್ದ' ಎಂಬ ಪದವು ಏಕವಚನದಲ್ಲಿರುವುದರಿಂದ ಅದು ವರ್ಣಬಹುತ್ವವನ್ನು ಸೂಚಿಸುವುದಿಲ್ಲ. ಇಲ್ಲವಾದರೆ 'ನಾವು ಶಬ್ದಗಳಿಂದ ಅರ್ಥವನ್ನು ತಿಳಿಯುತ್ತೇವೆ' ಎಂದು ಹೇಳಬೇಕಾಗಿತ್ತು. ಹೀಗೆ ಭಾಷಿಕ ಅಂತರ್ಜ್ಞಾನವು ಶಬ್ದ ಅಥವಾ ವಾಕ್ಯದ ಏಕತೆಯನ್ನು ಬೆಂಬಲಿಸುತ್ತದೆ. ಈ ಧ್ವನಿಘಟಕಗಳ ಸಮೂಹಕ್ಕೆ ಏಕತೆಯನ್ನು ತರುವಂಥದು ಸ್ಫೋಟವೇ. ಆದ್ದರಿಂದ ಜನರು ಶಬ್ದದ ಬಗ್ಗೆ ಹೇಳುವಾಗ ತಮಗೆ ಅರಿವಿಲ್ಲದಂತೆ ಸ್ಫೋಟದ ಬಗ್ಗೆ ಹೇಳುತ್ತಾರೆ. ಈ ವಾದಕ್ಕೆ ಮೀಮಾಂಸಕರು ಹಾಗೂ ನೈಯಾಯಿಕರ ಉತ್ತರವು ಸ್ಪಷ್ಟವಾಗಿದೆಯಾದ್ದರಿಂದ ವಿವರಣೆ ಬೇಕಿಲ್ಲ.

ಮಂಡನಮಿಶ್ರನ ಕೃತಿರಚನೆಯಾದ ಮೇಲೆ ಸ್ಫೋಟಸಿದ್ಧಾಂತವೊಂದರ ಮೇಲೆಯೇ ಅನೇಕ ಗ್ರಂಥಗಳ ರಚನೆಯಾಯಿತು. ಈ ತೆರನ ಗ್ರಂಥಕಾರರಲ್ಲಿ ಹೆಸರಿಸಬಹುದಾದವರು ಭರತಮಿಶ್ರ, ಶೇಷಕೃಷ್ಣ ಮತ್ತು ನಾಗೇಶ ಭಟ್ಟ. ಇವರಲ್ಲಿ ನಾಗೇಶ ಭಟ್ಟ (ಕ್ರಿ.ಶ. ೧೮ನೆಯ ಶತಮಾನ) ತನ್ನ ವಿನೂತನವಾದ ಶೈಲಿ ಮತ್ತು ಅಪಾರವಾದ ಪಾಂಡಿತ್ಯಗಳ ಕಾರಣದಿಂದ ಇನ್ನಿತರರಿಗಿಂತ ಶ್ರೇಷ್ಠನೆನಿಸಿದ್ದಾನೆ. ನಾಗೇಶನ ಕೃತಿ 'ಸ್ಫೋಟವಾದ'. ಸ್ಫೋಟದ ಎಂಟು ವಿಧವಾದ ವರ್ಗೀಕರಣದಿಂದ ಈ ಕೃತಿಯು ಆರಂಭಗೊಳ್ಳುತ್ತದೆ. ಅವು: ೧. ವರ್ಣ, ೨. ಪದ, ೩. ವಾಕ್ಯ, ೪. ಅಖಂಡಪದ, ೫. ಅಖಂಡವಾಕ್ಯ, ೬. ವರ್ಣಸಾಮಾನ್ಯ, ೭. ಪದಸಾಮಾನ್ಯ ಮತ್ತು ೮. ವಾಕ್ಯಸಾಮಾನ್ಯ. ಅವನು 'ಅರ್ಥವನ್ನು ಸ್ಫೋಟಿಸುವಂಥದ್ದೇ ಸ್ಫೋಟ' ಎಂದು ನಿಷ್ಪತ್ತಿಯನ್ನು ಹೇಳುತ್ತಾನೆ.



ಅವನ ವ್ಯಾಖ್ಯಾನಕಾರನಾದ ಕೃಷ್ಣಮಾಚಾರ್ಯನು ಹೇಳುತ್ತಾನೆ: ಸ್ಫೋಟವನ್ನು ಇಲ್ಲಿ ಅತ್ಯಂತ ವಿಶಾಲವಾದ ಅರ್ಥದಲ್ಲಿ ತೆಗೆದುಕೊಳ್ಳ ಲಾಗಿರುವುದರಿಂದ ಮೇಲಿನ ವರ್ಗೀಕರಣವು ಪ್ರತಿವಾದಿಗಳ ಸಿದ್ಧಾಂತಗಳನ್ನು ಕೂಡ ಒಳಗೊಳ್ಳುವಂಥದಾಗಿದೆ. ಆದರೆ ನಾಗೇಶನು ಈ ವರ್ಗೀಕರಣವನ್ನು ವೈಯಾಕರಣರ ಸಿದ್ಧಾಂತವೆಂದು ಹೇಳಿಕೊಳ್ಳುತ್ತಾನೆ. ಅವನು ಸ್ಫೋಟವನ್ನು ಅರ್ಥವಾಚಕವೆಂದು ವಿವರಿಸಿ ಅದನ್ನು ವರ್ಣ, ಪದ ಹಾಗೂ ವಾಕ್ಯಗಳಿಗೆ ಅನ್ವಯಿಸಬಹುದೆನ್ನುತ್ತಾನೆ. ಮೀಮಾಂಸಕರು ವರ್ಣಗಳ ಸಮೂಹವು ಅರ್ಥವನ್ನು ಅಭಿವ್ಯಕ್ತಗೊಳಿಸುವುದು ಎನ್ನುತ್ತಾರೆ. ಈ ವಾದವನ್ನು ವೈಯಾಕರಣರು ನಿರಾಕರಿಸುತ್ತಾರೆ. ಆದರೆ ವೈಯಾಕರಣರ ಪ್ರಕಾರ ಕೆಲವು ವರ್ಣಗಳೂ ಅರ್ಥವಾಚಕಗಳಾಗಿವೆ. (ಉದಾ: ಕಾಲ ಹಾಗೂ ಲಕಾರವನ್ನು ಸೂಚಿಸುವ ಪ್ರತ್ಯಯಗಳು ಅರ್ಥವಾಚಕಗಳಾಗಿವೆ.) ಅದೇ ರೀತಿಯಲ್ಲಿ ಪದ ಮತ್ತು ವಾಕ್ಯ ಸ್ಫೋಟಗಳು ಪದ ಮತ್ತು ಅರ್ಥಗಳಿಗೆ ಅರ್ಥವಾಚಕ ಶಕ್ತಿಯನ್ನು ಹೇಳುತ್ತವೆ. ಮೇಲಿನ ೧ ರಿಂದ ೩ ರ ವರೆಗಿನ ಸ್ಫೋಟಗಳನ್ನು ಖಂಡಸ್ಫೋಟಗಳೆಂದು ಕರೆಯಲಾಗಿದೆ. ವೈಯಾಕರಣರು ೪ ಮತ್ತು ೫ ರಲ್ಲಿ ಹೇಳಿದ ಅಖಂಡಸ್ಫೋಟದತ್ತ ಒಲವುಳ್ಳವರಾಗಿದ್ದಾರೆ. ಆದರೆ ಈ ಎರಡೂ ವ್ಯಕ್ತಿಸ್ಫೋಟ ಗಳಾಗಿವೆ. ಆದ್ದರಿಂದ ೬ ರಿಂದ ೮ರ ವರೆಗಿನವುಗಳನ್ನು ವರ್ಣಜಾತಿ ಅಥವಾ ಸಾಮಾನ್ಯ ಸ್ಫೋಟ, ಪದಜಾತಿ ಸ್ಫೋಟ, ಮತ್ತು ವಾಕ್ಯಜಾತಿ ಸ್ಫೋಟ ಎನ್ನಲಾಗಿದೆ. ಈ ಎಂಟರಲ್ಲಿ ನಾಗೇಶನು ತನ್ನ 'ಲಘುಮಂಜೂಷಾ' ದಲ್ಲಿ ಅಖಂಡವಾಕ್ಯ ಸ್ಫೋಟದ ಬಗೆಗೆ ಸ್ಪಷ್ಟವಾಗಿ ಒಲವನ್ನು ತೋರಿಸಿದ್ದಾನೆ. ಅವನು ಕೇವಲ ಅಖಂಡವಾಕ್ಯ ಸ್ಫೋಟದ ಬಗೆಗೆ ಹೇಳುತ್ತಾನೋ ಅಥವಾ ಅಖಂಡವಾಕ್ಯಜಾತಿ ಸ್ಫೋಟದ ಬಗ್ಗೆ ಹೇಳುತ್ತಾನೋ ಸ್ಪಷ್ಟವಾಗುವುದಿಲ್ಲ. ಕುಂಡಭಟ್ಟನು ತನ್ನ ಸ್ಫೋಟನಿರ್ಣಯದಲ್ಲಿ ಹೀಗೆ ಸ್ಪಷ್ಟೀಕರಿಸಿದ್ದಾನೆ: ವೈಯಾಕರಣರು ಒಲವು ತೋರಿದ್ದು ಅಖಂಡವಾಕ್ಯಜಾತಿ ಸ್ಫೋಟಕ್ಕೆ ಎಂದು. ನಾಗೇಶನು ಈ ಮಾರ್ಗದಿಂದ ಭರ್ತೃಹರಿಯನ್ನು ಸಮರ್ಥಿಸಬಹುದೆಂದು ತಿಳಿದುಕೊಂಡಿರಬಹುದು.

ಸ್ಫೋಟದ ಪ್ರಮುಖವಾದ ತಾತ್ತ್ವಿಕ ಮುಖದ ಬಗ್ಗೆ ಪ್ರಸ್ತಾಪಿಸದಿದ್ದರೆ ನಮ್ಮ ವಿವರಣೆಯು ಅಪೂರ್ಣವೆನಿಸುತ್ತದೆ. ಪ್ರತಿಯೊಂದು ಚೇತನದಲ್ಲಿಯೂ ಇರುವ ಸ್ಫೋಟವು ಅಂತಿಮವಾಗಿ ಒಂದೇ ಆಗಿದೆಯೆಂದು ಹೇಳಲಾಗಿದೆ. ಮನುಷ್ಯನ ಭಾಷಿಕ ಸಾಮರ್ಥ್ಯವು ಚೈತನ್ಯದೊಂದಿಗೆ ಹೆಣೆದುಕೊಂಡಿದೆ. ವಾಸ್ತವವಾಗಿ ಭಾಷೆಯೆಂಬುದು ಚೈತನ್ಯದ 'ಸ್ಪಂದನ'. ಅಲ್ಲದೆ ಅಂತಿಮವಾದ ಶಬ್ದತತ್ತ್ವ ಮತ್ತು ಪಾರಮಾರ್ಥಿಕ ಚೈತನ್ಯ (ಬ್ರಹ್ಮ)ಗಳನ್ನು ಭಿನ್ನವಾದವುಗಳೆನ್ನುವಂತಿಲ್ಲ. ಭರ್ತೃಹರಿಯ ಪಾಲಿಗೆ ಪಾರಮಾರ್ಥಿಕ ಸತ್ಯವೆಂದರೆ ಪರಬ್ರಹ್ಮ. ಅದು ಶಬ್ದಬ್ರಹ್ಮದೊಂದಿಗೆ ಐಕ್ಯವನ್ನು ಹೊಂದಿದೆ. ಈ ಅರ್ಥದಲ್ಲಿಯೇ ಭರ್ತೃಹರಿಯು ಯಾವುದೇ ತಪ್ಪು ತಿಳುವಳಿಕೆಗೆ ಆಸ್ಪದವಾಗದಂತೆ

ವೈವಿಧ್ಯ ಮತ್ತು ವಿಭಿನ್ನತೆಗಳಿಂದ ಕೂಡಿದ ಸಮಸ್ತ ಪ್ರಪಂಚವೂ ಶಬ್ದತತ್ತ್ವವೆಂಬ ಪರತತ್ತ್ವದಿಂದ ಪ್ರಕಟಗೊಂಡಿದೆಯೆನ್ನುತ್ತಾನೆ. ಮುಂದಿನ ವೈಯಾಕರಣರು ಭಾರತೀಯ ವಿಶ್ವಶಾಸ್ತ್ರದ ಪ್ರಸಿದ್ಧ ಚರ್ಚೆಯಲ್ಲಿ ತೊಡಗುತ್ತಾರೆ: ಬ್ರಹ್ಮದಿಂದ ಹೊರಹೊಮ್ಮಿದ ಜಗತ್ತನ್ನು ಬ್ರಹ್ಮದ ಪರಿಣಾಮವೆನ್ನಬೇಕೋ ವಿವರ್ತವೆನ್ನಬೇಕೊ? ಇಲ್ಲಿ ಪರಿಣಾಮವೆಂದರೆ ನಿಜವಾದ ಬದಲಾವಣೆ. ಆಗ ಭಿನ್ನತೆಗಳೆಲ್ಲ ವಾಸ್ತವವಾಗುತ್ತವೆ. ವಿವರ್ತವೆಂದರೆ ತೋರಿಕೆಯ ಬದಲಾವಣೆ. ಹೀಗೆಂದರೆ ಭಿನ್ನತೆಗಳೆಲ್ಲ ತೋರಿಕೆಗೆ ಮಾತ್ರವೆಂದಾಗುತ್ತದೆ. ಅನೇಕ ಆಧುನಿಕ ವಿದ್ವಾಂಸರು ಸ್ಫೋಟ ಸಿದ್ಧಾಂತದ ತಾತ್ತ್ವಿಕ ಮುಖಕ್ಕೆ ಅನ್ವಯಿಸುವುದು ಪರಿಣಾಮವಾದವೋ ಅಥವಾ ವಿವರ್ತವಾದವೋ ಎಂಬ ಬಗೆಗೆ ಚರ್ಚಿಸಿದ್ದಾರೆ. ವಾಕ್ಯಪದೀಯದ ಆರಂಭದ ಶ್ಲೋಕದಲ್ಲಿ ಭರ್ತೃಹರಿಯು ಶಬ್ದತತ್ತ್ವವು ಅವ್ಯಯವೂ ಆದಿ ಅಂತ್ಯಗಳಿಲ್ಲದ್ದೂ ಆಗಿದ್ದು ಅದರಿಂದಲೇ ಪ್ರಾಪಂಚಿಕ ಕ್ರಿಯೆಗಳೆಲ್ಲ ಹೊರಹೊಮ್ಮಿವೆ; ಇದು ಪದಾರ್ಥ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ ಎನ್ನುತ್ತಾನೆ.

ನಿತ್ಯವಾದ ಸ್ಫೋಟವು ನಾವು ಕೇಳಬಹುದಾದ ಅಥವಾ ಹೇಳಬಹುದಾದ ಸ್ಥಿತಿಗೆ ಬರುವಾಗ ನಾಲ್ಕು ಹಂತದಲ್ಲಿ ಬದಲಾವಣೆಗಳು ಸಂಭವಿಸುತ್ತವೆ. (ಭರ್ತೃಹರಿಯು ಮೂರು ಹಂತಗಳನ್ನು ಮಾತ್ರ ಹೇಳುತ್ತಾನೆ. ನೋಡಿ: ಅ. ೮.) ಅವುಗಳನ್ನು ಪಾರಿಭಾಷಿಕವಾಗಿ ಪರಾ (ಅಂತಿಮ), ಪಶ್ಯಂತೀ (ವ್ಯತ್ಯಾಸವನ್ನು ತಿಳಿಯಲಾಗದ್ದು), ಮಧ್ಯಮಾ (ಮಧ್ಯಂತರದ್ದು), ವೈಖರೀ (ಮಾತಾಡಲ್ಪಟ್ಟಿದ್ದು). ಇದು ಈಚಿನ ವೈಯಾಕರಣರ ವಿಚಾರ. ಪರಾ ಹಂತದಲ್ಲಿರುವ ಶಬ್ದವು ಪರಬ್ರಹ್ಮರೂಪದ್ದೇ ಆಗಿದೆ. ತಂತ್ರಶಾಸ್ತ್ರದ ಪರಿಭಾಷೆಯನ್ನು ಬಳಸುವವರು ಇದನ್ನು ಕುಂಡಲಿನೀ ಅಥವಾ ಮೂಲಾಧಾರವೆಂದು ಕರೆಯುತ್ತಾರೆ. ಇದನ್ನು 'ನಾದ'ವೆಂದು ಕರೆಯುವುದೂ ಉಂಟು (ಇಲ್ಲಿ ನಾದವೆಂದರೆ ಕೇಳಬಹುದಾದ ಶಬ್ದವೆಂದು ತಿಳಿಯಬಾರದು). ಪಶ್ಯಂತೀ ಹಂತವನ್ನು ಸೂಕ್ಷ್ಮ ಸ್ಫೋಟವೆಂದು ಕರೆಯಲಾಗಿದೆ. ಮಧ್ಯಮಾ ಹಂತವನ್ನು ಮೌನದ ಧ್ವನಿಯೆಂದು ವರ್ಣಿಸಲಾಗಿದೆ. ನಾಲ್ಕನೆಯ ಹಂತದ್ದು ಬಾಹ್ಯಸ್ಫೋಟ. ಇದನ್ನೇ ಭಾಷೆಯೆಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಹೀಗೆ ವೈಯಾಕರಣರು ತಾತ್ತ್ವಿಕ ದೃಷ್ಟಿಯಿಂದ ಪ್ರತಿಪಾದಿಸಿದ ಸಂಗತಿಯು ಪೂಜಾವೇದಿಕೆಯನ್ನೇರಿ ನಾದೋಪಾಸನ ಎನಿಸಿಕೊಂಡಿತು. ಇದು ವೈಯಾಕರಣ, ಗಾಯಕ, ಕಲಾವಿದ, ಕವಿ ಮತ್ತು ಮಾಂತ್ರಿಕರನ್ನು ನಾದಸ್ಫೋಟದ ನೆರಳಿಗೆ ಕರೆತಂದಿತು. ಬಹುಶಃ ಅದನ್ನು ಸ್ಫೋಟವೆಂದು ಕರೆಯುವುದು ತೀರ ಭಿನ್ನವಾದ ಅರ್ಥದಲ್ಲಿ.



# ನೀನಾಸಮ್ ವರದಿಗಳು

## ನೀನಾಸಮ್ ಸಂಸ್ಕೃತಿ ಶಿಬಿರ ೨೦೦೬

ಈ ವರ್ಷದ ಸಂಸ್ಕೃತಿ ಶಿಬಿರವು ಅಕ್ಟೋಬರ್ ೧ ರಿಂದ ೭ರ ವರೆಗೆ ಒಂದು ವಾರ ಕಾಲ ನಡೆಯಿತು. 'ವಿಶ್ವಪ್ರಜ್ಞೆಯ ವಿಭಿನ್ನ ನೆಲೆಗಳು' ಎಂಬ ವಿಷಯದ ಅಡಿಯಲ್ಲಿ ಶಿಬಿರದ ಮುಖ್ಯ ಉಪನ್ಯಾಸ-ಗೋಷ್ಠಿ-ಚರ್ಚೆ-ಸಂವಾದಗಳು ನಡೆದವು. ಮೊದಲ ದಿನ ದ.ರಾ. ಬೇಂದ್ರೆಯವರ 'ನಾನು' ಕವನದ ಪ್ರಸ್ತುತಿ ಮತ್ತು ಅಕ್ಷರ ಪ್ರಕಾಶನವು ಪ್ರಕಟಿಸಿದ 'ದಿ.ಕೆ.ವಿ. ಸುಬ್ಬಣ್ಣ ನೆನಪಿನ ಮೊದಲ ಓದು ಪುಸ್ತಕಮಾಲೆ'ಯ ಮೊದಲ ಕಂತಿನ ೨೫ ಪುಸ್ತಕಗಳನ್ನು ಬಿಡುಗಡೆಗೊಳಿಸುವ ಕಾರ್ಯಕ್ರಮದೊಂದಿಗೆ ಶಿಬಿರದ ಕಾರ್ಯಕ್ರಮಗಳು ಪ್ರಾರಂಭವಾದವು. ಡಾ. ಗಿರಡ್ಡಿ ಗೋವಿಂದರಾಜ ಅವರು ಈ ಪುಸ್ತಕಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು. ಅನಂತರ ಶ್ರೀ ಕಿ.ರಂ. ನಾಗರಾಜ ಮತ್ತು ಸಮೀಕ್ ಬಂದೋಪಾಧ್ಯಾಯರು ಶಿಬಿರ-ಶೀರ್ಷಿಕೆಯ ಕುರಿತಾಗಿ ಪ್ರಸ್ತಾವನಾ ಭಾಷಣ ಮಾಡಿ ಮುಂದಿನ ಉಪನ್ಯಾಸಗಳಿಗೆ ಅನುವು ಮಾಡಿಕೊಟ್ಟರು. ಮುಂದೆ ಒಂದು ವಾರ ಕಾಲ ವಿವಿಧ ಉಪನ್ಯಾಸ-ಗೋಷ್ಠಿಗಳನ್ನು ನಡೆಸಿಕೊಟ್ಟ ಸಂಪನ್ಮೂಲ ವಿದ್ವಾಂಸರು – ಡಾ. ಆಶೀಶ್ ನಂದಿ, ಡಾ. ಚಂದ್ರಶೇಖರ ಕಂಬಾರ, ಡಾ. ರಾಜೇಂದ್ರ ಚೆನ್ನಿ, ಜಿ. ರಾಜಶೇಖರ, ಡಾ. ಸುಂದರ ಸಾರುಕ್ಕೈ, ಪ್ರೊ.ಜಿ.ಕೆ. ಗೋವಿಂದರಾವ್, ಲಕ್ಷ್ಮೀಶ ತೋಳ್ಪಾಡಿ, ಮನು ಚಕ್ರವರ್ತಿ, ಸುದೇಷ್ಣಾ ಬ್ಯಾನರ್ಜಿ, ಪ್ರಕಾಶ ಬೆಳವಾಡಿ, ರಘುನಂದನ್, ಶ್ರೀಕಾಂತ ಶಾಸ್ತ್ರಿ, ವೈದೇಹಿ, ಪ್ರತಿಭಾ ನಂದಕುಮಾರ್, ಸವಿತಾ ನಾಗಭೂಷಣ, ಡಾ. ಎಂ.ಎಸ್. ಆಶಾದೇವಿ, ಸಿಕ್ಕಿಲ್ ಗುರುಚರಣ್, ವಿವೇಕ ಶಾನಭಾಗ, ಸುಗತ ಶ್ರೀನಿವಾಸರಾಜು, ಡಾ. ಮುಜಾಫರ್ ಅಸಾದಿ, ಜಯಂತ್ ಕಾಯ್ಕಿಣಿ, ಗಿರೀಶ ಕಾಸರವಳ್ಳಿ, ಕೆ.ಎಸ್. ಪೂರ್ಣಿಮಾ ಮೊದಲಾದವರು. ಟಿ.ಪಿ. ಅಶೋಕ ಮತ್ತು ಜಶವಂತ ಜಾಧವ್ ಅವರು ಶಿಬಿರದ ಗೋಷ್ಠಿಗಳ ನಿರ್ವಹಣೆ ಮಾಡಿದರು. ಕೊನೆಯ ದಿನ ಕವಿ, ನಾಟಕಕಾರ, ಚಿಂತಕ ಶ್ರೀ ಹೆಚ್.ಎಸ್. ಶಿವಪ್ರಕಾಶ್ ಅವರು ಶಿಖರೋಪನ್ಯಾಸ ನೀಡುವ ಮೂಲಕ ಶಿಬಿರ-ಸಪ್ತಾಹದ ಕಲಾಪಗಳನ್ನು ಮುಕ್ತಾಯಗೊಳಿಸಿದರು.

ಎಂದಿನಂತೆಯೆ ಸಂಜೆಯ ಹೊತ್ತು ಶಿಬಿರಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗಿತ್ತು. ನೀನಾಸಮ್ ತಿರುಗಾಟ ೨೦೦೬ರ ಎರಡು ನಾಟಕಗಳು: 'ಬಿರುಗಾಳಿ' (ರಚನೆ: ಕುವೆಂಪು, ನಿರ್ದೇಶನ: ಅಭಿಲಾಷ್ ಪಿಳ್ಳೈ) ಮತ್ತು 'ಉಂಡಾಡಿ ಗುಂಡ' (ರಚನೆ: ಪರ್ವತವಾಣಿ, ನಿರ್ದೇಶನ:

ಇಕ್ಬಾಲ್ ಅಹಮದ್), ಪಂ. ಅಲಕಾದೇವ್ ಮಾರೋಲ್ಕರ್ ಅವರಿಂದ ಹಿಂದೂಸ್ತಾನಿ ಸಂಗೀತ, ವಿ| ಸಿಕ್ಕಿಲ್ ಗುರುಚರಣ್ ಅವರಿಂದ ಕರ್ಣಾಟಕಿ ಸಂಗೀತ, ನೀನಾಸಮ್ ತಂಡದವರಿಂದ ನಾಟಕ 'ಕ್ರಮ-ವಿಕ್ರಮ' (ಶೇಕ್ಸ್‌ಪಿಯರ್‌ನ 'ಮೆಷರ್ ಫಾರ್ ಮೆಷರ್', ಅನುವಾದ ಮತ್ತು ನಿರ್ದೇಶನ: ಅಕ್ಷರ ಕೆ.ವಿ.), ಡಾ. ಹೆಚ್.ಎಸ್. ಶಿವಪ್ರಕಾಶ್ ಮತ್ತು ಜಯಂತ ಕಾಯ್ಕಿಣಿಯವರಿಂದ ಕವಿಗೋಷ್ಠಿ, ಕುಂತೂರು ಕಾಳಶೆಟ್ಟಿ ಮತ್ತು ತಂಡದವರಿಂದ 'ಮಂಟೇಸ್ವಾಮಿ ಕಾವ್ಯ' ಗಾಯನ, ಶ್ರೀಮತಿ ಅನುರಾಧಾ ಶ್ರೀಧರ್ ಮತ್ತು ಶ್ರೀ ಶ್ರೀಧರ್‌ರಿಂದ ಭರತನಾಟ್ಯ – ಇವು ಈ ಸಾಲಿನಲ್ಲಿ ನಡೆದ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿದ್ದವು. ಈ ನಡುವೆ ಅಪರಾಹ್ನದ ಹೊತ್ತಿನಲ್ಲಿ ಸೋಲಾರಿಸ್, ಹಸೀನಾ ಮುಂತಾದ ಚಲನಚಿತ್ರಗಳ ಪ್ರದರ್ಶನಗಳು ಹಾಗೂ ಜನಮನದಾಟ ತಂಡದವರಿಂದ 'ಉಚಲ್ಯಾ' ನಾಟಕದ ಪ್ರದರ್ಶನವೂ ನಡೆದವು.

## ನೀನಾಸಮ್ ಕಾರ್ಯಕ್ರಮಗಳು

ಕಿನ್ನರ ಮೇಳ, ತುಮರಿ ತಂಡದವರು ತಮ್ಮ ಎರಡು ನಾಟಕಗಳನ್ನು – 'ಮಕ್ಕಳ ಮಾಯಾಲೋಕ' (ರಚನೆ: ಕೆ.ಜಿ. ಕೃಷ್ಣಮೂರ್ತಿ, ನಿ: ಜೀವನರಾಮ್ ಸುಳ್ಯ) ಮತ್ತು 'ಮಣ್ಣಿನ ಮನೆ' (ರಚನೆ ಮತ್ತು ನಿರ್ದೇಶನ: ಸತೀಶ ತಿಪಟೂರು) – ಇದೇ ನವೆಂಬರ್ ೧೬ ಮತ್ತು ೧೭ರಂದು ಶಿವರಾಮ ಕಾರಂತ ರಂಗಮಂದಿರದಲ್ಲಿ ಪ್ರದರ್ಶಿಸಿದರು. ಡಿಸೆಂಬರ್ ೧೭ ಮತ್ತು ೧೮ರಂದು ನೀನಾಸಮ್ ಪ್ರಯೋಗಿಸಿದ 'ಕ್ರಮ-ವಿಕ್ರಮ' ಮತ್ತು ತಿರುಗಾಟದ 'ಉಂಡಾಡಿ ಗುಂಡ' ನಾಟಕಗಳ ಮರು ಪ್ರದರ್ಶನಗಳು ನಡೆಯಲಿವೆ.

## ನೀನಾಸಮ್ ರಂಗಶಿಕ್ಷಣ ಕೇಂದ್ರ

ರಂಗ ವಿದ್ಯಾರ್ಥಿಗಳಿಗೆ ಈ ಸಾಲಿನ ಮೊದಲ ನಾಟಕವಾಗಿ ಸಿದ್ಧಪಡಿಸಿದ ಸಂಸರ 'ವಿಗಡ ವಿಕ್ರಮರಾಯ' ನಾಟಕದ ಪ್ರದರ್ಶನಗಳು ಸೆಪ್ಟೆಂಬರ್ ಎರಡನೆಯ ವಾರ ನಡೆದವು (ನಿರ್ದೇಶನ: ಚನ್ನಕೇಶವ). ಆನಂತರ ಡಾ.ಕೆ. ಶಿವರಾಮ ಕಾರಂತರ 'ಯಾರೋ ಅಂದರು' ಗೀತನಾಟಕದ ತಯಾರಿ-ತಾಲೀಮು ನಡೆಸಿ ಅಕ್ಟೋಬರ್ ಕೊನೆಯ ವಾರ ಪ್ರದರ್ಶಿಸಲಾಯಿತು (ನಿ: ಮಂಜು ಕೊಡಗು). ಭಾಸನ 'ಊರುಭಂಗ' ಮತ್ತು 'ವಾಲಿವಧಾಂಕ'ಗಳನ್ನು ಒಳಗೊಂಡಿರುವ 'ಎರಡು ಅಂತ್ಯಗಳು ಎರಡು



ಅಭಿಷೇಕಗಳು' ಎಂಬ ಪ್ರಯೋಗದ ಸಿದ್ಧತೆ ನಡೆಯುತ್ತಿದ್ದು ನವೆಂಬರ್ ಕೊನೆಯ ವಾರದಲ್ಲಿ ಇದರ ಪ್ರದರ್ಶನಗಳು ನಡೆಯಲಿವೆ (ನಿ: ರಮೇಶ ವರ್ಮ, ಕೇರಳ). ಈನಡುವೆ ವಿದ್ಯಾರ್ಥಿಗಳಿಗಾಗಿ ಎಂ.ಎಂ. ಕೃಷ್ಣಮೂರ್ತಿಯವರಿಂದ ರಂಗಬೆಳಕಿನ ಕಾರ್ಯಾಗಾರ, ಕಲ್ಲಿಕೋಟೆಯ ರಮೇಶನ್‌ರಿಂದ ಸಮರಕಲೆಯ ಕಾರ್ಯಾಗಾರಗಳು ನಡೆದವು. ಅಕ್ಟೋಬರ್‌ನಲ್ಲಿ ನಡೆದ ನೀನಾಸಮ್ ಸಂಸ್ಕೃತಿ ಶಿಬಿರದಲ್ಲಿ ಮತ್ತು ಸುವರ್ಣ ಕರ್ನಾಟಕ ದಿಬ್ಬಣದ ಹಬ್ಬದಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದರು.


ಅಕ್ಷರ ಪ್ರಕಾಶನ

**ಕೆ.ವಿ. ಸುಬ್ಬಣ್ಣ ನೆನಪಿನ ಮೊದಲ ಓದು – ಪುಸ್ತಕ ಮಾಲಿಕೆ**

ಪಂಪನ ಆದಿಪುರಾಣ ಪ್ರವೇಶ • ಜನ್ನನ ಯಶೋಧರ ಚರಿತೆ ಪ್ರವೇಶ • ವಚನಪ್ರವೇಶ • ರಾಘವಾಂಕನ ಹರಿಶ್ಚಂದ್ರಕಾವ್ಯ ಪ್ರವೇಶ • ಕುಮಾರವ್ಯಾಸನ ಕರ್ಣಾಟಭಾರತ ಕಥಾಮಂಜರಿ ಪ್ರವೇಶ • ಕುವೆಂಪು ಅವರ ಆಯ್ದ ಕವಿತೆಗಳು • ಪು.ತಿ.ನ. ಅವರ ಆಯ್ದ ಕವಿತೆಗಳು • ಕೆ.ಎಸ್. ನರಸಿಂಹಸ್ವಾಮಿ ಅವರ ಆಯ್ದ ಕವಿತೆಗಳು • ಗೋಪಾಲಕೃಷ್ಣ ಅಡಿಗ ಅವರ ಆಯ್ದ ಕವಿತೆಗಳು • ಚಂದ್ರಶೇಖರ ಕಂಬಾರ ಅವರ ಆಯ್ದ ಕವಿತೆಗಳು • ಎ.ಕೆ. ರಾಮಾನುಜನ್ ಅವರ ಆಯ್ದ ಕವಿತೆಗಳು • ಸು.ರಂ. ಎಕ್ಕುಂಡಿ ಅವರ ಆಯ್ದ ಕವಿತೆಗಳು • ಯು.ಆರ್. ಅನಂತಮೂರ್ತಿ ಅವರ ಆಯ್ದ ಕಥೆಗಳು • ಪಿ. ಲಂಕೇಶ್ ಅವರ ಆಯ್ದ ಕಥೆಗಳು • ಯಶವಂತ ಚಿತ್ತಾಲ ಅವರ ಆಯ್ದ ಕಥೆಗಳು • ಶಾಂತಿನಾಥ ದೇಸಾಯಿ ಅವರ ಆಯ್ದ ಕಥೆಗಳು • ಪೂರ್ಣಚಂದ್ರ ತೇಜಸ್ವಿ ಅವರ ಆಯ್ದ ಕಥೆಗಳು • ದೇವನೂರ ಮಹಾದೇವ ಅವರ ಆಯ್ದ ಕಥೆಗಳು • ವೈದೇಹಿ ಅವರ ಆಯ್ದ ಕಥೆಗಳು • ಶಿವರಾಮ ಕಾರಂತ ಅವರ ಆಯ್ದ ಬರಹಗಳು • ಡಿ.ವಿ.ಜಿ. ಅವರ ಆಯ್ದ ಬರಹಗಳು • ಗೌರೀಶ ಕಾಯ್ಕಿಣಿ ಅವರ ಆಯ್ದ ಬರಹಗಳು • ಕೀರ್ತಿನಾಥ ಕುರ್ತಕೋಟಿ ಅವರ ಆಯ್ದ ಬರಹಗಳು • ಬಿ.ಜಿ.ಎಲ್. ಸ್ವಾಮಿ ಅವರ ಆಯ್ದ ಬರಹಗಳು • ಡಿ.ಆರ್. ನಾಗರಾಜ್ ಅವರ ಆಯ್ದ ಬರಹಗಳು

ಆಕಾರ: ಡೆಮಿ ೧/೯, ಪುಟಗಳು: ೧೦೮, ಬೆಲೆ: ರೂ. ೭೫

# ಮಾತುಕತೆ ೮೦

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೨೬೫೬೪೬

ಖಾಸಗಿ ಪ್ರಸಾರದ ತ್ರೈ ಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಸವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಐವತ್ತು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು, ಮುದ್ರಣ: ಅಚ್ಚುಮೆಚ್ಚು, ಹೆಗ್ಗೋಡು

**ನವೆಂಬರ್ ೨೦೦೬ ವರ್ಷ ಇಪ್ಪತ್ತು ಸಂಚಿಕೆ ನಾಲ್ಕು**



೧. **ಭೂಪಟಗಳು**
ಶಂಕರನ್ ಕೃಷ್ಣ; ಕನ್ನಡಕ್ಕೆ: ಜಶವಂತ ಜಾಧವ್ ಪುಟ ೦೨

೨. **ಉಪಭೋಗವಾದ**
ಅಶೀಶ್ ನಂದಿ; ಕನ್ನಡಕ್ಕೆ: ಅಕ್ಷರ ಕೆ.ವಿ. ಪುಟ೧೩

೩. **ದಾಖಲೆಗಳು**
ವಿನಯಲಾಲ್; ಕನ್ನಡಕ್ಕೆ: ಅಕ್ಷರ ಕೆ.ವಿ. ಪುಟ ೨೨

೨. **ಕೇಶಪಾಶಪ್ರಪಂಚ – ಒಂದು ಟಿಪ್ಪಣಿ**
ನಟರಾಜ ಹೊನ್ನವಳ್ಳಿ ಪುಟ ೩೩

೩. **ಶಬ್ದ ಮತ್ತು ಜಗತ್ತು: ಸ್ಫೋಟವಿರೋಧಿಗಳು**
ಬಿ.ಕೆ. ಮತಿಲಾಲ್; ಕನ್ನಡಕ್ಕೆ: ಎಂ.ಎ. ಹೆಗಡೆ ಪುಟ ೩೭

೪. **ನೀನಾಸಮ್ ವರದಿಗಳು** ಪುಟ ೪೬



**MAATHUKATHE** NOV. 2006 (YEAR 20 ISSUE 4)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.50 (FIFTY ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**


← second cover

Third cover →

## ಅಕ್ಷರ ಪ್ರಕಾಶನ

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**


**ತೇಜಸ್ವಿ ಕಥನ** (ವಿಮರ್ಶೆ: ಟಿ.ಪಿ. ಅಶೋಕ) ರೂ. ೮೦
**ಶಿವರಾಮ ಕಾರಂತ: ಎರಡು ಅಧ್ಯಯನಗಳು** (ವಿಮರ್ಶೆ, ಟಿ.ಪಿ. ಅಶೋಕ) ರೂ. ೮೫
**ಕುವೆಂಪು ಕಾದಂಬರಿ: ಎರಡು ಅಧ್ಯಯನಗಳು** (ವಿಮರ್ಶೆ: ಟಿ.ಪಿ. ಅಶೋಕ) ರೂ. ೫೫
**ದಾವ್ ದ ಜಿಂಗ್** (ಅನುವಾದ: ಯು.ಆರ್. ಅನಂತಮೂರ್ತಿ) ರೂ. ೭೦
**ಕಲ್ಲ ಪಾರಿವಾಳಗಳ ಬೇಟ** (ಕವನಗಳು: ಎಸ್. ಮಂಜುನಾಥ್) ರೂ. ೬೦
**ಸಂಸ್ಕಾರ** (ಕಾದಂಬರಿ, ಮರುಮುದ್ರಣ: ಯು.ಅರ್, ಅನಂತಮೂರ್ತಿ) ರೂ. ೭೦
**ಭಾರತೀಪುರ** (ಕಾದಂಬರಿ, ಮರುಮುದ್ರಣ: ಯು.ಅರ್, ಅನಂತಮೂರ್ತಿ) ರೂ. ೧೧೫
**ವಿಜ್ಞಾನ-ಸಂಸ್ಕೃತಿ** (ರೊದ್ದಂ ನರಸಿಂಹ ಅವರ ಬರಹಗಳ ಅನುವಾದ
ಅನು: ಅಕ್ಷರ ಕೆ.ವಿ.) ರೂ. ೭೦
**ನಾಣೀಭಟ್ಟನ ಸ್ವರ್ಗದ ಕನಸು ಮತ್ತು ಇನ್ನೆರಡು ಮಕ್ಕಳ ನಾಟಕಗಳು**
(ಗಜಾನನ ಶರ್ಮ) ರೂ. ೭೫
**ಕ್ರೌಂಚ ಪಕ್ಷಿಗಳು** (ಕಥಾಸಂಲನ: ವೈದೇಹಿ) ರೂ. ೬೦
**ಕೆ.ವಿ. ಸುಬ್ಬಣ್ಣ ಅವರ ಆಯ್ದ ಲೇಖನಗಳು**
(ಹದಿನೈದು ಲೇಖನಗಳ ಸಂಕಲನ) ರೂ. ೧೦೦
**ಗಲಿವರಾಯಣ** (ಅನುವಾದ: ಬಿ.ಎಸ್. ವಿದ್ಯಾರಣ್ಯ) ರೂ. ೯೦
**ವಿದಿಶೆಯ ವಿದೂಷಕ** (ನಾಟಕ: ಪಠ್ಯ ಆವೃತ್ತಿ: ಕೆ.ವಿ. ಸುಬ್ಬಣ್ಣ) ರೂ. ೩೦
**ನಾಪತ್ತೆಯಾದ ಗ್ರಾಮಾಫೋನು ಮತ್ತು ಇತರ ಪ್ರಬಂಧಗಳು**
(ಎಸ್. ದಿವಾಕರ್) ರೂ. ೧೫೦
**ಹೈಬ್ರಿಡ್ ಕಥೆಗಳು** (ಆರ್ಯ) ರೂ.೬೫
**ಅಲೆಗಳಲ್ಲಿ ಅಂತರಂಗ** (ವೈದೇಹಿ ಕಥೆಗಳು ೧೯೭೯-೨೦೦೪) ರೂ ೪೦೦
**ವಿಮರ್ಶೆಯ ವಿನ್ಯಾಸ** (ವಿಮರ್ಶೆ - ಡಾ.ಸಿ.ವಿ. ಪ್ರಭುಸ್ವಾಮಿಮಠ) ರೂ ೪೦
**ಕೊನೆಯ ಬ್ರಾಹ್ಮಣ** (ತೆಲುಗು ಆತ್ಮಕಥನವೊಂದರ ಆಯ್ದ ಭಾಗಗಳ
ಅನುವಾದ ಮತ್ತು ಪರಿಚಯ - ಡಾ. ಡಿ. ವೆಂಕಟ ರಾವ್) ರೂ ೩೫
**ಸ್ತ್ರೀಮತವನುತ್ತರಿಸಲಾಗದೆ ?** (ಸಾಹಿತ್ಯ-ಸಂಸ್ಕೃತಿ ಕುರಿತ ಲೇಖನಗಳು
ಡಾ. ಎಂ.ಎಸ್. ಆಶಾದೇವಿ) ರೂ ೯೦
**ಅರಬಿ ಎಂಬ ಕಡಲು** (ಕವನಗಳು - ಹಾ.ಮ. ಕನಕ) ರೂ ೫೦
**ಅಶ್ವಮೇಧ** (ಕಾದಂಬರಿ - ಅಶೋಕ ಹೆಗಡೆ) ರೂ ೧೨೦
**ಸಾಹಿತ್ಯ ಕಥನ** (ವಿಮರ್ಶೆ- ಡಿ.ಆರ್. ನಾಗರಾಜ್) ರೂ ೨೦೦
**ಶಿಖರಸೂರ್ಯ** (ಕಾದಂಬರಿ - ಚಂದ್ರಶೇಖರ ಕಂಬಾರ) ರೂ ೨೦೦